ಇದರಿಂದ ತೊಂದರೆಯಾಗುತ್ತದೆ ಎಂದು ಅಲ್ಲಿನ ಆಯುಕ್ತರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ, ಎರಡು ತಿಂಗಳ ನಂತರ, ಅಲ್ಲಿನ ಅಧ್ಯಕ್ಷರು, ಇದಕ್ಕೆ ಪರವಾನಿಗೆ ಕೊಟ್ಟು ಇದನ್ನು ನಿವೇಶನ ಮಾಡಬಹುದೆಂದು ಹೇಳಿದ್ದಾರೆ. ಈ ಒಂದು ಗೊಂದಲದಲ್ಲಿ ಅಲ್ಲಿ ಭ್ರಷ್ಟಾಚಾರಕ್ಕೆ ಕಾರಣವಾಗಿರುತ್ತದೆ.

ಅಧ್ಯಕ್ಷರು : ತಾವು ಡೀಟೆಲ್ಸ್ ಆಗಿ ಹೇಳುವುದಕ್ಕೆ ಹೋಗಬೇಡಿ. ಸದರಿ ವಿಷಯಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಅವರಿಗೆ ಕಳುಹಿಸಿ ಕೊಡಿ. ನಿಮ್ಮ ತೊಂದರೆಯನ್ನು ಅವರು ಸಾಲ್ವ ಮಾಡುತ್ತಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ : ತಾವು ಬೇಡ ಎಂದರೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಸ್ತಾಪ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಬಹಳ ಪ್ರಮುಖವಾದಂಥ ಬೇರೆ ಬೇರೆ ವಿಷಯಗಳು ಇನ್ನೂ ಸಾಕಷ್ಟಿವೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಒಂದು ನಿಮಿಷ ಹೇಳುವುದಕ್ಕೂ ಸಹ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು : ನಾನು ಹೇಳುವುದನ್ನು ತಾವು ಕೇಳಬೇಕು.

ಶ್ರೀ ಎನ್. ಚೆಲುವರಾಯಸ್ವಾಮಿ : ಮಂಡ್ಯ ನಗರದಲ್ಲಿ ಆಗಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಸೈಟ್ ವಿತರಣೆಯಲ್ಲಿ ಆಗಿರತಕ್ಕಂಥ ಭ್ರಷ್ಟಾಚಾರದ ಬಗ್ಗೆ ತನಿಖೆ ಮಾಡಿಲಿಲ್ಲ ಆಗುತ್ತಿರುವ ಅವ್ಯವಹಾರವನ್ನು ನಿಲ್ಲಿಸಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3.30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ 3.40ಕ್ಕೆ ಪ್ರಾರಂಭಗೊಂಡಿತು ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್. ತಹಸೀಲ್ದಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

6. ನಿಯಮ - 69 ರ ಮೇರೆಗೆ ಅಲ್ಪ ಕಾಲಾವದಿ ಚರ್ಚೆ

ವಿಷಯ : ಬೆಂಗಳೂರು ಜಲಮಂಡಳಿಯನ್ನು ಖಾಸಗೀಕರಣಗೊಳಿಸುವುದರಿಂದ ಸಾರ್ಕಾರದ ಬೊಕ್ಕಸಕ್ಕೆ ಹಾಗೂ ಜನತೆಗೆ ಹೆಚ್ಚಿನ ಹೊರೆಯಾಗುವುದರ ಬಗ್ಗೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ನಾವು ಚರ್ಚಿಸಬೇಕೆಂದು ಆಪೇಕ್ಷೆಯನ್ನು ಪಟ್ಟಿದ್ದೆವು ಆದರೆ ಸಭಾಧ್ಯಕ್ಷರು ಇದನ್ನು ನಿಯಮ - 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ, ತಮಗೆ ಧನ್ಯವಾದಗಳು. ಮಾನ್ಯ ಚಂದ್ರೇಗೌಡರೆ, ನನ್ನದು ಒಂದು ವಿಚಿತ್ರವಾದ ಸ್ಥಿತಿ ನನ್ನ ದೇಹದ ಮೇಲೆ ಆರೋಗ್ಯನೋ ಆರೋಗ್ಯದ ಮೇಲೆ ದೇಹನೋ ಗೊತ್ತಿಲ್ಲ. ನನಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು ಈಗ ಅದನ್ನು ಕನ್ವರ್ಟ್ ಮಾಡಿದ್ದಾರೆ ಏಕೆಂದರೆ ಇದರ ಮೇಲೆ ಜಾಸ್ತಿ ಮಾತನಾಡಬಾರದು ಎಂದು ಇರಬಹುದು. ನಾನೂ ಕೂಡ ನಿಲುವಳಿ ಸೂಚನೆಯನ್ನು 69ಕ್ಕೆ ಕನ್‌ವರ್ಟ್ ಮಾಡಿ ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ

ಪ್ರಯತ್ನಪಡುತ್ತೇನೆ. ಭಾರತದಲ್ಲಿ ವ್ಯಾಪಾರ ಮಾಡುವ ಮುಖಾಂತರ ಇಲ್ಲಿಯ ಅಧಿಕಾರವನ್ನು ಹಿಡಿಯಬೇಕೆಂದು ಮೂರು ದೇಶಗಳು ಆವಾಗ ಪ್ರಯತ್ನವನ್ನು ಪಟ್ಟಿದ್ದವು. ಪೋರ್ಚುಗೀಸ್ ಫ್ರೆಂಚ್ ಮತ್ತು ಇಂಗ್ಲೀಷ್‌ನವರು ಆಗ ಪೋರ್ಚುಗೀಸ್ ಮತ್ತು ಫ್ರೆಂಚ್‌ನವರಿಗೆ ಅವರ ಇಷ್ಟದ ಪ್ರಕಾರ ಆವಾಗ ಆಗಲಿಲ್ಲ. ಆವತ್ತು ಸೋತ ಫ್ರೆಂಚ್ ಕಂಪನಿಗೆ ಇವತ್ತಿನ ಸರ್ಕಾರ ರೆಡ್ ಕಾರ್ಪೆಟ್ ಹಾಕುವ ಮುಖಾಂತರ ನಿಮಗೆ ಆವತ್ತು ಅಧಿಕಾರ ಸಿಕ್ಕಿರಲಿಲ್ಲ, ನೀವು ಬೆಂಗಳೂರಿಗೆ ಬನ್ನಿ ನಮ್ಮ ಜುಟ್ಟೆಲ್ಲಾ ನಿಮ್ಮ ಕೈಯಲ್ಲಿ ಕೊಡುತ್ತೇವೆ, ನೀವು ಇಲ್ಲಿಗೆ ಬಂದು ವ್ಯಾಪಾರ ಮಾಡುವ ಮುಖಾಂತರ ನಮ್ಮ ಮೇಲೆ ಅಧಿಪತ್ಯವನ್ನು ಸಾಧಿಸಿ ಎಂದು ಹೇಳುವ ಮಟ್ಟಕ್ಕೆ ಇವತ್ತಿನ ಇಲ್ಲಿನ ಸರ್ಕಾರ ಇಲ್ಲಿಗೆ ಬಂದಿದೆ. ಈ ಅನಗತ್ಯ ಔದಾರ್ಯವೇನಿದೆ ಸರ್ಕಾರದ್ದು ಅದರಿಂದ ಬೆಂಗಳೂರಿನ ಸುಮಾರು 65 ಲಕ್ಷ ಜನ ಆತಂಕದ ಕಾಲಕ್ಕೆ ಪ್ರವೇಶ ಮಾಡುವುದು ಬಹಳ ಖಚಿತ. ಖಾಸಗೀಕರಣವು ಇವತ್ತು ಒಂದು ಸರ್ಕಾರದ ಮಂತ್ರವಾಗಿಬಿಟ್ಟಿದೆ. ಯಾವುದೇ ವಿಚಾರವನ್ನು ತೆಗೆದುಕೊಂಡರೂ ಖಾಸಗೀಕರಣ ಸರ್ಕಾರದ ಕೈಯಲ್ಲಿ ಆಗುವುದಿಲ್ಲ, ಸರ್ಕಾರದ ಸಂಸ್ಥೆಗಳಿಗೆ ಯೋಗ್ಯತೆ ಕಡಿಮೆ ಎಂತಲೋ ಅಥವಾ ಸಾಕಷ್ಟು ಕ್ಷಮತೆ ಇಲ್ಲವೆಂತಲೂ ಒಟ್ಟಿನಲ್ಲಿ ಖಾಸಗೀಕರಣವು ಇವತ್ತು ಮಂತ್ರವಾಗಿದೆ. ಒಂದೇ ಪುಣ್ಯ, ಮಳೆಯು ಏತಕ್ಕೋ ಸರಿಯಾಗಿ ಬರುತ್ತಿಲ್ಲವೆಂದು, ಮಳೆ ಬರುವುದನ್ನು ಕೂಡ ಖಾಸಗೀಕರಣ ಮಾಡುವುದಕ್ಕೆ ಹೊರಟಿಲ್ಲ. ಅದಕ್ಕೊಂದು ಬಿಲ್‌ನ್ನು ತಂದು, ಮಳೆ ಬರುವುದನ್ನೂ ಕೂಡ ಖಾಸಗೀಕರಣ ಮಾಡಿ ಏಕೆಂದರೆ ಮಳೆಯು ಸರಿಯಾಗಿ ಬರುತ್ತಿಲ್ಲವಲ್ಲಾ? ಖಾಸಗಿಯವರಿಗೆ ಕೈಗೆ ಸಿಕ್ಕಿದರೆ ಮಾತ್ರ ಮಳೆ ಯಾವಾಗ ಬರಲಿಕ್ಕೆ ಸಾಧ್ಯವೋ, ಆಗ ಬರುವುದಕ್ಕೆ ಸಾಧ್ಯ, ಈ ಸರ್ಕಾರದ ಕೈಯಲ್ಲಿ ಮಳೆಯನ್ನು ಏಕೋ ಮ್ಯಾನೇಜ್ ಮಾಡುವುದಕ್ಕಾಗುತ್ತಿಲ್ಲ ಎಂದು ಸಾರ್ಕರಕ್ಕೆ ಅನ್ನಿಸಿಲ್ಲ; ಇದು ನಮ್ಮ ಪುಣ್ಯ ಇವತ್ತು ಈ ಸದನದಲ್ಲಿ ಶ್ರೀ ಸೋಮಣ್ಣನವರು ಇದ್ದಾರೆ, ಹಾಗೆಯೇ ಶ್ರೀ ರಾಮಲಿಂಗಾರೆಡ್ಡಿಯವರು ಈಗ ಸಚಿವರಾಗಿದ್ದಾರೆ, ನಾವು ಮೂವರು ಕಳೆದ 20 ವರ್ಷಗಳಿಂದ ಎರಡು ದಶಕಗಳಿಂದ ಬೆಂಗಲೂರಿನ ದೈನಂದಿನ ಜೀರನದ ಜೊತೆ ಬೆರೆತು ಅದರ ಅನುಭವವನ್ನು ಪಡೆಯುತ್ತಾ, ಬೆಳೆದುಕೊಂಡು ಬಂದಿರುವವರು ಇವತ್ತು ಬೆಂಗಳೂರು ನಗರದಲ್ಲಿ ಬಿಡಿಎ ಇದೆ, ಬಿಡಬ್ಲ್ಯೂಎಸ್‌ಎಸ್‌ಬಿ ಇದೆ, ಬಿಎಂಸಿ ಇದೆ, ಬಿಎಂಟಿಸಿ ಇದೆ ಈ ನಾಲ್ಕು ಸಂಸ್ಥೆಗಳು ಏನಿದೆ ಬೆಂಗಳೂರು ನಗರದ ದೈನಂದಿನ ಜೀವನವನ್ನು ಒಂದು ರೀತಿಯಲ್ಲಿ ನಿಯಂತ್ರಿಸುವ ಸ್ವಸ್ಥೆಗಳಾಗಿವೆ. ಇವತ್ತು ಬಿಡಿಎಗೆ ಸಾರ್ವಜನಿಕ ರಂಗದಲ್ಲಿ ಇಸ್ಟಿಟ್ಯೂಷನ್ಸ್ ಎಂದು ಏನು ಕರೆಯುತ್ತೇವೆ, ಆ ಇನ್ಸಿಟ್ಯೂಷನ್‌ಲ್ಲಿ ಒಂದು ಅಪರೂಪವಾದ ಜಾಗ ಸಿಕ್ಕಿದೆ. ಇಕ್ರಾನ್ ಎಂಬ ಒಂದು ಸಂಸ್ಥೆ ಇದನ್ನು ಗುರುತಿಸಿ ಬಿಡಿಎ ಬಹಳ ಚೆನ್ನಾಗಿ ಕೆಲಸವನ್ನು ಮಾಡುತ್ತಿದೆ, ಅದಕ್ಕೊ ಒಂದು ಸ್ಥಾನವನ್ನು ತೋರಿಸುವ ಮುಖಾಂತರ ಇವತ್ತು ಬಿಡಿಎಗೆ ಒಳ್ಳೆಯ ಜಾಗವು ಸಿಕ್ಕಿದೆ. ಇನ್ನು ಬಿಎಂಪಿ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಟಿಸಿಯನ್ನು ನೋಡಿದರೆ ಪ್ರಾಯಶಃ ಸೋಮಣ್ಣನವರು ಇದನ್ನು ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ, ಬಿಡಬ್ಲ್ಯೂಎಸ್‌ಎಸ್‌ಟಿ with all its lapses is doing wonderful service to the Bangalore citizens. 65 ಲಕ್ಷ ಜನಕ್ಕೆ ನೀರನ್ನು ಒದಗಿಸುವುದು ಹುಡುಗಾಟಿಕೆಯ ಮಾತಲ್ಲ. 65 ಲಕ್ಷ ಜನರ ಅಂಡರ್‌ಗ್ರೌಂಡ್ ವ್ಯವಸ್ಥೆ ಮ್ಯನೇಜ್ ಮಾಡುವುದು ಹುಡುಗಾಟಿಕೆ ಮಾತಲ್ಲ. ಬಿಡಬ್ಲ್ಯೂಎಸ್‌ಎಸ್‌ಬಿ ಇವತ್ತು

ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ನಾವೂ ಕೂಡ ಅದರ ಲೋಪದೋಷವನ್ನು ತೋರಿಸುವುದು, ಅದರ ಬಗ್ಗೆ ಟೀಕೆ ಮಾಡುವುದು, ಆ ಸಂದರ್ಭದಲ್ಲಿ ನಾವು ಮಾಡುತ್ತಿದ್ದೆವು. ಒಟ್ಟಾರೆ ನೋಡಬೇಕೆಂದರೆ, ಇವತ್ತು ಬಿಡಬ್ಲ್ಯೂಎಸ್ ಎಸ್‌ಬಿ 1964ನೇ ಇಸವಿಯಿಂದ ಅದು ಯಾವಾಗ ಬೋರ್ಡ್ ಆಯಿತು, ಆವತ್ತಿನಿಂದ ಇವತ್ತಿನವರೆಗೂ ಬೆಂಗಳೂರು ಜನರ ಅಗತ್ಯತೆಯನ್ನು ಗುರುತು ಕಂಡುಹಿಡಿದು ಯಾವಾಗ ತಿಪ್ಪಗೊಂಡನಹಳ್ಳಿಯ ನೀರು ಸಾಕಾಗುವುದಿಲ್ಲವೆಂದು ಗೊತ್ತಾಯಿತು, ಆಗ ಕಾವೇರಿಗೆ ಹೋಗಿ, ಕಾವೇರಿ ಮೊದಲನೆಯ ಹಂತ, ಎರಡನೇ ಹಂತ ಮೂರನೆಯ ಹಂತ, ಇವತ್ತು ಕಾವೇರಿ ನಾಲ್ಕನೆಯ ಹಂತ, ಇವತ್ತು ಅದೂ ಕೂಡ ನೀರು ಬಿಡುಗಡೆಯಾಗಿದೆ. ನನಗೆ ಬಹಳ ದುಃಖವಾಗುವಂತಹ ಅಂಶವೆಂದರೆ, ಬೆಂಗಳೂರು ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಬೆಂಗಳೂರಿನ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಇವತ್ತು ಸ್ಟೇಕ್ ಹೋಲ್ಡರ್ಸ್ ಎಂಬುದು ಬಹಳ ಸಲೀಸಾಗಿ ಉಪಯೋಗಿಸುವಂತಹ ಮಾತು ಆಗಿದೆ. Ultimately, if you go to the logical end, the eitizens are the stake-holders. ಆ ನಾಗರೀಕರನ್ನು ಗಮನಕ್ಕೆ ತೆಗೆದುಕೊಳ್ಳದೆ, ಅವರ ಕತ್ತಿಗೆ ಎಂತಹ ಹಗ್ಗ ಬಿಗಿಯುತ್ತದೆ ಮುಂದಿನ 5-8 ವರ್ಷಗಳಲ್ಲಿ ಎಂಬುದನ್ನು ಗಮನಕ್ಕೆ ತಾರದೆ ಇವತ್ತು ಬೆಂಗಳೂರು ಜಲಮಂಡಳಿಯನ್ನು ಖಾಸಗೀಕರಣ ಮಾಡಲು ಹೋಗುತ್ತಿರುವ ಒಂದು ಪ್ರಯತ್ನವೇನಿದೆ, ಆ ಪ್ರಯತ್ನ ಸರ್ಕಾರದಿಂದ ಆಗಬಾರದಾಗಿತ್ತು. ಅಕಸ್ಮಾತ್ ಆಗದಿದ್ದರೂ ಕೂಡ ಆಗುವ ರೀತಿಯಲ್ಲಿ ಅದು ಆಗಿಲ್ಲ. ಯಾವ ರೀತಿಯಲ್ಲಿ ಆಗಬೇಕಾಗಿತ್ತೋ ಆ ರೀತಿಯಲ್ಲಿ ಆಗಿಲ್ಲ. ಸರ್ಕಾರ ಎಷ್ಟು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾಗಿತ್ತೋ, ಆ ಜವಾಬ್ದಾರಿಯಿಂದ ಈ ಸರ್ಕಾರ ನಡೆದುಕೊಂಡಿಲ್ಲ. ಕಳೆದ ವರ್ಷ ಜನವರಿ 20ನೇ ತಾರೀಖು ಬೆಂಗಳೂರು ನಗರ ಶಾಸಕರ ಒಂದು ಸಭೆಯನ್ನು ಬೆಂಗಳೂರು ಜಲಮಂಡಳಿಯವರು ಕರೆದರು. ಬೆಂಗಳೂರಿನ ಎಲ್ಲಾ ಶಾಸಕರೂ ಕೂಡ ಆ ಸಭೆಯಲ್ಲಿದ್ದರು. ದಿನಾಂಕ 20-1-2001 ಸಂಜೆ 5 ಗಂಟೆಗೆ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಸಭಾಂಗಣದಲ್ಲಿ ನಗರದ ಶಾಸಕರೊಂದಿಗೆ ನಡೆದು ಸಭೆಯ ನಡವಳಿಕೆ. ಮಾನ್ಯ ಸೋಮಣ್ಣನವರು ಮೊದಲು ಮಾತನಾಡುತ್ತಾರೆ. ದಿನಪತ್ರಿಕೆಗಳಲ್ಲಿ ಉತ್ತರ ಮತ್ತು ಪಶ್ಚಿಮಭಾಗದ ನಿರ್ವಹಣೆಯನ್ನು ಫ್ರೆಂಚ್ ಖಾಸಗಿ ಕಂಪನಿಗಳಿಗೆ ವಹಿಸಿಕೊಡಲಾಗಿದೆ; ಎಂಬ ಸುದ್ದಿ ಪ್ರಕಟವಾಗಿರುವ ಬಗ್ಗೆ ಅವರು ಪ್ರಸ್ತಾಪಿಸಿ ಅದರ ಬಗ್ಗೆ ಮಾಹಿತಿಯನ್ನು ಕೋರಿದರು. ಅಲ್ಲಿಯವರೆಗೆ ನಮಗೇನೂ ಗೊತ್ತಿಲ್ಲ ಮಾನ್ಯ ಕಾನೂನು ಮಂತ್ರಿಗಳಾದ ಚಂದ್ರೇಗೌಡರೇ, ನಾವೂ ಕೂಡ ನಗರದ ಪ್ರತಿನಿಧಿಗಳು. ಬೆಂಗಳೂರಿನಲ್ಲಿ ಅಕಸ್ಮಾತ್ ನೀರು ಬರುವುದು ನಿಂತುಹೋದರೆ ಜನರು ನಮ್ಮ ಕಡೆ ಓಡಿ ಬರುತ್ತಾರೆ. ಫೋನ್ ಮಾಡುತ್ತಾರೆ, ನಮ್ಮನ್ನು ಕರೆದುಕೊಂಡು ಹೋಗುತ್ತಾರೆ. ನಮಗೇನು ಕೂಡ ಗೊತ್ತಿಲ್ಲ. You may say that you are ignorant, but we were innocent. ನಮಗೇನೂ ಕೂಡ ಗೊತ್ತಿಲ್ಲ. ಸೋಮಣ್ಣನವರು ಕೇಳಿದರು. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಿದೇಶಿ ಸಂಸ್ಥೆಗಳಿಗೆ ಬಹಳ ಸೂಕ್ಷ್ಮವಾದ ನೀರು ಸರಬರಾಜು ವ್ಯವಸ್ಥೆಯನ್ನು ವಹಿಸಿಕೊಟ್ಟರೆ ಮುಂದೆ ನಗರದ ಹಿತಕ್ಕೆ ತೊಂದರೆಯುಂಟಾಗಬಹುದು. ಅಲ್ಲದೆ ಜಲಮಂಡಳಿ ಒಂದು ಸೇವಾ ಸಂಸ್ಥೆಯಾಗಿದೆ. It is not a profit organisation. It is a service organisation. ಜಲಮಂಡಳಿ ಒಂದು ಸೇವಾ ಸಂಸ್ಥೆಯಾಗಿದ್ದು ಅದನ್ನು ಖಾಸಗೀಕರಣ ಮಾಡಿ ಲಾಭಗಳಿಸುವ ಯೋಚನೆ ಮಾಡುವ ಅಗತ್ಯವೇನಿದೆ ಎಂದು ಪ್ರಶ್ನಿಸಿದರು.Is it not

relevant? ಈ ರೀತಿಯ ಒಂದು ಪ್ರಶ್ನೆ ಕೇಳುವುದು, is it not relevant? ಖಾಸಗೀಕರಣದ ಚರ್ಚೆಯನ್ನು ಮುಂದುವರಿಸಿ ಉತ್ತರ ಮತ್ತು ಪಶ್ಚಿಮಭಾಗದ ಉಸ್ತುವಾರಿಯನ್ನು ಖಾಸಗಿ ಕಂಪನಿಗಳಿಗೆ ಕೊಡಲಾಗಿದೆಯೇ? ಹಾಗೂ ನಗರಕ್ಕೆ 500ಎಂಎಲ್‌ಡಿ ನೀರು ತರುವ ನೀರು ಸರಬರಾಜು ಯೋಜನೆಯನ್ನು ಬೂಟ್ ಆಧಾರದ ಮೇಲೆ ಬೈವಾಟರ್ ಸಂಸ್ಥೆಗೆ ವಹಿಸಲು ದಿನಾಂಕ 19-1-2001 ರ ಮಂಡಳಿ ಸಭೆಯಲ್ಲಿ ನಿರ್ಣಯ ಮಾಡಲಾಗಿದೆಯೇ ಎಂದು ಹೇಳಿದರು. ಇಷ್ಟನ್ನು ಸೋಮಣ್ಣನವರು ನಾವು ಕೇಳಿದ್ದೆವು. ಜಲಮಂಡಳಿಯ ಅಧ್ಯಕ್ಷರು ಈ ಬಗ್ಗೆ ವಿವರಣೆ ನೀಡಿ ಎರಡು ಫ್ರೆಂಚ್ ಕಂಪನಿಗಳೊಂದಿಗೆ ನಗರದ ಪ್ರಸ್ತುತ ನೀರು ಸರಬರಾಜು ಮತ್ತು ಒಳಚರಂಡಿ ಸೇವೆಗಳ ಬಗ್ಗೆ ಎಲ್ಲಾ ರೀತಿಯ ವಿವರಗಳ ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೆಪ್ಟೆಂಬರ್ 2000ದಲ್ಲಿ ಎಂಒಯು ಗೆ ಸಹಿ ಮಾಡಲಾಗಿದೆ. ಸೆಪ್ಟೆಂಬರ್, ಅಕ್ಟೋಬರ್, ನರೆಂಬರ್, ಡಿಸೆಂಬರ್ ಹಾಗೂ ಜನವರಿ ಐದು ತಿಂಗಳು ನಮಗೇನೂ ಕೂಡ ಗೊತ್ತಿಲ್ಲ.We are in January, 2001. ನಾವೂ ಕೂಡ ಶಾಸಕರೇ, ನಮಗೆ ಹಿಂದೆ ಮುಂದೆ ಏನೂ ಕೂಡ ಗೊತ್ತಿಲ್ಲ. ಅವರು ಹೇಳುತ್ತಾರೆ ಸೆಪ್ಟೆಂಬರ್ 2000ದಲ್ಲಿ ಎಂಒಯುಗೆ ಸಹಿ ಮಾಡಲಾಗಿದೆ ಎಂದು ಉದ್ದೇಶಿತ ಖಾಸಗಿ ಸಹಭಾಗಿತ್ವ ಮೂರು ಘಟ್ಟಗಳಲ್ಲಿ ಇದ್ದು ಮೊದಲನೆಯದಾಗಿ ಪ್ರಸ್ತುತ ಪರಿಸ್ಥಿತಿಯ ಅಧ್ಯಯನ. ಎರಡನೆಯ ಘಟ್ಟದಲ್ಲಿದ್ದು ಐದು ವರ್ಷಗಳ ಡೆಲಿಗೇಟೆಡ್ ಮ್ಯಾನೇಜ್‌ಮೆಂಟ್ ಹೊಂದಿರುತ್ತದೆ. ಈ ಎರಡೂ ಘಟ್ಟಗಳಲ್ಲಿ ಸೇವಾ ಸುಧಾರಣೆ ಹಾಗೂ ಆದಾಯದಲ್ಲಿ ಹೆಚ್ಚಳ ಕಂಡು ಬಂದರೆ ಮಾತ್ರ, ಮೂರನೆಯ ಘಟ್ಟದ ಖಾಸಗಿ ಸಂಸ್ಥೆಯಿಂದ ನಿರ್ವಹಣೆಯ ಬಗ್ಗೆ ಅಂತರರಾಷ್ಟ್ರೀಯ ಟೆಂಡರ್ ಕರೆಯಲಾಗುವುದು. ಪ್ರಸ್ತುತ ಈ ಎರಡೂ ಸಂಸ್ಥೆಗಳೂ ಪರಿಸ್ಥಿತಿಯ ಅಧ್ಯಯನ ಮಾಡುತ್ತಿದ್ದು ಕೆಲವು ವಿಷಯಗಳ ಬಗ್ಗೆ ಭಾಗಶಃ ಮಾಹಿತಿಯನ್ನು ಮಂಡಳಿಗೆ ನೀಡಿವೆಯೆಂದು ತಿಳಿಸಿದರು. ಆಮೇಲೆ ಮುಂದೆ ನಾವು ಬೈವಾಟರ್ ಸಂಸ್ಥೆಗೆ ಕೊಟ್ಟಿಲ್ಲವೆಂದು ಹೇಳಿ, ಬಹಳ ಮುಖ್ಯವಾದುದೆಂದರೆ, ಇಂತಹ ಮುಖ್ಯ ವಿಷಯಗಳನ್ನು ಈ ರೀತಿಯ ಸಭೆಗಳಲ್ಲಿ ಶಾಸಕರೊಂದಿಗೆ ಸಮಾಲೋಚಿಸುವುದಾಗಿ ತಿಳಿಸಿದರು. Is it not a commitment? ನಾವು ಕೇಳಿದೆವು ಕೊಟ್ಟಿದ್ದೀರಾ ಸ್ವಾಮಿ ಅಂತ. ಹೌದು ಕೊಟ್ಟಿದ್ದೇವೆಂದು ಅನೌನ್ಸ್ ಮಾಡುತ್ತಾ ಇನ್ನು ಮೇಲೆ ಇಂತಹ ಯಾವುದೇ ಗಂಭೀರವಾದ ವಿಚಾರವಿದ್ದರೂ ಕೂಡ ಬೆಂಗಳೂರಿನ ಶಾಸಕರ ಜೊತೆ ಸಮಾಲೋಚಿಸುವುದಾಗಿ ತಿಳಿಸಿದರು. ಅದು ಆದಮೇಲೆ ಖಾಸಗೀಕರಣಕ್ಕೆ ನಗರದ ಎಲ್ಲಾ ಶಾಸಕರ ವಿರೋಧವಿದೆ. ಆದರೆ ಈಗ ಇರುವ ವ್ಯವಸ್ಥೆಯನ್ನು ಖಾಸಗೀಕರಣ ಮಾಡದೆ ಮಂಡಳಿಯೇ ಉತ್ತಮಪಡಿಸಬೇಕೆಂದು ಶಾಸಕರು ಆಗ್ರಹಪಡಿಸಿದರು. ನಮ್ಮ ಪರಿಸ್ಥಿತಿಯನ್ನು ಲೆಕ್ಕಾಹಕಿ. ನಾವು ಅಧ್ಯಕ್ಷರನ್ನು ಬೇಡಿಕೊಳ್ಳಬೇಕು. ದಯವಿಟ್ಟು ವಿದೇಶಿ ಕಂಪನಿಗಳೊಂದಿಗೆ ಮಾಡಿಕೊಳ್ಳಲಾದ ಎಂಒಯು ಪ್ರತಿಗಳನ್ನು ಎಲ್ಲಾ ಶಾಸಕರಿಗೆ ನೀಡಬೇಕೆಂದು ಕೋರಿದರು. ಇದು ನಾವು ಕೋರುವುದು. ಕೋರಿದ ಮೇಲೆ ನಮಗೆ ಈ ಎಂಒಯು ಕಾಪಿಗಳನ್ನು ಕಳುಹಿಸಿದರು. ನಾವು ಕೇಳದಿದ್ದರೆ ಆ ಸಭೆ ಕರೆಯದಿದ್ದರೆ ಇವತ್ತಿನವರೆಗೂ ನಮಗೆ ಗೊತ್ತಾಗುತ್ತಿರಲಿಲ್ಲ. ಬೈ ಚಾನ್ಸ್ ಆರ್ ಬೈ ಮಿಸ್ಟೇಕ್ ನಮ್ಮನ್ನು ಮೀಟಿಂಗ್‌ಗೆ ಕರೆದರು. ಆ ಮೀಟಿಂಗ್‌ನಲ್ಲಿ ನಾವು ಕೇಳಿಬಿಟ್ಟೆವು ಅದರಿಂದ ಈ ಎಂಒಯು ಕಾಪಿ ನಮಗೆ ಸಿಕ್ಕಿದೆ. ಟ್ರಾನ್ಸ್‌ಪರೆಂಟ್ ಸರ್ಕಾರ ಪಾರದರ್ಶಕ ಸರ್ಕಾರ ನಾವು ಕೇಳಿದ್ದೇವೆ ಸೆಪ್ಟೆಂಬರ್‌ನಲ್ಲಿ ಸಭೆ ಕರೆಯಬಹುದಾಗಿತ್ತು. ತಾನೇ ನಮಗೆ ತಿಳಿಸಬಹುದಾಗಿತ್ತು ತಾನೇ ಏತಕ್ಕೆ ಎಂದು ನಾನು ಹೇಳುತ್ತೇನೆ. ಫ್ರೆಂಚ್ ಕಂಪನಿಗಳ

ಹಾಗೂ ಮಂಡಳಿ ನಡುವಿನ ಒಪ್ಪಂದದ ಪತ್ರಗಳನ್ನು ಇರಿಸಿ ತಮ್ಮ ಅವಗಾಹನೆಗೆ ಕಳುಹಿಸಿ ಕೊಡುತ್ತಿದ್ದೇನೆಂದು ಎಲ್ಲರಿಗೂ ಕೊಟ್ಟರು. ಮೆಮೋರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್ ಯಾರ್‍ಯಾರಿಗೆ (1) ಬೆಂಗಳೂರು ವಾಟರ್‌ಸಪ್ಲೈ ಸಿವಿರೇಜ್ ಬೋರ್ಡ್ ಇನ್ನೊಂದು ಸುವರೇಜ್ ಅರ್ಥವಾಗುತ್ತದೆ. ಎಸ್‌ಯುಇಜಡ್ ಎಲ್‌ರೈ ಒಎನ್‌ಎನ್ ಐಎಸ್‌ಇ ಅದನ್ನು ಲಯನ್ನೈಸ್ ಎಂದು ಕರೆಯಬೇಕಾ ಫ್ರೆಂಚ್‌ವರ್ಡ್ ನನಗೆ ಗೊತ್ತಾಗುವುದಿಲ್ಲ. ಎಲ್ ಸೈಲೆಂಟೊ ಅದು ಏನು ನನಗೆ ಗೊತ್ತಾಗುವುದಿಲ್ಲ. Suez Lyonnaise Deys Yokes- registered on the Nanterate Trade and Cox. registered under... France, Registered Office at No. 72, avenue D, LA, Liberten.... ಇದು ಚೆನ್ನಾಗಿದೆಯಲ್ಲಾ, ಅದಕ್ಕೊಂದು ಸಬ್ಸಿಡರೈಸ್ ಕಂಪನಿ. ಅದು ಕಂಪನಿಯಲ್ಲ ಸಬ್ಸಿಡರೈಸ್ ಕಂಪನಿ Northembrian Water Group PIC ಅದು ಅಬ್ರೆವಿಯೇಷನ್ NWG ಎಂದು ನಾವು ಕರೆಯೋಣ. ಎರಡನೆಯ ಕಂಪನಿ Vivendi Environment, registered on the paris trade company ಅದೂ ಕೂಡ ಫ್ರೆಂಚ್ ಕಂಪನಿ Vivendi water UK PLC ಅದಕ್ಕೊಂದು ಸಬ್ಸಿಡಿಯರಿ ಈ ಕಂಪನಿಗಳೊಂದಿಗೆ ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್ ನಾವು ಬಂದಿದ್ದೇವೆಂದು ತಿಳಿಸಿದರು. ಹಾಗೆ ತಿಳಿಸುತ್ತಾ, Therefore, it is hereby agreed as follows:- ಮೂರನೆಯ ಪ್ಯಾರಾ ಓದುತ್ತೇನೆ The first phase will commence from the date of this MOU. ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಗಬೇಕಿತ್ತು. The first phase will commence from the date of this mou and last upto 6 months ನಾವು ಸಭೆಗೆ ಹೋಗಿದ್ದು ಸೆಪ್ಟೆಂಬರ್‌ನಲ್ಲಿ ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿ ಆಗಿಬಿಡಬೇಕಾಗಿತ್ತು. ಆರು ತಿಂಗಳು Extendable by mutual agreement. NWG and BWSSB will assemble their team to carry out studies and investigations at their costs and complete with due diligence, ಎಂದು ಹೇಳಿದರು. ಈ ಎಂಒಯು ಯಾರ ಸಮಾಧಾನಕ್ಕೋಸ್ಕರ ಮಾಡಿದರು ಎನ್ನುವ ಪ್ರಶ್ನೆ ಬರುತ್ತದೆ. ನನ್ನ ಹತ್ತಿರ ಒಂದು ಬಿಡಬ್ಲ್ಯೂಎಸ್‌ಎಸ್‌ಬಿ ರಿಪೋರ್ಟ್ ಇದೆ In which principal secretary, Urban Development was also present. ಅವರೇ ಹೇಳುತ್ತಾರೆ.

"After several deliberations with BWSSB management the consultants recommended the proposals of made by M/s. Vivendi waters and NWL. The validity period of MOU was for a period of six months, which is also completed and they have sought additional time of another six monthss for the validity of MoU." ಎಂಒಯು ಆರು ತಿಂಗಳು ಒಳಗಡೆ ಅವರು ಮಾಡಲಿಲ್ಲ. ಇನ್ನೂ ಆರು ತಿಂಗಳು ತೆಗೆದುಕೊಂಡರು . ಬಹಳ ಸತ್ಯಾಂಶವೆಂದರೆ ಆ ವಿವೆಂಡಿ ಸಂಸ್ಥೆಯುವರು ಕೊನೆಗೂ ಕೂಡ ತಾವು ಮಾಡಿದ ಅಧ್ಯಯನ ರಿಪೋರ್ಟ್ ಬಿಡಬ್ಲ್ಯೂಎಸ್‌ಎಸ್‌ಬಿಗೆ ಕೊಡಲಿಲ್ಲ. They did not give ಅದಕ್ಕೆ ಬದಲು ಇನ್ನೊಂದು ಯಾವುದೋ ಕೆಪಿಎಂಜಿ ಎಂದು ಇತ್ತು. ಆ ಸಂಸ್ಥೆಯ ರಿಪೋರ್ಟ್ ತೆಗೆದುಕೊಂಡು ಇದು ನಮ್ಮ ರಿಪೋರ್ಟ್ ಎಂದು ಇಟ್ಟರು. ಇದು ನಿಮ್ಮ ಎಂಒಯು ಪೂರ್ತಿ ಅನುಷ್ಠಾನಕ್ಕೆ ಬರುವುದಕ್ಕೆ

ಮುಂದೆ ನಿಮ್ಮನ್ನು ಎಷ್ಟು ತಿರಸ್ಕಾರವಾಗಿ ಕಾಣುತ್ತಾರೆ ಈ ವಿದೇಶಿ ಸಂಸ್ಥೆಯವರು ಎನ್ನುವುದಕ್ಕೆ ಇದೊಂದು ಸಾಕ್ಷಿ ಅಷ್ಟೆ. ಇದು ಒಂದು ನಮೂನೆ ಇದಾದಮೇಲೆ ದಿನಾಂಕ 11.4.2001 ರಂದು ಬಿ.ಡಬ್ಲ್ಯೂ ಎಸ್.ಎಸ್.ಬಿ.ಯ ಒಬ್ಬ ಚೀಫ್ ಇಂಜಿನಿಯರ್ ಅವರು ಒಂದು ಪ್ರೆಸ್‌ಗೆ ಇಂಟರ್‌ವ್ಯೂ ಕೊಡುತ್ತಾರೆ "For the first time in the country, drinking water will be privatised." ಭಾರಿ ಸಾಹಸ ಇಡೀ ದೇಶದಲ್ಲಿ ಯಾರೂ ಮಾಡದೇ ಇರುವ ಸಾಹಸವನ್ನು ನಾವು ಮಾಡುತ್ತಿದ್ದೇವೆ ಎಂದು ಅವರು ಹೇಳಿಕೊಂಡರು For the first time in the country drinking water supply will be privatised and bangalore will lead the way". ಇದು ಯಾವ ಪುರುಷಾರ್ಥಕ್ಕೆ? ಅವರು ಕೊನೆಗೆ ಅನೇಕ ಸಂಗತಿಗಳನ್ನು ಹೇಳುತ್ತಾರೆ 'The finacial aspects have not yet been finanlised'. Adding that everything will be completed in a week's time'. ಒಂದು ವಾರದಲ್ಲಿ ಎಲ್ಲಾ ಮುಗಿಸಿಬಿಡುತ್ತೇವೆ ಎಂದು ಹೇಳುತ್ತಾರೆ. ಯಾರನ್ನು ಮೋಸ ಮಾಡಲಿಕ್ಕೆ, ಯಾರ ಕಣ್ಣಿಗೆ ಮಂಕುಬೂದಿ ಎರಚುವುದಕ್ಕೆ ಈ ಕೆಲಸಗಳು ಆಗುತ್ತಿವೆ ಎನ್ನುವುದು ಒಂದು ಪ್ರಶ್ನೆ. ಅಂದರೆ ನಾವು ಬಿ. ಡಬ್ಲ್ಯೂ.ಎಸ್.ಎಸ್. ಬಿ ಮೀಟಿಂಗ್‌ನಲ್ಲಿ ದಯವಿಟ್ಟು ಎಂ.ಒ.ಯು. ಕೊಡಿ ಎಂದು ನಾವು ಬೇಡಿಕೊಳ್ಳಬೇಕು. ಅವರು ಕೊಟ್ಟರೆ ಓದಬೇಕು. ಇಲ್ಲದಿದ್ದರೆ ಪೇಪರ್‌ನಲ್ಲಿ ಬಂದರೆ ಓದಿಕೊಳ್ಳಿ ಎನ್ನುತ್ತಾರೆ. ಇದು ಯಾವ ರೀತಿಯ ನಿರ್ಧಾರ ಅವರದ್ದು ಎಂದು ಪ್ರಶ್ನೆ ಬರುತ್ತದೆ. ಅದಾದಮೇಲೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ನಲ್ಲಿ - ಇದು ಪ್ರಾಯಶಃ ಚಂದ್ರೇಗೌಡರಿಗೆ ಗೊತ್ತಿರಲಿಕ್ಕಿಲ್ಲ. ಅಲ್ಲಿ ಒಂದು ಟಾಸ್ಕ್‌ಗ್ರೂಪ್ ಮಾಡಿದರು. Presentation by Task Group to I.T. institutional workshop ಅಂತ ಈ ಟಾಸ್ಕ್‌ಗ್ರೂಪ್‌ನ ಕೆಲಸ ಏನಿತ್ತು ಎಂದರೆ P.S.P. Capability - ಪಿ.ಎಸ್.ಪಿ. ಎಂದರೆ Private Sector Participation. ಆದ್ದರಿಂದ ಇದು ಒಂದು ಟೀಮ್, ಇಲ್ಲಿರುವವರೆಲ್ಲಾ ಬಿ. ಡಬ್ಲ್ಯೂ ಎಸ್‌ಎಸ್.ಬಿ. ಯವರೇ ಅಡಿಶನಲ್ ಚೀಫ್ ಇಂಜಿನಿಯರ್, ಚೀಫ್ ಅಕೌಂಟ್ಸ್ ಆಫೀಸರ್ ಅಡಿಷನಲ್ ಚೀಫ್ ಇಂಜಿನಿಯರ್, ಎಲ್ಲರೂ ಸೇರಿಕೊಂಡು ಒಂದು ಟಾಸ್ಕ್‌ಫೋರ್ಸ್ ಮಾಡಿ ಒಂದು P.S.P. Capability ಬಗ್ಗೆ ಒಂದು ಪ್ರೆಸೆಂಟೇಷನ್ ಬಿ.ಡಬ್ಲ್ಯೂ.ಎಸ್.ಎಸ್. ಬಿ ಬೋರ್ಡಿಗೆ ಮಾಡಿದರು. ಅವರು ಹಾಗೆ ಮಾಡುವಾಗ ಮನಿಲಾ ದೇಶದ ಉದಾಹರಣೆಯನ್ನು ತೆಗೆದುಕೊಂಡರು. They took Maila as a sample, ಬೆಂಗಳೂರಿಗೆ ಏನೋ ಈಕ್ವಲೆಂಟು ಎಂದು ಆದಾದಮೇಲೆ ಬ್ಯುನಸ್ ಏರೀಕ್ ದೇಶದ ಉದಾಹರಣೆ ಮಿನಲಾ ಮತ್ತು ಬ್ಯೂನಸ್‌ನ ವರೀಸ್ ಎರಡೂ ಕಾಪೇರ್ ಮಾಡಿದ ಮೇಲೆ ಎಲ್ಲಿ ಖಾಸಗೀಕರಣ ಆಗಿದೆ ಎಂದು ಅದಾದ ಮೇಲೆ ಟಾಸ್ಕ್‌ಫೋರ್ಸ್ ರೆಕಮೆಂಡೇಷನ್ ಕೊಡುತ್ತದೆ. "The Board is facing financial stringency." These are the wordings of the Task Force. "the Board is not in a position to finance any P.S.P Companies for their involvement in the activities of the Board. ನಾವಂತೂ ಹಣ ಕೊಡುವುದಕ್ಕೆ ಆಗುವುದಿಲ್ಲವೆಂದು ಟಾಸ್ಕ್‌ಫೋರ್ಸ್ ಬಹಳ ಕ್ಲಿಯರ್ ಆಗಿ ಹೇಳಿತು. "Even in the field of O&M (operation & maintenance) So the Companies have to participate with their own capital investment. ನೀವು ದುಡ್ಡು ತನ್ನಿ, ನೀವು ಹಾಕಿ. and has to bring their commitment as per the

agreement within the stipurated period. If the P.S.P is found successful, then only the Board will make payment for the companies. ನಮ್ಮ ಹತ್ತಿರ ದುಡ್ಡಿಲ್ಲ, ನೀವು ತೆಗೆದುಕೊಂಡು ಬಂದು ಇನ್ವೆಸ್ಟ್‌ಮಾಡಿ. ನಿಮ್ಮದು ಏನಾದರೂ ಯಶಸ್ವಿಯಾದರೆ ನಾವು ಪೇಮೆಂಟ್ ಮಾಡೋಣ, To start with, the P.S.P. can be identified in the field of meter reading and revenue billing and collections ಇಗನ್ನು ಮಾಡಿದ್ದರೆ ಯಾರದ್ದೂ ಅಭ್ಯಂತರ ಇರುತ್ತಿರಲಿಲ್ಲ. The P.S.P can be involved to construct sewerage treatment plants. ಅವರೇ ಒಂದು ಸೀವರೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಮಾಡಿ ಪ್ರೈಮರಿ, ಸೆಕೆಂಡರಿ, tertiary ಮಾಡಿ ಕೆಲಸ ಮಾಡಿ ಎಂದಿದ್ದರೆ ಚೆನ್ನಾಗಿ ಇರುತ್ತಿತ್ತು. both secondary and teritary treatment of sewerage incliding O&M plants, ಅಂತ ಹೇಳಿದ್ದು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮಾಡಿದ ಒಂದು ಟಾಸ್ಕ್‌ಫೋರ್ಸ್‌ನ ರಿಪೋರ್ಟ್‌ನಲ್ಲಿ A genuine report after studying Manila. Buneous Aires and they have come to a conculusion ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯಲ್ಲಿ ಇದು ಅಗತ್ಯವಿಲ್ಲವೆಂದು ಅವರು ಮಾಡಿದರು. ಆದರೆ ಸರ್ಕಾರಕ್ಕೆ ಇದು ಯಾವುದೂ ಕೂಡ ಲೆಕ್ಕಾಚಾರಕ್ಕೆ ಬರಲಿಲ್ಲ. ನಮ್ಮದು ಖಾಸಗೀಕರಣದ ಒಂದು ಕಮಿಟ್‌ಮೆಂಟ್ ಇದೆ, ಆ ಪ್ರಕಾರ ನಾವು ಮಾಡಿಯೇ ಮಾಡುತ್ತೇವೆ. come what may ಕತಾರಿವೀರ. ಅಂದರೆ ಯಾರನ್ನಾದರೂ ಕೂಡ ನಾವು ಎದುರಿಸುತ್ತೇವೆ ಅಂತ. ಆದ್ದರಿಂದ ಟಾಸ್ಕ್ ಫೋರ್ಸ್ ಇರಲಿ ಅಥವಾ ಈ ಎಂ.ಓ.ಯು. ಮುರಿದುಬಿದ್ದಿರಲಿ, ನಾವು ಮಾಡುವ ಕೆಲಸವನ್ನು ನಾವು ಮಾಡುತ್ತೇವೆ ಎಂದು ದಿನಾಂಕ 11.7.2000 ರಂದು ತರಾತುರಿಯಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿಯೇಬಿಟ್ಟರು. ನಮ್ಮ ಅಧಿವೇಶನ ಪ್ರಾರಂಭ ಆಗಿದ್ದು 8.7.2002 ರಂದು. 11.7.2002 ರಂದು ಸರ್ಕಾರಿ ಆಜ್ಞೆಯಾಗಿದೆ. ನಮಗೆ ಬಿ. ಡಬ್ಲ್ಯೂ.ಎಸ್.ಎಸ್. ಚೇರ್ಮನ್ ಅವರು ಹೇಳಿದ್ದು ಏನು? ಇವರಿಬ್ಬರಿಗೆ ಕೊಟ್ಟಿದ್ದೇವೆ ಅವರು ಫೀಲ್ಡ್‌ಸ್ಟಡಿ ಮಾಡಿ ನಮಗೆ ಒಂದು ವರದಿಯನ್ನು ಕೊಡುತ್ತಾರೆ. ಆ ವರದಿಯನ್ನು ಕೂಡ ನಿಮ್ಮ ಜೊತೆಯಲ್ಲಿ ಸಮಾಲೋಚಿಸುತ್ತೇವೆ, ನಿಮ್ಮ ಗಮನಕ್ಕೆ ತರುತ್ತೇವೆ. ಆ ಮೇಲೆ ನಿಮಗೆ ವಿಷ ಕೊಡುವುದು ಅಥವಾ ನೇಣಿಗೆ ಹಗ್ಗ ಕೊಡುವುದು ಅದನ್ನು ಯೋಚನೆ ಮಾಡುತ್ತೇವೆ ಎಂದು ಹೇಳಿದರು. ನಮ್ಮನ್ನು ವಿಚಾರಿಸಲೇ ಇಲ್ಲ. ಗವರ್ನಮೆಂಟ್ ಆರ್ಡರ್ ಆಗಿದೆ. ನಂ. ಯು.ಡಿ.ಡಿ. 86 ಎಂ.ಎಲ್.ಎಲ್. 2000 ಬೆಂಗಳೂರು ದಿನಾಂಕ 11.7.2002. "Government is plesed to accord approval in principle, to permit B.W.S.S.B. to go ahead." ನಿಮಗೆ ಬಹಳ ಕುತೂಹಲ ನಾವು ಮಿಸ್ಟೇಕ್ ಮಾಡಿಬಿಡುತ್ತೇವೆ ಅಂತ. "..to go ahead with negotiations with the two operators in accordance with the M.O.U entered into with N.W.G and Vivendi Water." ಅಂತ ಆರ್ಡರ್ ಮಾಡುತ್ತಾ ನೆಗೋಷಿಯೇಷನ್ ಏನೇನು ಮಾಡಬಹುದು ಅದು ಅವರು ಯಾವ ರೀತಿ ಕೆಲಸ ಮಾಡಬೇಕು ಅನ್ನುವುದು ಅಲ್ಲ. ಆ ರೇಟು ಏನಿದೆ ಅದರಲ್ಲಿ ಎಷ್ಟು ಪರ್ಸೆಂಟ್ ನಾವು ಕಡಿಮೆ ಮಾಡಬಹುದು, ಅದಕ್ಕೆ ಮಾತ್ರ ನೆಗೋಶಿಯೇಷನ್ ಮಾಡಿ ಎಂದು ಮುಂದೆ ಹೇಳಿದ್ದಾರೆ.

"... Completion of negotiations and submit its report within the period of three months; to bring down the operator's fee to as low a figure as possible." -

ಇದು ನೆಗೋಶಿಯೇಶನ್ ಮಾಡಿದ್ದು, ಯಾವುದಕ್ಕೆ ನೆಗೋಶಿಯೇಷನ್ ಮಾಡಬೇಕೆಂದು ಸರ್ಕಾರಿ ಆಜ್ಞೆಯಲ್ಲಿ ಡೈರೆಕ್ಷನ್ ಕೊಟ್ಟರು. ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಬೆಂಗಳೂರು ನಗರಕ್ಕೆ ಅನುಕೂಲ ಆಗದೇ ಇದ್ದರೂ ಕೂಡ ಬೆಂಗಳೂರಿನ ನಾಗರೀಕರಿಗೆ ಹಿತಕರ ಇಲ್ಲದಿದ್ದರೂ ಕೂಡ, ಬೆಂಗಳೂರು ನಗರದ ಶಾಸಕರು ತಮ್ಮ ಅಭಿಪ್ರಾಯವನ್ನು, ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರೂ ಕೂಡ- Without giving an audience, ಈ ರೀತಿ ಗವರ್ನಮೆಂಟ್ ಆರ್ಡರ್ ಮಾಡಿ ಬೆಂಗಳೂರಿನ ಶಾಸಕರ, ಬೆಂಗಳೂರು ನಗರಪಾಲಿಕೆ ಮೂಲಕ ಇಡೀ ಬೆಂಗಳೂರು ನಗರದ ನಾಗರಿಕರನ್ನು ಕತ್ತಲಲ್ಲಿ ಇಷ್ಟು ಈ ಒಂದು ಗವರ್ನ್‌ಮೆಂಟ್ ಆರ್ಡರ್‌ನ್ನು ಪಾಸ್ ಮಾಡುವ ಅಗತ್ಯ ಏನಿತ್ತು? ಅಂತಹ ತರಾತುರಿ ಏನಿತ್ತು? ಈ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಲೇಬೇಕು. ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳನ್ನು ನಾವು ಸರ್ಕಾರಕ್ಕೆ ಕೇಳಬೇಕಾಗಿರುವುದು. ಈ ರೀತಿ ಖಾಸಗೀಕರಣದಿಂದ ಬೆಂಗಳೂರು ಜಲಮಂಡಳಿಗೆ ಅದಕ್ಕಿಂತ ಮಿಗಿಲಾಗಿ ಬೆಂಗಳೂರು ನಾಗರಿಕರಿಗೆ ಯಾವ ರೀತಿಯಿಂದ ಲಾಭವಾಗುತ್ತದೆ? What is that the citizen is going to get? ಅವನಿಗೆ ಬಹಳ ಶುದ್ಧವಾದ ಬೇರೆನೀರನ್ನು ನೀವು ಕೊಟ್ಟು ಬಿಡುತ್ತೀರಾ? ನೀವು ನೀರನ್ನು ಇನ್ನೂ ಕಡಿಮೆ ದರದಲ್ಲಿ ಕೊಡುತ್ತೀರಾ? ದಿವಸಕ್ಕೆ 24 ಗಂಟೆ ಕಾಲವೂ ನೀರು ಕೊಡುತ್ತಾರಾ ಅಥವಾ ಎಲ್ಲಾ ನಲ್ಲಿಗಳ ಕನೆಕ್ಷನ್ ನಿಲ್ಲಿಸಿಬಿಟ್ಟು ಎರಡು ಬಾಟಲು ಬಿಸ್ಲೇರಿ ಕೊಡುತ್ತೀರಾ? ಯಾವ ರೀತಿ ಬೆಂಗಳೂರು ನಾಗರಿಕರಿಗೆ ಇದರಿಂದ ಲಾಭ ಆಗುತ್ತದೆ? ಈ ಪ್ರಶ್ನೆ ಬಗ್ಗೆ ಸರ್ಕಾರ ಬಹಳ ಗಂಬೀರವಾಗಿ ಯೋಚಿಸಿ ಉತ್ತರ ಕೊಡಬೇಕು. ಎರಡನೆಯದು, ಜಲಮಂಡಳಿ ಇರುವುದು ನಾಗರೀಕರಿಗಾಗಿಯಾ ಅಥವಾ ನಾಗರೀಕರು ಇರುವುದು ಜಲಮಂಡಳಿಗಾ? ಇದೂ ಕೂಡ ಮೂಲಭೂತವಾದ ಪ್ರಶ್ನೆ ನಾಗರೀಕರು ಇರುವುದೇ ಜಲಮಂಡಳಿಗೋಸ್ಕರ, ಜಲಮಂಡಳಿ ಇರುವುದೇ ಸರ್ಕಾರಕ್ಕೋಸ್ಕರ ಸರ್ಕಾರ ಇರುವುದೇ ಖಾಸಗೀಕರಣಕ್ಕೆ ಎಂದು ಹೇಳಿಬಿಟ್ಟರೆ ನಾವೂ ಕೂಡ ಸುಮ್ಮನೆ ಕುಳಿತುಬಿಡುತ್ತೇವೆ. Ultimately. ನಾಗರೀಕರಿಗೋಸ್ಕರ ನಾವು ಎಲ್ಲಾ ಮಾಡುವುದು ಎಂದು ಇಲ್ಲಿ ಹೇಳುತ್ತೇವೆ, ಆಚೆಗೂ ಹೇಳುತ್ತೇವೆ. ಚುನಾವಣೆ ಸಮಯದಲ್ಲಿ ಬಹಳ ಚೆನ್ನಾಗಿ ಹೇಳುತ್ತೇವೆ ಮೂರನೇ ಪ್ರಶ್ನೆ ಎಂದರೆ ಈ ಎಸ್. ಡಬ್ಲ್ಯೂ.ಜಿ.ಮತ್ತೆ ವಿವೆಂಡಿ ಈ ಎರಡು ಸಂಸ್ಥೆಗಳನ್ನು ಯಾವ ರೀತಿ ಆಯ್ಕೆ ಮಾಡಿದಿರಿ? ನೀವೇನಾದರೂ ಟೆಂಡರ್ ಕರೆದಿದ್ದೀರಾ, ಜಾಹಿರಾತು ಕೊಟ್ಟಿದ್ದೀರಾ? ಎಲ್ಲಿಯಾದರೂ ಏನಾದರೂ ಮಾಡಿದ್ದಾರೆಯೇ ಎಂದು ನಾನು ಹುಡುಕಿದೆ. ಏನೂ ಇಲ್ಲ. ಅದು ಹೇಗೆ ಇವರಿಗೆ ಮಾತ್ರ ಗೋಚರವಾಯಿತು? ಇವರ ಇಂಟರ್‌ನೆಟ್‌ನಲ್ಲಿ ಮಾತ್ರ ಗೊತ್ತಾಯಿತಾ? ಅವರಿಬ್ಬರನ್ನು ಮಾತ್ರ ನೀವು ಹೇಗೆ ಆಯ್ಕೆ ಮಾಡಿದ್ದೀರಿ? ಇದಕ್ಕೆ ಮಾನದಂಡ ಏನು? ಈ ಎರಡೂ ಸಂಸ್ಥೆಗಳಿಗೆ ವಿವೆಂಡಿ ಮತ್ತು ಎನ್.ಡಬ್ಲ್ಯೂ.ಜಿ. ಇವುಗಳಿಗೆ ನಗರ ನೀರು ಸರಬರಾಜು ಮಾಡುವುದರಲ್ಲಿ ಇರುವ ಅನುಭವ ಏನು?

4.10 ಪಿಎಂ

That is more important. ನಾವು ಬೆಂಗಳೂರು ನಗರ ನೀರು ಸರಬರಾಜು ಮಂಡಳಿಯಲ್ಲಿ ಕೆಲಸ ಮಾಡುವ ಲೀಕ್ ಅಟೆಂಡ್ ಮಾಡುವವನಿಗೆ ನಾವು ಅನುಭವ ಕೇಳುತ್ತೇವೆ. ಇಡೀ ಬೆಂಗಳೂರನ್ನು ನೀವು ಅವರ ಕೈಗೆ ಕೊಡುವಾಗ ಅವರಿಬ್ಬರಿಗೆ ಇದ್ದ ಸ್ಪೆಷಲ್ ಎಕ್ಸ್‌ಪಿರಿಯನ್ಸ್ ಏನು? ಯಾವ ಊರಿನಲ್ಲಿ ಕೊಟ್ಟಿದ್ದರು? ಯಾವ ಊರಿನಲ್ಲಿ ಸಮರ್ಥವಾಗಿ ಕೊಟ್ಟಿದ್ದರು. ಯಾವ ಊರಿನಲ್ಲಿ ಸಫಲವಾಗಿದೆ ಯಶಸ್ವಿಯಾಗಿದೆ ಎನ್ನುವುದು ಪ್ರಶ್ನೆ. ಮಾನ್ಯ ಅಧ್ಯಕ್ಷರೇ, ನನ್ನ ಮುಂದೆ ಒಂದು ಲೇಖನ ಇದೆ. ಈ ಪ್ರೈವಟೈಸೇಷನ್ ಹುಚ್ಚಿನಿಂದ ಏನಾಗುತ್ತದೆ ಅಂತ ನಾನು ಲೇಖನ ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ಒಂದು ಉದಾಹರಣೆ ಅಷ್ಟೇ. ಪ್ರೈವೇಟೈಜೇಷನ್‌ನಿಂದ ಏನಾಗುತ್ತದೆ? ಅದರಲ್ಲೂ ಕೂಡ ಕುಡಿಯುವ ನೀರಿನ ವಿಷಯ ಬಂದಾಗ. ನೀವು ಮೈಸೂರು ಲ್ಯಾಂಪ್ಸ್‌ನ್ನು ಖಾಸಗೀಕರಣ ಮಾಡುತ್ತೀರಾ? ಒಂದು ರೀಜನ್ ಹೇಳಬಹುದು. ಬೇರೆ ಬಲ್ಬ್‌ಗಳು ಇವೆ. ನಾವು ಬಲ್ಬ್ ಮಾಡದಿದ್ದರೂ ಪರವಾಗಿಲ್ಲ ಸೋಪ್ ಬೇರೆಯವರು ಮಾಡುತ್ತಿದ್ದಾರೆ ನಾವು ಮಾಡದಿದ್ದರೂ ಬೇಡ ಅಲ್ಟಿಮೇಟಲಿ ಕುಡಿಯುವ ನೀರು ಇದು. ಆ ಕುಡಿಯುವ ನೀರನ್ನು ಖಾಸಗೀಕರಣ ಮಾಡಿದರೆ ಏನಾಗಬಹುದು? ಜೂನ್ 1999, ಎರಡು ವರ್ಷ ಹಿಂದೆ ಅಷ್ಟೇ. 'In June 1999 in Kuchbamba, Bolivia's 2rd largest city.'.. ಬೊಲಿವಿಯಾ ಎನ್ನುವ ದೇಶದಲ್ಲಿ ಥರ್ಡ್ ಲಾರ್ಜೆಸ್ಟ್ ಸಿಟಿ. ಆ ನಗರದಲ್ಲಿ '..the water Authority was privatised - as usual - after the recommendations by the world Bank ನಾವು ವರ್ಲ್ಡ್ ಬ್ಯಾಂಕ್‌ನವರು ಹೇಳಿದಂತೆ ಕೇಳುವವರು. ನಮ್ಮ ನಾಗರೀಕ ಆ ಕೃಷ್ಣಪ್ಪನೋ ತಿಮ್ಮಪ್ಪನೋ ಅವನು ಹೇಳಿದಂತೆ ನಾವು ಕೇಳುವುದಿಲ್ಲ. ವರ್ಲ್ಡ್ ಬ್ಯಾಂಕ್ ಹೇಳಿದಂತೆ ನಾವು ಕೇಳುತ್ತೇವೆ. ಅವರು ಹೇಳಿದರು ಆ ಬೊಲಿವಿಯಾದ ಒಂದು ನಗರಕ್ಕೆ ಖಾಸಗೀಕರಣ ಮಾಡಿಬಿಡಿ ಅಂತ. At once, the prize of the water tripled ಮೂರು ಪಟ್ಟು ಜಾಸ್ತಿಯಾಯಿತು. ಅವರು ಪ್ರೈ ವೇಟೈಜ್ ಮಾಡಿದ ಮುಂದಿನ ತಿಂಗಳು ಮೂರು ಪಟ್ಟು ಜಾಸ್ತಿಯಾಯಿತು. ..which meant that a typical worker was spending almost a quarter of his/her monthly wage on water charges. ಅವನಿಗೆ ಬರುವ ಸಂಬಳದಲ್ಲಿ 25 ಪರ್ಸೆಂಟ್ ಕುಡಿಯುವ ನೀರಿಗೆ ಕೊಡಬೇಕು. ಆ ಒಂದು ಪರಿಸ್ಥಿತಿ ಕುಚಬಾಂಬದಲ್ಲಿ ಬಂದು ಬಿಟ್ಟಿತು. People gathered on the sreets and prottested There was a four day general strike. ಒಂದು ಗಂಟೆ ಅಲ್ಲ. ಎರಡು ಗಂಟೆ ಅಲ್ಲ. payments were bo. cotted and 30,000 people marched through the city centre. Finally, in April last year, the water supply privatisation was revoked. ತೆಗೆದುಬಿಟ್ಟರು ಖಾಸಗೀಕರಣ ಬೇಡ ಅಂತ. ನಮಗೆ ಮುಂಚೆ ಇದ್ದಿದ್ದೇ ವಾಸಿ ಅಂತ ಅವರು ಆ ನಾಲ್ಕು ಪಟ್ಟು ದುಡ್ಡು ಜನರ ಹತ್ತಿರ ತೆಗೆದುಕೊಳ್ಳುವುದು ಅಪರಾಧ ಅಂತ ಅನ್ನಿಸಿತು. 'The privatisation was revoked'.ಅದೇ ಕೆಲವು ಸಲ ಭಾಷಣ ಮಾಡುವಾಗ ಹೇಳುತ್ತೇವೆಯಲ್ಲಾ. ಇಲ್ಲಿಯವರೇ ಲೀಡರ್ಸ್ ಅಲ್ಲೂ ಇದ್ದರು. In 1985 Government leaders asked the Bolivian people for patience and sacrifice as they implemented neo-liberal reforms. ಪೇಷೆನ್ಸ್ ಇರಬೇಕು.

ಸ್ಯಾಕ್ರಿಫೈಸ್ ಮಾಡಬೇಕು. ನೀವು 15 years later, it seemed that their patience has run out and they had to revoke the privatisation. A classic example is before as ನಮ್ಮ ಮುಂದೆ ಈ ತರಹದ ಒಂದು ಘಟನೆ ನಡೆದಾಗಲೂ ಕೂಡ ಇಲ್ಲಾ ನಾವು ಮಾಡುವುದೇ ಕರೆಕ್ಟ್. ನಾವು ಖಾಸಗೀಕರಣ ಮಾಡೇ ಮಾಡುತ್ತೇವೆ ಅಂತ ಹೋಗುವುದು ಅದು ಬುದ್ದಿ ವಂತರ ಲಕ್ಷಣ ಖಂಡಿತ ಅಲ್ಲ. ಮಾನವೀಯತೆ ಇರುವವರದ್ದು ಖಂಡಿತ ಅಲ್ಲ ಸ್ವಲ್ಪ ಮತಿ ಇರುವವರದ್ದು ಇದ್ದಿದ್ದೂ ಅಲ್ಲ. ಮಾಡುವುದಕ್ಕೆ ಹೋಗಬಾರದು ಮಾನ್ಯ ಅಧ್ಯಕ್ಷರೇ, ನಾನು ಒಂದು ಕಂಪನಿ ಹೆಸರು ಹೇಳಿದ್ದೆ ವಿವೆಂಡಿ ಅಂತ ನನ್ನ ಹತ್ತಿರ ಜೂನ್ 10ರ 2002ನೇ ಇಸವಿ ಫಾರ್‌ಚೂನ್ ಮ್ಯಾಗೆಜೈನ್ ಇದೆ. It is one of the reputed magzines in the world. ಅದರಲ್ಲಿ ಹೆಡ್ಡಿಂಗ್ ಅದು GETTING MESSIER BY THE MINUTE: Vivendi's Stock has plunged. Bebt has soared and Vivendi's workers want C.E.O. Jean Mary Mazier's head Now what? ವಿವೆಂಡ್ ಸಂಸ್ಥೆ ಕಂಪ್ಲೀಟ್ ಆಗಿ ಯಾವ ರೀತಿ ನೆಲ ಕಚ್ಚಿಬಿಟ್ಟಿದೆ ಅಂತಹವರನ್ನು ತೆಗೆದುಕೊಂಡು ಹೋಗಿ ಬೆಂಗಳೂರಿನಲ್ಲಿ ಒಂದು ಜೋನ್‌ಅನ್ನು ಆ ಬೆಳ್ಳಿಯ ಹರಿವಾಣದಲ್ಲಿಟ್ಟು ಒಪ್ಪಿಸುತ್ತಿದ್ದೀರಲ್ಲಾ, ದಯವಿಟ್ಟು ಈಗಲಾದರೂ ಬೇಡ ಅಂತ ಕೇಳುವುದಕ್ಕೋಸ್ಕರ ಈ ಒಂದು ನಿಲುವಳಿ ಸೂಚನೆ ತಂದಿದ್ದು. ಮಾನ್ಯ ಅಧ್ಯಕ್ಷರೇ, ಈಗಲಾದರೂ ಕೂಡ ನಾವು ಹೇಳುವುದು ಖಾಸಗೀಕರಣದ ಹೆಸರಿನಲ್ಲಿ ಬೆಂಗಳೂರು ನಗರದ ಜನತೆಗೆ ಕುಡಿಯುವ ನೀರಿಗೆ ತೊಂದರೆ ಮಾಡಬೇಡಿ. ಬೆಂಗಳೂರು ನಗರ ನೀರು ಸರಬರಾಜು ಮಂಡಲಿ ಏನು ಇದೆ, ಅದು ದೇಶದಲ್ಲಿಯೇ One of the best managed water Supply Boards. ಅಂತ ಇತ್ತೀಚೆಗೆ ಕಳೆದ 5-6 ವರ್ಷಗಳಲ್ಲಿ ಮೂರು ಬಾರಿ ದೇಶದ ಮಟ್ಟದ ಪ್ರಶಸ್ತಿಯನ್ನು ಗಳಿಸಿದೆ. One of the best managed water supply boards. ಅಂತ ಕಾವೇರಿ ಮೊದಲನೇ ಹಂತ, ಎರಡನೇ ಹಂತ, ಮೂರನೇ ಹಂತ, ನಾಲ್ಕನೇ ಹಂತ ಅಂತ ಮಾಡಿದ್ದು ಇಡೀ ಭಾರತದಲ್ಲೇ ಯಾರೂ ಮಾಡಿಲ್ಲ. 110 ಕಿಲೋಮೀಟರ್ ದೂರದಿಂದ ಸುಮಾರು ಒಂದು ಸಾವಿರ ಅಡಿ ಕೆಳಗಡೆಯಿಂದ ಇದರ ಟೋಫಿಯೋಗ್ರಫಿ ಬೇರೆ ಯಾವುದೇ ನಗರಕ್ಕೆ ಸಿಕ್ಕಿಲ್ಲ. ಅಂತಹ ಒಂದು ನೀರಿನ ವ್ಯವಸ್ಥೆಯನ್ನು 1974ನೇ ಇಸವಿಯಿಂದ on their own ಅದು ಪ್ರಾಜೆಕ್ಟ್ ಡಿಜೈನ್ ಇರಬಹುದು, ಪ್ರಾಜೆಕ್ಟ್ ಇಂಪ್ಲಿಮೆಂಟೇಶನ್ ಇರಬಹುದು ಅವರೇ ಮಾಡಿಕೊಂಡು ಬಂದಿದ್ದಾರೆ. ಇದನ್ನು ಬೇರೆ ದೇಶದವರು ಬಂದು ನೋಡಿಕೊಂಡು ಹೋಗಿದ್ದಾರೆ. ಇದರ ವಾಟರ್ ಮ್ಯಾನೇಜ್‌ಮೆಂಟ್ ಹೇಗಿದೆ ಅಂತ ಅಂತಹ ಒಂದು ಸಂಸ್ಥೆಯನ್ನು ನೀವು ಖಾಸಗೀಕರಣ ಮಾಡುತ್ತಾ ಹೋಗುವುದು ಸೂಕ್ತವಲ್ಲ ನನ್ನ ಹತ್ತಿರ ಒಂದು ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಇದೆ, ಇವರು ಖಾಸಗೀಯವರಿಗೆ ಏನು ಕೊಡುತ್ತಿದ್ದಾರೆ 2 ಜೂನ್, ಆ ವೆಸ್ಟ್ ಜೋನ್ ಮತ್ತು ಸೌತ್ ಜೋನ್ ಆ ಎರಡು ಜೋನ್‌ನಲ್ಲಿ ಅವರಿಗೆ ಕೊಟ್ಟರೆ ಎಷ್ಟಾಗುತ್ತದೆ? ನಾವೇ ಇಟ್ಟುಕೊಂಡರೆ ಎಷ್ಟಾಗುತ್ತದೆ ಅಂತ. ನಾನು ಪೂರ್ತಿ ಡೀಟೇಲ್ಸ್ ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ಇದು ಅಂದರೆ ನಿರ್ವಹಣಾ ವೆಚ್ಚ. ಈ ಎರಡೂ ಜೋನ್‌ಗಳನ್ನು ಬೆಂಗಳೂರು ನಗರ ನೀರು ಸರಬರಾಜು ಮಂಡಲಿ ಮಾಡಿದ್ದರೆ ಇನ್ನು 5 ವರ್ಷ ಎಷ್ಟಾಗುತ್ತಿತ್ತು, ಪರ್ ಇಯರ್ 28 ಕೋಟಿ ರೂ ನೀವು ವಿದೇಶಿ ಕಂಪನಿಗಳ ಭಾಗಿತ್ವಕ್ಕೆ ಕೊಟ್ಟರೆ ಎಷ್ಟು 49 ಕೋಟಿ ರೂ ನಾವು ಅಡಿಶನಲ್ 21 ಕೋಟಿ ರೂ ಎಕ್ಸ್ಟ್ರಾ ಪೇ ಮಾಡುತ್ತಿದ್ದೇವೆ. ಕ್ಯಾಪಿಟಲ್

ಎಕ್ಸ್‌ಪೆಂಡೇಚರ್ ನಾವು ಆಗಿದ್ದಿದ್ದರೆ ಈ 5 ವರ್ಷದಲ್ಲಿ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವು. ಕ್ಯಾಪಿಟಲೈಡ್ಸ್ ಎಕ್ಸ್‌ಪೆಂಡೇಚರ್ ಹೆಡ್‌ನಲ್ಲಿ. ಅವರು ಕೇಳಿರುವುದು 318 ಕೋಟಿ ರೂಗಳು ಎರಡು ಜೋನ್‌ಗಳಿಗೆ. ಎಕ್ಸ್‌ಟ್ರಾ ಎಷ್ಟು ಆಯಿತು? 258 ಕೋಟಿ ರೂಗಳಿ ಇದಕ್ಕೆ ನಿರ್ವಹಣಾ ಸಂಭಾವನೆ ಬೇರೆ ಫ್ರೆಂಚ್ ಕಂಪನಿಗಳಿಗೆ ನಮ್ಮವರಿಗೆ ಸಂಬಳ ಕೊಡುತ್ತೇವೆ. ಅವರಿಗೆ ಸಂಭಾವನೆ ಕೊಡುತ್ತೇವೆ. ಅಲೋಯನ್ಸ್ ಎಷ್ಟು? 143 ಕೋಟಿ ರೂ.ಗಳು ಒಟ್ಟು 21 ಕೋಟಿ, ರೂ, 258 ರೂ. 143 ಕೋಟಿ ರೂ ಒಟ್ಟು ಸೇರಿದರೆ ನಾವು ಕೂಡ ಬೇಕಾಗಿರುವುದು 422 ಕೋಟಿ ರೂಪಾಯಿಗಳು ಎಕ್ಸ್‌ಟ್ರಾ ಎರಡೇ ಜೋನ್‌ಗೆ 422 ಕೋಟಿ ರೂಪಾಯಿ. ಆ ಎರಡು ಕೋಟಿ ಜಾಸ್ತಿ ಏಕೆ ಆಯಿತು ಎಂಬುದು ನನಗೆ ಗೊತ್ತಿಲ್ಲ. 420 ಕೋಟಿ ರೂ ಆಗಿದ್ದರೆ ಚೆನ್ನಾಗಿರುತ್ತಿತ್ತು. ಆದರೆ 422 ಕೋಟಿ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ. ಇಂತಹ ಒಂದು ಕ್ಯಾಲಿಕಲೇಷನ್ ಇಟ್ಟುಕೊಂಡಾಗ ನಾವು ಯಾವ ರೀತಿ ಈ ಖಾಸಗೀಕರಣವನ್ನು ಒಪ್ಪಲಿಕ್ಕೆ ಸಾಧ್ಯ? ನೀರು ನಮ್ಮದು. ಕಾವೇರಿ 4ನೇ ಹಂತದಲ್ಲಿ ನೀರು ಏನು ಇದೆ ಅದು ನಮ್ಮದು. ಅವರೇನೂ ಹೊಸದಾಗಿ ಪ್ರಾಜೆಕ್ಟ್ ಮಾಡುವುದಿಲ್ಲ. ನೀರು ನಮ್ಮದು ಕ್ಯಾಪಿಟಲ್‌ಇನ್‌ವೆಸ್ಟ್‌ಮೆಂಟ್ ನಮ್ಮದು ಈಗಲೇ ನೆಟ್‌ವರ್ಕ್ ಏನು ಮಾಡಿದ್ದೇವೆ. ಅದು ನಮ್ಮದು ಬರೀ ಮೈನ್‌ಟನೆನ್ಸ್ ಎನ್ನುವ ಹೆಸರಿನಲ್ಲಿ 422 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರಲ್ಲಾ ಇದನ್ನು ನಾವು ಯಾವ ದರೋಡೆ ಅಂತ ಹೇಳೋಣ. ಕಾರ್ಪೋರೇಟ್ ದರೋಡೆ ಅಂತ ಹೇಳೋಣ? ಮಲ್ಟಿ ನ್ಯಾಷನಲ್ ದರೋಡೆ ಅಂತ ಹೇಳೋಣ? ಯಾವ ದರೋಡೆ ಅಂತ ಹೇಳೋಣ? 422 ಕೋಟಿ ರೂಪಾಯಿ ಏನು ಹುಡುಗಾಟಿಕೆ ಮಾತಲ್ಲಾ? ಇವತ್ತು 422 ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರ ನೀರು ಸರಬರಾಜು ಮಂಡಲಿಯವರಗೆ ಕೊಟ್ಟುಬಿಟ್ಟರೆ ನಾವು ಇನ್ನೂ ಕೂಡ ಚೆನ್ನಾಗಿ ಈ ವ್ಯವಸ್ಥೆಯನ್ನು ಮಾಡಬಹುದು. ಆದರೆ ಮಾಡುವುದಿಲ್ಲ. ಹಿತ್ತಲಗಿಡ ಮದ್ದಲ್ಲ. ಫ್ರೆಂಚ್‌ನವರಿಗೆ ಕೊಡಬೇಕೆನ್ನುವವರು ಈ ರೀತಿ 422 ಕೋಟಿ ರೂಪಾಯಿ ಎಕ್ಸ್‌ಟ್ರಾ ಕೊಡುತ್ತಿದ್ದೇವೆ. ನೀರು ನಮ್ಮದು ನೆಟ್ ವರ್ಕ್ ನಮ್ಮದು ಎಲ್ಲಾನೂ ಕೂಡ ನಮ್ಮದು. ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್.ವಿ. ದೇಶಪಾಂಡೆಯವರೇ ಮಾನ್ಯ ಜಗದೀಶ್ ಶೆಟ್ಟರ್‌ಗೆ ಉತ್ತರ ಕೊಡುತ್ತಾ ಬಹಳ ಚೆನ್ನಾಗಿ ಹೇಳಿದರು. ಈ ಇಂಡಸ್ಟ್ರೀಯಲಿಸ್ಟ್‌ಗಳು ಯಾರು ಇದ್ದಾರೆ ಅವರೆಲ್ಲಾ ಬೆಂಗಳೂರಿಗೆ ಬರುತ್ತಾರೆ. ಬೀದರ್‌ಗೆ ಹೋಗು ಅಂದರೆ ಹೋಗುವುದಿಲ್ಲ. ಅಂತ ಹೇಳಿದರು. ಎಲ್ಲಿ ದುಡ್ಡು ಸಿಗುತ್ತೋ ಅಲ್ಲಿಗೆ ಬರುತ್ತಾರೆ ಈ ಎನ್‌ಡಬ್ಲ್ಯೂ ಬಿ ಮತ್ತು ವಿ ಡಬ್ಲ್ಯೂ ಜಿ ಏನು ಇದೆ ಅವರೂ ಕೂಡ ಬೆಂಗಳೂರಿಗೆ ದುಡ್ಡು ಮಾಡುವುದಕ್ಕೆ ಬರುತ್ತಿರುವುದು they are not Mother Teresas .They are not sister Niveditas. ಅವರು ಬರುತ್ತಿರುವುದು ಇಲ್ಲಿ ಹೇಗಿದ್ದರೂ ನೀರು ಇದೆ. ದುಡ್ಡು ಮಾಡೋಣ ಅಂತ ಬರುತ್ತಿದ್ದಾರೆ. ಅಲ್ಲೆಲ್ಲೋ ಸೋತು ಸುಣ್ಣವಾಗಿ, ಇನ್ನೆಲ್ಲೋ ಮಾಡುವುದಕ್ಕಾಗದೇ ಇಲ್ಲಿ ಬಂದು ದುಡ್ಡು ಮಾಡುವುದಕ್ಕೆ ಬರುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿಗೆ ಕೇಂದ್ರದ ಹೊಸ ಹಣ ಕಾಸು ಸಚಿವರು ಒಂದು ಮಾತು ಹೇಳಿದರು. The first priority should be to increase the purchasing Capacity of the Indian citizen. ಅವನ ಪರ್ಚೇಸಿಂಗ್ ಕೆಪ್ಯಾಸಿಟಿ ನಾವು ಜಾಸ್ತಿ ಮಾಡಬೇಕು. ಇವತ್ತು ಅವನ ಪರ್ಚೇಸಿಂಗ್ ಕೆಪ್ಯಾಸಿಟಿ ಲಿಮಿಟೆಡ್ ಈ ರೀತಿ ಲಿಮಿಟೆಡ್ ಇರುವಾಗ ಕೆ.ಪಿ.ಟಿ.ಸಿ.ಎಲ್

ನವರು ದರ ಜಾಸ್ತಿ ಮಾಡುತ್ತಾರೆ, ಇನ್ನಾರೋ ಪೆಟ್ರೋಲ್ ದರ ಜಾಸ್ತಿ ಮಾಡುತ್ತಾರೆ, ಬಿ.ಎಂ.ಟಿ.ಸಿ.ನವರು ಜಾಸ್ತಿ ಮಾಡುತ್ತಾರೆ, ಪ್ರೈವೇಟೈಸೇಷನ್ ಮಾಡಿಬಿಟ್ಟು ಕುಡಿಯುವ ನೀರಿನ ದರವನ್ನು ಜಾಸ್ತಿ ಮಾಡುತ್ತಾರೆ. ಆ ಸಾಮಾನ್ಯ ವ್ಯಕ್ತಿ ಎಲ್ಲಿಂದ ತಂದು ನೀರು ಕುಡಿಯಬೇಕು. ಅವನಿಗೆ ಎಲ್ಲಿಂದ ಬರಬೇಕು? ನೀವು ಯಾವುದಾದರೂ ಥಿಯೇಟರಿಗೆ, ನೀನು ಇಷ್ಟು ಕೊಡಬೇಕು, ಕೊಡದೇ ಹೋದರೆ ಸಿನಿಮಾ ನೋಡಬೇಡ ಎಂದರೆ ಓ.ಕೆ. ಅವನು ಸಿನಿಮಾ ನೋಡುವುದಿಲ್ಲ. ಈ ಬಸ್ ಹತ್ತಬೇಡ ಎಂದರೆ, ಹತ್ತುವುದಿಲ್ಲ. ಆದರೆ, ಇದು ಕುಡಿಯುವ ನೀರು. The question of drinking water. Ultimately, a man can live without electricity ಎಂದು ಅಂದುಕೊಳ್ಳೋಣ. We can live without transportation; can we exist without drinking water? ಆಗುತ್ತದೆಯೇ? ಇವತ್ತು ಕುಡಿಯುವ ನೀರನ್ನು ಆ ಸಮಸ್ಯೆಗೆ ತೆಗೆದುಕೊಂಡು ಹೋಗಿ ಆ ರೇಟನ್ನು ದ್ವಿಗುಣ, ತ್ರಿಗುಣ, ನಾಲ್ಕುಗಣ ಮಾಡಿಬಿಟ್ಟು, ಅವನಿಗೆ ಇವತ್ತು ಕುಡಿಯುವ ನೀರು ಲಭ್ಯವಾಗದಿರುವ ಹಾಗೆ ನೀವು ಮಾಡುತ್ತಿದ್ದೀರಿ. ಕುಡಿಯುವ ನೀರು ಕೊಡಬೇಕಾಗಿರುವುದು ಸರ್ಕಾರದ ಮೂಲಭೂತ ಕರ್ತವ್ಯ ಅದನ್ನು ಕೂಡ ಖಾಸಗೀಕರಣದ ಹೆಸರಿನಲ್ಲಿ ತನ್ನ ಜವಾಬ್ದಾರಿ ಬೇಡವೆಂದು ಬೇರೆಯವರಿಗೆ ವಹಿಸುವುದು, ಇದು ಜನದ್ರೋಹ ಅಲ್ಲದೇ ಬೇರೆ ಏನೂ ಅಲ್ಲ. ನಾನು ಈ ಸಮಯದಲ್ಲಿ ಗುಡ್ ಗವರ್ನ್‌ನ್ಸ್ ಬಗ್ಗೆ ಒಂದು ಅಂಶ ಹೇಳುತ್ತೇನೆ. ಗುಡ್ ಗವರ್ನನ್ಸ್ ಎಂದರೆ ಏನು ಮಾನ್ಯ ಚಂದ್ರೇಗೌಡರೇ It should have a humane touch ಒಪ್ಪಿಕೊಳ್ಳುತ್ತೀರಾ? ಹ್ಯೂಮನ್ ಟಚ್ ಇರಬೇಕು. ಈ ಖಾಸಗೀಕರಣದಲ್ಲಿ ಯಾವ ಹ್ಯೂಮನ್ ಟಚ್ ಇರುತ್ತದೆ? ಆ ಹ್ಯೂಮನ್ ಟಚ್ ಹೇಗಿಕರಬೇಕೆಂಬುದಕ್ಕೆ ನನ್ನ ಹತ್ತಿರ ಒಂದು ಉದಾಹರಣೆ ಸಿಕ್ಕಿತು. ಈ ಉದಾಹರಣೆ ಬಹಳ ಚೆನ್ನಾಗಿದೆ. ಇದು ಡಿ.ವಿ. ಗುಂಡಪ್ಪನವರು ಬರೆದಿರುವುದು. ಅವರು ಹೇಳುತ್ತಾರೆ, very very touching. ಒಂದು ಗವರ್ನೆನ್ಸ್ ಎಂಬುದು ಹೇಗಿರಬೇಕು ಎನ್ನುವುದಕ್ಕೆ ಸಾಕ್ಷಿ ಇದು. ಈ ಸಂದರ್ಭದಲ್ಲಿ ಒಂದು ಸಂಗತಿ ನನ್ನ ನೆನಪಿಗೆ ಬರುತ್ತದೆ. ಡಿ.ವಿ.ಜಿಯವರು ಹೇಳುವುದು ಸರ್ ಮಿರ್ಜಾ ಇಸ್ಮಾಯಿಲ್ ನಿಧನ ಹೊಂದಿದ ದಿವಸ ನಾನು ಸ್ಮಶಾನಕ್ಕೆ ಹೋಗಿದ್ದೆ. ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು ತೀರಿಹೋಗಿದ್ದರು, ಇವರು ಹೋಗಿದ್ದರು. ಶವಸಂಸ್ಕಾರಾದಿಗಳು ಮುಗಿಯುವ ವೇಳೆಗೆ ರಾತ್ರಿ 9-10 ಗಂಟೆಯಾಗಿತ್ತು. ನಾನು ಸ್ಮಶಾನದ ಪ್ರವೇಶದ ಗೇಟಿನವರೆಗೆ ಬಂದಿದ್ದೆ. ಅಲ್ಲಿ ಒಬ್ಬಾತ ಬಿಕ್ಕಿ ಬಿಕ್ಕಿ ಅಳುತ್ತಾ ನಿಂತಿದ್ದ ಆತನ ಬಟ್ಟೆಯ ರೀತಿಯಿಂದ, ಆತನು ಹಿಂದೂ ಎಂದು ನನಗೆ ತೋರಿತು. ನಾನು ಆತನನ್ನು ವಿಚಾರಿಸಿದೆ. ನೀವು ಯಾರು? ಆತ ಹೇಳಿದ, ಸ್ವಾಮಿ ನಾನು ಕಬ್ಬನ್‌ಪೇಟೆಯವನು. ಅಕ್ಕಸಾಲಿ ಜಾತಿಯವನು. ಒಂದು ದಿನ ಬೆಳಿಗ್ಗೆ ನನ್ನ ಹೆಂಡತಿ ನೀರಿಗಾಗಿ ಬನಪ್ಪ ಪಾರ್ಕಿನ ಪಕ್ಕದ ಕೊಳಾಯಿಗೆ ಹೋದಳು ಬಹಳ ಹೊತ್ತಾದರೂ ಹಿಂದಿರುಗಲಿಲ್ಲ. ಆ ದಿನ ನೀರು ಹಿಡಿಯುವುದಕ್ಕೆ ಹೋದವರು ಬಹಳ ಮಂದಿ ಅಲ್ಲಿ ಸೇರಿದ್ದರು. ಆದುದರಿಂದ ಜಗಳಗಳು, ಗಲಾಟೆಯೂ ನಡೆಯಿತು. ಸುಮಾರು ಒಂದು ಗಂಟೆ ಕಾದಮೇಲೆ ನನ್ನ ಹೆಂಡತಿಗೆ ನೀರು ಸಿಕ್ಕಿತು. ಆಕೆ ಬಸುರಿ, ಆ ದೊಡ್ಡ ಕೊಡವನ್ನು ಹೊರಲಾರದೆ ಹೊತ್ತುಕೊಂಡು ಬಂದಳು ಅಲ್ಲಿ ಜಗಳವಾದದ್ದರಿಂದಲೋ, ಯಾರೋ ಆಕೆಯನ್ನು ಬೈಯ್ದದ್ದರಿಂದಲೋ ಆಕೆ ಮೈ ಸ್ವಸ್ಥವಿಲ್ಲದೆ ನೋವಾಗಿದ್ದರಿಂದಲೋ ಕಣ್ಣೀರು ಹಾಕುತ್ತಾ ಮನೆಗೆ ಬಂದಳೂ ಆಕೆಯ ಹಿಂದೆ ಒಬ್ಬ ಸರ್ಕಾರದ ಜವಾನ ಬಂದು, ಈ ಮನೆ ಯಾರದು ಎಂದು ಕೇಳಿದ, ನಾನು ಏಕೆ ಎಂದೆ ಆತ ಹೇಳಿದ,

ದಿವಾನ್‌ಸಾಹೇಬರ ಸವಾರಿ ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಹತ್ತಿರ ನಿಂತಿದೆ. ಸಾಹೇಬರು ಈ ಹೆಂಗಸಿನ ಜೊತೆಯಲ್ಲಿ ಹೋಗಿ, ಮನೆ ತಿಳಿದುಕೊಂಡು ಬರುವಂತೆ ಹೇಳಿದರು. ಅದಕ್ಕಾಗಿ ಬಂದಿದ್ದೇನೆ ಎಂದ. ಅದನ್ನು ಕೇಳಿ ನನಗೆ ಗಾಬರಿಯಾಗಿ, ಏನು ಸಮಾಚಾರವೋ ನೋಡೋಣವೆಂದು ಆ ಜವಾನರ ಜೊತೆಯಲ್ಲಿ ದಿವಾನರು ಇರುವ ಕಡೆಗೆ ಹೋದೆ ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು ನಿಂತಿದ್ದಾರೆ, ನಾನು ಹೋಗಿ ಕೈಮುಗಿಯುತ್ತಲೇ ಸಾಹೇಬರು ನೀನು ಯಾರು, ಇನ್ನೂ ಮುಂತಾಗಿ ವಿಚಾರಿಸಿದರು. ನಾನು ಇದ್ದ ಸಂಗತಿಯನ್ನು ಹೇಳಿದೆ. ಅವರು ನಿಮ್ಮ ಮನೆಯಲ್ಲಿ ಕೊಳಾಯಿ ಇಲ್ಲವೋ ಎಂದು ಕೇಳಿದರು. ನಾನು ಇಲ್ಲಾ ಸ್ವಾಮಿ, ಅಷ್ಟಕ್ಕೆ ಅನುಕೂಲವಿಲ್ಲ, ಬೀದಿ ಕೊಳಾಯಿಯಿಂದಲೇ ನೀರು ತಂದು ಕೊಳ್ಳುತ್ತೇನೆ ಎಂದೆ. ಸಾಹೇಬರು, ಬೀದಿ ಕೊಳಾಯಿಗೂ ನಿಮ್ಮ ಮನೆಗೂ ಎಷ್ಟು ದೂರ ಎಂದು ಕೇಳಿದರು. ನಾನು ಅರ್ಧ ಮೈಲಿ ಆದೀತು ಸ್ವಾಮಿ, ನನ್ನ ಮನೆ ಇರುವುದು ಹಿಂದುಗಡೆಯ ಸಂದಿಯಲ್ಲಿ ಸಂದಿ ಗೊಂದು ಸುತ್ತಿಕೊಂಡು ಹೋಗಬೇಕು ಎಂದೆ. ದಿವಾನ್ ಸಾಹೇಬರು ಆಗ ಅವರು ಜೊತೆಯಲ್ಲಿದ್ದ ಇಂಜಿನಿಯರ್ ಸಾಹೇಬರನ್ನು ಕುರಿತು ಈತನ ಮನೆಯ ಹತ್ತಿರ ಎಲ್ಲಾದರೊಂದು ಕೊಳಾಯಿ ಹಾಕಿಸಿಕೊಡಲಾದೀತೆ ಎಂದರು." ಪ್ರಾಯಶಃ ಇಲ್ಲಿನ ಇಂಜಿನಿಯರ್ ಆಗಲೂ ಇದ್ದರು ಎಂದು ಕಾಣಿಸುತ್ತೆ. ಪ್ಲಾನ್ ಬರೆಸಿ ಸಾದರ ಮಾಡುತ್ತೇನೆ, ಅದನ್ನು ಮಂಜೂರು ಮಾಡಿದರೆ, ಕೆಲಸ ಮಾಡುತ್ತೇನೆ ಎಂದರು. ದಿವಾನರು ಹೇಳಿದರು, ಈಗಲೇ ಇಲ್ಲೇ ಮಂಜೂರು ಮಾಡಿದ್ದೇನೆ. ಕೆಲಸ ಪ್ರಾರಂಭ ಮಾಡಿಸಿ. ನಾಳೆ ಬೆಳಿಗ್ಗೆ ಅವರ ಮನೆಗೆ ನೀರು ಈ ಹೊಸ ಕೊಳಾಯಿಯಿಂದ ಬರಬೇಕು; ಜನನಿಬಿಡವಾಗಿರುವ ಈ ಪ್ರದೇಶದಲ್ಲಿ ಒಂದೋ ಎರಡೋ ಕೊಳಾಯಿಗಳನ್ನು ಇಟ್ಟರೆ ಬಹುಜನಕ್ಕೆ ಸಹಾಯ ಮಾಡಿದಂಥಲ್ಲ. ಒಂದೊಂದು ಸಣ್ಣ ಪ್ರದೇಶಕ್ಕೂ ಮಧ್ಯೆ ಅನುಕೂಲವಾದ ಕಡೆ ಕೊಳಾಯಿ ಇಡಬೇಕು. ನಾನು ನಾಳೆ ಇಲ್ಲಿ ಬರುವವೇಳೆಗೆ ಇವರಿಗೆ ನೀವು ಕೊಳಾಯಿ ಕೊಟ್ಟು ಉಪಕಾರ ಮಾಡಬೇಕೆಂದು ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು ಹೇಳಿದರು. ಸ್ವಾಮಿ, ಅದರಂತೆ ಕೆಲಸ ನಡೆಯಿತು. ಒಂದು ದಿವಸದೊಳಗೆ ಕೊಳಾಯಿ ಬಂದಿತು. ಈಗ ನೀರನ್ನು ಕುಡಿಯುತ್ತಿದ್ದೇವೆ. ನೂರಾರು ಹೆಂಗಸರು ನೀರಿಗೆ ಜಗಳಾಡುತ್ತಿದ್ದುದ್ದು, ಬಸುರಿ ಹೆಂಗಸು ಕಷ್ಟಪಡುತ್ತಿದ್ದುದ್ದನ್ನು ನೋಡಿ ಕನಿಕರಪಟ್ಟವರು ಆ ಧಣಿಗಳು. ನಮ್ಮನ್ನು ಹಾಗೆ ನೋಡಿಕೊಳ್ಳುವವರು ಬೇರೆ ಯಾರಿದ್ದಾರೆ ಎಂದು ಹೇಳುತ್ತಾ ಗೋಳಿಟ್ಟ ಆ ಮನುಷ್ಯ" This is called good governance. Governance with humane couch ಇದನ್ನು ಸರ್ಕಾರ ಮಾಡಬೇಕು. ಕೊಳಾಯಿ ಇಲ್ಲದಿರುವ ಕಡೆ ಹಾಕಿಸಬೇಕು. ನೀರು ಕೊಡಬೇಕು. ಅದರ ಬದಲು, ಎಲ್ಲಿಂದಲೋ ಬಂದರು ಎಂದು ಕೊಟ್ಟು, ಫ್ರೆಂಚ್ ಕಂಪನಿಗೆ ಆ ಜುಟ್ಟನ್ನು ಒಪ್ಪಿಸಿ, ನಾಲ್ಕು ಪಟ್ಟಾದರೂ ಕುಡಿರಯ್ಯ ಎಂದು ಹೇಳಿ, ನೀವು ಏನು ಮಾಡುವುದಕ್ಕೆ ಹೊರಟಿದ್ದೀರಿ? ಬೆಂಗಳೂರಿನ ಸಾಮಾನ್ಯ ಮನುಷ್ಯ ಇದನ್ನು ಸಹಿಸುವುದಕ್ಕೆ ಸಾಧ್ಯವಿದೆಯೇ? ಬೊಲಿವಿಯಾದಲ್ಲಿ ಏನೋ 30 ಸಾವಿರ ಜನ ಬಂದುಬಿಟ್ಟರು. ಮಾನ್ಯ ರಾಮಲಿಂಗಾರೆಡ್ಡಿಯವರಿಗೆ ಗೊತ್ತಿದೆ. ಕಳೆದ 20 ವರ್ಷದಿಂದ ಸಣ್ಣ ಸಣ್ಣ ನೀರಿನ ಸಮಸ್ಯೆಗೆ, ನಾವು ಹೋಗಿ ಜನರ ಮಧ್ಯೆ ಬೆರೆತು ಯಾವ ರೀತಿ ಮಾಡುತ್ತಾ ಬಂದಿದ್ದೇವೆ. ಒಂದೊಮ್ಮೆ ಖಾಸಗೀಕರಣ ಆದಮೇಲೆ, ನಾವು ಅವರ ಹತ್ತಿರ ಹೋಗಿ ಕೇಳುವುದ್ಕಾಕಗುತ್ತದೆಯೇ? ನೀರು ಬಂದಿಲ್ಲ ಸ್ವಾಮಿ, ನೀರು ಏಕೆ ಕೊಟ್ಟಿಲ್ಲವೆಂದು ಕೇಳುವುದಾಕ್ಕಾಗುತ್ತದೆಯೇ? ನಮ್ಮ ಜೊತೆ ರಾತ್ರಿ ಇನ್‌ಸ್ಪೆಕ್ಷನ್‌ಗೆ ಬನ್ನಿ ಎಂದು

ಕರೆಯುವುದಕ್ಕೆ ಆಗುತ್ತದೆಯೇ? ಅದು ಯಾವುದೂ ಕೂಡ ಆಗುವಂಥ ಪರಿಸ್ಥಿತಿ ಇಲ್ಲ. ಒಟ್ಟಿನಲ್ಲಿ ಬೆಂಗಳೂರಿನ ಸಾಮಾನ್ಯ ಪ್ರಜೆಗೆ ನೀರು ದೊರಕದೇ ಇದ್ದರೂ ಪರವಾಗಿಲ್ಲ, ನಾವು ಖಾಸಗಿ ಕಂಪನಿಗೆ ಕೊಡಬೇಕೆಂದು ಹೊರಟಿದ್ದೇವೆ. ಅಧ್ಯಕ್ಷರೇ, ಈ ಸರ್ಕಾರಕ್ಕೆ ಸಿಂಗಾಪುರ್ ಬಗ್ಗೆ ಬಹಳ ಕಲ್ಪನೆ ಇದೆ. ಬೆಂಗಳೂರಿನಲ್ಲಿ ಈಗಲೇ ಸಿಂಗಾಪುರ್‌ಗಳಿವೆ. ಅವರು ಮನೆಯಲ್ಲಿ ಈ ನಲ್ಲಿ ನೀರು ಕುಡಿಯುವುದಿಲ್ಲ. ಅವರು ಬಿಸಿಲೆರಿ ನೀರೇ ಕುಡಿಯುವುದು. 15-18 ರೂಪಾಯಿ ಬಿಸಿಲೆರಿ ನೀರೇ ಕುಡಿಯುವುದು. ಆದರೆ, ಅವರು ನಿಜವಾಗಿಯೂ ಬೆಂಗಳೂರಿನವರಲ್ಲ ಸ್ವಾಮಿ. ನೀವು ಬನ್ನಿ ಶ್ರೀರಾಮಪುರಕ್ಕೆ ಗೋರಿ ಪಾಳ್ಯಕ್ಕೆ, ಬನ್ನಿ ಬಾಪೂಜಿ ನಗರಕ್ಕೆ ಇಲ್ಲಿ ನಿಜವಾದ ಬೆಂಗಳೂರಿನವರು ಇದ್ದಾರೆ. ಅವರು ಒಂದೊಂದು ಸಾರಿ ಬಿಲ್ ಬಂದಾಗ, ಆ ವಠಾರಗಳಲ್ಲಿ ಬಿಲ್ಲಿನ ದುಡ್ಡನ್ನು ಶೇಖರಣೆ ಮಾಡಿ, ಬಿಲ್ ಕಟ್ಟುವುದೂ ಕೂಡ ಬಹಳ ಕಷ್ಟ ಇದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಗೊತ್ತಿದ್ದೂ ಗೊತ್ತಿದ್ದೂ ಕೂಡ, ಬಿ. ಡಬ್ಲ್ಯೂ ಎಸ್‌ಎಸ್‌ಬಿ ಯ ಕ್ರೆಡಿಬಿಲಿಟಿ ಗೊತ್ತಿದ್ದರೂ ಕೂಡ, ಈ ರೀತಿ ಫ್ರೆಂಚ್ ಕಂಪನಿಗೆ ಹೋಗುತ್ತಾ ಇರುವುದು ನನಗನ್ನಿಸುತ್ತದೆ, ಯಾವುದೋ, ಎಲ್ಲೋ ಕಾಣದ ಶಕ್ತಿ ಇದೆಯಲ್ಲಾ, ಆ ಶಕ್ತಿಗೆ ಬರುತ್ತಿರುವ ಲಾಭದಲ್ಲಿ ಆ ಶಕ್ತಿ ಯಾವುದೆಂಬುದನ್ನೂ ಕೂಡ ನಾವು ಇವತ್ತು ಪತ್ತೆ ಹಚ್ಚಬೇಕು. ಆ ಶಕ್ತಿ ಬಹಳ ಮುಖ್ಯ ಅಲ್ಲ. ಇವತ್ತು ಕಾಮನ್ ಮ್ಯಾನ್ ಏನಿದ್ದಾನೆ ಅವನು ಮುಖ್ಯ ಸನ್ಮಾನ್ಯ ಅಧ್ಯಕ್ಷರೇ, ಇನ್ನು ಎರಡೇ ಎರಡು ಪಾಯಿಂಟ್‌ಗಳನ್ನು ಹೇಳುತ್ತೇನೆ. ದಯರಿಟ್ಟು ಈಗಲಾದರೂ ಕೂಡ ಈ ಸರ್ಕಾರಿ ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳಿ ಇವತ್ತು ಅವರು ಹೇಳಿದರು, ಶಾಸಕರುಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇವೆ ಎಂದು, ಆದರೆ ಮಾಡಲಿಲ್ಲ. Yes, BWSSB chairman is a good man; an upright man ಆದರೆ, ಎಲ್ಲೋ ನನಗನ್ನಿಸುತ್ತಾ ಇರುವುದು, Instead of acting as the chairman of BWSSB, he is acting like a dancer, dancing to the tune of privatissation song of this Government, ಈ ಸರ್ಕಾರ ಏನು ಹಾಡು ಹೇಳುತ್ತದೋ ಅದಕ್ಕೆ ಡ್ಯಾನ್ಸ್ ಮಾಡಬೇಕು. ಆ ಪರಿಸ್ಥಿತಿ ತಂದು ಇಟ್ಟಿದ್ದೀರಿ. ಅದಕ್ಕೋಸ್ಕರ ದಯವಿಟ್ಟು 11-7-2002ರ ಆದೇಶ ಏನಿದೆ, ಅದನ್ನು ವಾಪಸ್ ತೆಗೆದುಕೊಳ್ಳಿ. ನಮ್ಮ ಜೊತೆ ಚರ್ಚೆ ಮಾಡಿ. ನಮಗೆ ಯಾವತ್ತೋ ಪ್ರಾಮಿಸ್ ಮಾಡಿದ್ದಿರಿ. ನಿಮ್ಮ ಜೊತೆ ಸಮಾಲೋಚನೆ ಮಾಡುತ್ತೇವೆ, ನಿಮಗೆಲ್ಲರಿಗೂ ಕೂಡ ಮಾಹಿತಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಆ ಒಂದು ಕಮಿಟ್‌ಮೆಂಟ್‌ಗೆ ಬದ್ಧರಾಗಿ ಈ ಒಂದು ಚರ್ಚೆ ನಡೆಯಲಿ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ವಿರೋಧಪಕ್ಷ ಮತ್ತು ಆಡಳಿತ ಪಕ್ಷಗಳು ಸಹಕಾರದಿಂದ ಹೋದರೆ ರಾಜ್ಯದ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದ್ದಾರೆ. ಈ ಸಹಕಾರ ಎನ್ನುವುದಿದೆಲ್ಲಾ ಅದು ಒನ್‌ವೇ ಟ್ರಾಫಿಕ್ ರೀತಿಯಲ್ಲಿ ಆಗಬಾರದು. ಅದು ಕಮರ್ಷಿಯಲ್ ಸ್ಟ್ರೀಟ್ ಆಗಲಿಕ್ಕೆ ಸಾಧ್ಯವಿಲ್ಲ. It should be a two way traffic like our a present day mahatme gandhi road. ಈ ಸರಕಾರಕ್ಕೆ ಕಾವೇರಿ ಸಮಸ್ಯೆ ಬಂದಾಗ ವಿರೋಧಪಕ್ಷಗಳ ಜ್ಞಾಪಕ ಬಂದು ಬಿಡುತ್ತದೆ. ಕೃಷ್ಣಾ ಸಮಸ್ಯೆ ಬಂದಾಗ ವಿರೋಧ ಪಕ್ಷಗಳು ಜ್ಞಾಪಕಕ್ಕೆ ಬರುತ್ತದೆ, ವೀರಪ್ಪನ್ ವಿಚಾರ ಬಂದಾಗ ವಿರೋಧ ಪಕ್ಷಗಳ ಜ್ಞಾಪಕ ಬಂದು ಬಿಡುತ್ತದೆ. Why not for this? ಈ ವಿಚಾರದಲ್ಲಿ ನಮ್ಮನ್ನು ಏಕೆ ಕನ್ಸಿಡರೇಶನ್‌ಗೆ ತೆಗೆದುಕೊಂಡಿಲ್ಲ? ನಮ್ಮ 'ಸಹಕಾರ ಬೇಕು ಎಂದು ಅವರು ನಮ್ಮನ್ನು ಏಕೆ ಕೇಳಲಿಲ್ಲ? ಇದು ಒಂದು ತರಹ you are seeking a conditional co-operation; selective co-operation. ತಮಗೆ ಯಾವಾಗ ಬೇಕೋ

ಆಗ ಕೋ-ಆಪರೇಶನ್ ತೆಗೆದುಕೊಳ್ಳುವುದು, ಇಲ್ಲದೇ ಹೋದರೆ ಬಿಸಾಕುವುದು. ಈ ರೀತಿಯಾಗಿ ನಡೆಯುವುದು ಸರಕಾರಕ್ಕೆ ಸಾಧುವಲ್ಲ. ಮತ್ತೊಂದು ಸಲ ಯಾವುದೇ ತಾಂತ್ರಿಕವಾದ ಕಾರಣವನ್ನು ಇಡದೇ ಬೆಂಗಳೂರಿನ ಹಿತದೃಷ್ಟಿಯಿಂದ 11-07-02 ಸರಕಾರದ ಆದೇಶ ಏನಿದೆ, ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಏನೇ ಇದ್ದರೂ ಕೂಡ, ಬೇಕಾದರೆ ಅವರು ಇನ್‌ವೆಸ್ಟ್‌ಮೆಂಟ್ ಮಾಡಲಿ, ಅದನ್ನು ಬಿಟ್ಟು ಏನೂ ಇನವೆಸ್ಟ್‌ಮೆಂಟ್ ಮಾಡುವುದಿಲ್ಲ, ನಾವು ಇರುವುದೇ ದರ್ಬಾರು ಮಾಡಲಿಕ್ಕೆ ಎನ್ನುವ ಅವರ ಪೊಗರು ಏನಿದೆ, ಅದಕ್ಕೆ ನೀವು ದಾಸರು ಆಗಬೇಡಿ. ಖಾಸಗೀಕರಣದ ಈ ಸ್ವರೂಪವೇನಿದೆ, ಪ್ರಾಯಶಃ ನಿಮ್ಮ ಮುಂದಿನ ಖಾಸಗೀಕರಣಕ್ಕೆ ಬಹಳ ದೊಡ್ಡ ಏಟು ತಗಲಬಹುದು. ಎನ್ರಾನ್ ಆದ ಹಾಗೆ ಅದಕ್ಕೆ ನೀವು ಅವಕಾಶ ಮಾಡಿಕೊಡದೆ ದಯಮಾಡಿ ಬೆಂಗಳೂರು ನಾಗರೀಕರ ಅಳಲನ್ನು ತಿಳಿದುಕೊಂಡು ಈ ಖಾಸಗೀಕರಣದ ಹುಚ್ಚನ್ನು ಬಿಟ್ಟು ಆ ಆರ್ಡರ್‌ನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ಪ್ರಾಯಶಃ ಬೆಂಗಳೂರಿನಲ್ಲಿಯೂ ಕೂಡ ನಾವು ಜನಜಾಗೃತಿ ಮಾಡಬೇಕಾಗುತ್ತದೆ, ಜನರೂ ಕೂಡ ಬರುವ ಸಂಬಳವನ್ನೆಲ್ಲಾ ನೀರಿಗೆ ಕೊಟ್ಟು ಬದುಕುವುದಕ್ಕೆ ಆಗುವುದಿಲ್ಲ. They cannot live ಆವತ್ತು ಉಪ್ಪಿನ ಸತ್ಯಾಗ್ರಹ ಆದ ಹಾಗೆ ಇವೊತ್ತು ಕುಡಿಯುವ ನೀರಿನ ಸತ್ಯಾಗ್ರಸ ಮಾಡುವಂಥ ಪ್ರಸಂಗ ಬಂದಿದೆ. ಅದಕ್ಕೋಸ್ಕರವಾಗಿ ನಾನು ಮತ್ತೊಮ್ಮೆ ಸರಕಾರವನ್ನು ಆಗ್ರಹ ಮಾಡಿಕೊಳ್ಳುತ್ತೇನೆ, ಯಾವುದೇ ಕಾರಣಕ್ಕೂ 11ನೇ ತಾರೀಖು ಏನು ಸರಕಾರದ ಆದೇಶ ಕೊಟ್ಟಿದ್ದೀರಿ ಅದನ್ನು ಚಾಲನೆಯಲ್ಲಿ ಕೊಡದೆ ಸ್ವಲ್ಪವಾದರೂ ಜನರು, ಜನಪ್ರತಿನಿಧಿಗಳು ಅವರುಗಳ ಬಗ್ಗೆಯೂ ಕೂಡ ಮಮಕಾರದಿಂದ, ವಿಶ್ವಾಸದಿಂದ ನೋಡಬೇಕಾಗುತ್ತದೆ. ಯಾರು ಬೆಂಗಳೂರಿಗೆ ಬಂದು ಲಾ - ಮೆರೀಡಿಯನ್ ಹೋಟಲ್‌ನಲ್ಲಿ ಉಳಿಯುತ್ತಾರಲ್ಲಾ ಅವರಿಗೆ ಮಾತ್ರ ಮರ್ಯಾದೆ ಕೊಡುವುದಕ್ಕೆ ಹೋಗಬೇಡಿ. ಅವರಿಗೆ ಮರ್ಯಾದೆ ಕೊಟ್ಟರೆ ನಮಗೂ ಕೂಡ ಕೊಡಿ, ನಮ್ಮನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳಿ. ಯಾವುದೇ ಕಾರಣಕ್ಕೂ ಈ ರೀತಿಯಾದಂಥ ಖಾಸಗೀಕರಣವನ್ನು ಮಾಡಬಾರದು ಎಂದು ನಾನು ಆಗ್ರಹ ಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಆಹಾರ ನಾಗರೀಕ ಪೂರೈಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸುರೇಶ್ ಕುಮಾರ್‌ರವರು ಸರ್ ಮಿರ್ಜಾ ಇಸ್ಮಾಯಿಲ್‌ರವರ ಆಡಳಿತ ಕಾಲದ ಒಂದು ಕತೆಯನ್ನು ಚೆನ್ನಾಗಿ ಹೇಳಿದ್ದಾರೆ. ಅದೇ ನಮ್ಮ ಸರಕಾರದವರು ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಔಟ್‌ಸ್ಕರ್ಟ್‌ನಲ್ಲಿ ನಮ್ಮ ಹಳೆಯ ಕಾರ್ಪೋರೇಶನ್ ಲಿಮಿಟ್ ಬಿಟ್ಟು ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರಲಿಲ್ಲ. ನಮ್ಮ ಸರಕಾರ ಬಂದ ಮೇಲೆ ಮುನ್ನೂರು ಚಿಲ್ಲರೆ ಕೋಟಿ ರೂಪಾಯಿ ವೆಚ್ಚದಲ್ಲಿ ಆ ಕೆಲಸವನ್ನು ಕಾರ್ಯಗತ ಮಾಡುತ್ತಿದ್ದೇವೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು : ಮಾನ್ಯ ಸುರೇಶ್‌ಕುಮಾರ್‌ರವರು ನೀರು ಯಾರಿಗೂ ಕೊಡಬಾರದು ಎಂದು ಹೇಳಿಲ್ಲ. ನೀವು ನೀರು ಕೊಟ್ಟಿರಬಹುದು ಅದು ಒಳ್ಳೆಯ ಕೆಲಸ.

ಶ್ರೀ ಎ. ಸೋಮಣ್ಣ (ಬಿನ್ನಿಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಲಮಂಡಳಿಯ ಕೆಲವು ವಿಭಾಗಗಳನ್ನು ಖಾಸಗೀಕರಣಗೊಳಿಸತಕ್ಕಂಥ ಒಂದು ಪ್ರಕ್ರಿಯೆ ಏನು 11-7-02 ರಲ್ಲಿ ಆಗಿದೆ, ಇದಕ್ಕೆ ಮುಂಚಿತವಾಗಿ ನಾನು ಬೆಂಗಳೂರು ನಗರದ ಎಲ್ಲಾ ಶಾಸಕರುಗಳು ಮತ್ತು ನಮ್ಮ ಮಿತ್ರರಾಗಿರತಕ್ಕಂಥ ಮತ್ತು ಸಚಿವರಾಗಿರತಕ್ಕಂಥ ಶ್ರೀ ರಾಮಲಿಂಗಾರೆಡ್ಡಿಯವರೂ ಸೇರಿ ಇದು ಕ್ಲೂ ಗೊತ್ತಾದ ತಕ್ಷಣ 2001 ಜನವರಿಯಲ್ಲಿ ಅಂದಿನ ಅಧ್ಯಕ್ಷರಿಗೆ ನಾನೇ ಸ್ವತಃ ದೂರವಾಣಿ

ಮಾಡಿ ಪತ್ರ ಬರೆದು ಈ ರೀತಿಯಾದ ಗುಮಾನಿಗಳು ಬರುತ್ತಾ ಇವೆ, ಇದಕ್ಕೆ ನಮಗೆ ಕೆಲವೊಂದು ವಿವರಗಳು ಬೇಕಾಗಿವೆ ತಾವು ಒಂದು ಸಭೆಯನ್ನು ಕರೆಯಲೇ ಬೇಕೆಂದು ಒತ್ತಾಯ ಮಾಡಿದ ಮೇಲೆ ಒಂದು ಸಭೆಯನ್ನು ಕರೆದು ಆ ಸಭೆಯಲ್ಲಿ ನಡೆದಂಥ ಎಲ್ಲಾ ವಿಚಾರಗಳನ್ನು ಮಿತ್ರರಾಗಿರತಕ್ಕಂಥ ಸುರೇಶ್‌ಕುಮಾರ್‌ರವರು ವಿವರವಾಗಿ ತಿಳಿಸಿದ್ದಾರೆ. ಅವರು ತಿಳಿಸಿರತಕ್ಕಂಥ ವಿಚಾರಗಳನ್ನು ಮತ್ತೊಮ್ಮೆ ಮಾತನಾಡಲು ಅಥವಾ ಪುನರಾವರ್ತನೆ ಮಾಡಲು ಹೋಗುವುದಿಲ್ಲ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ, ನಾನು, ಸುರೇಶ್‌ಕುಮಾರ್, ರಾಮಲಿಂಗಾರೆಡ್ಡಿಯವರು 20 ವರ್ಷಗಳಿಂದ ಈ ನಗರದ ಜನರ ಮಧ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಚುನಾವಣೆಗಳಲ್ಲಿ ಗೆದ್ದು ಬಂದಿದ್ದೇವೆ. ಅವರು ಒಂದು ಸಾರಿ ಕಾರ್ಪೋರೇಟರ್ ಆಗಿದ್ದರು, ನಾವು ಎರಡು ಸಾರಿ ಆಗಿದ್ದೆವು, ರಾಮಲಿಂಗಾರೆಡ್ಡಿಯವರು ಮೂರು ಸಾರಿ ಶಾಸಕರಾದರು, ಇವೊತ್ತು ಸಚಿವರಾಗಿದ್ದಾರೆ. ನಾನು ಸುರೇಶ್‌ಕುಮಾರ್‌ರವರು ಎರಡುಸಾರಿ ನಗರಪಾಲಿಕೆ ಸದಸ್ಯರಾಗಿ ತದನಂತರ ಎರಡು ಸಾರಿ ಶಾಸಕರರಾಗಿ ನಾನು ಕೊನೆಯಲ್ಲಿ ಹೋದ ಸರಕಾರದಲ್ಲಿ ಸಚಿವರನಾಗಿ ಬೆಂಗಳೂರು ನಗರದ ನಿರ್ವಹಣೆಯನ್ನು ಕಾವೇರಿ 4ನೇ ಹಂತದ ಮೊದಲನೇ ಘಟ್ಟದ ಕೆಲಸವನ್ನು ಅಂದಿನ ಮುಖ್ಯಮಂತ್ರಿಯವರಾಗಿದ್ದಂಥ ದಿವಂಗತ ಜೆ.ಹೆಚ್. ಪಟೇಲರವರು ಸ್ಫೂರ್ತಿಯ ಮೇರೆಗೆ ಇವತ್ತೋ ಕಾವೇರಿ ನಾಲ್ಕನೇ ಹಂತದ ಮೊದಲನೇ ಘಟ್ಟದ 270 ಎಂಎಂಎಲ್‌ಡಿ ನೀರು ಬೆಂಗಳೂರು ನಗರವನ್ನು ಪ್ರವೇಶ ಮಾಡಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಬೆಂಗಳೂರು ನಗರವು ಕೆಂಪೇಗೌಡರ ಕನಸಿನ ಕೂಸು. ಈ ನಗರ ಇಷ್ಟೊಂದು ದೊಡ್ಡದಾಗಿ ಬೆಳೆಯುತ್ತದೆ ಎಂಬ ಭಾವನೆಯು ಯಾರಿಗೂ ಇಲ್ಲದಿದ್ದರೂ ಕೂಡ 1935ರಲ್ಲಿ ತಿಪ್ಪಗೊಂಡನಹಳ್ಳಿಯಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟಿ ಬೆಂಗಳೂರು ಜನರಿಗೆ ನೀರನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡಿದರು. ಅದಾದಮೇಲೆ 1964ರಲ್ಲಿ ಏನು ಇವೊತ್ತು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸ್ಥಾಪನೆಯಾದ ಮೇಲೆ, 3-4ನೇ ಹಂತಗಳ ನೀರನ್ನು ಈ ನಗರಕ್ಕೆ ಕೊಟ್ಟಿದ್ದಾರೆ. ಕೊಟ್ಟಿರತಕ್ಕಂಥ ನೀರಿನಲ್ಲಿ ಕಾವೇರಿ ನಾಲ್ಕನೇ ಹಂತವನ್ನು ಹೊರತುಪಡಿಸಿ, ಸುಮಾರು 700 ಎಂಎಲ್‌ಡಿ ನೀರನ್ನು ಈ ನಗರದ 66 ಲಕ್ಷ ನೀರಿಗೆ ಕೊಡತಕ್ಕಂಥ ಒಂದು ವ್ಯವಸ್ಥೆ ಆಗಿದೆ. ಈ ನಗರದಲ್ಲಿರತಕ್ಕಂಥವರು ಮೂರು ಲಕ್ಷದ ಎಪ್ಪತ್ತು ಸಾವಿರಕ್ಕೂ ಮೇಲ್ಪಟ್ಟು ಗ್ರಾಹಕರು ನೂರಕ್ಕೆ ನೂರರಷ್ಟು ಮೀಟರ್‌ನ್ನು ಒಳಪಡಿಸಿಕೊಂಡಂಥವರು. ಅದೇ ಚೆನ್ನೈ ನಗರದಲ್ಲಿ 600 ಎಂಎಲ್‌ಡಿ ನೀರನ್ನು ತೆಗೆದುಕೊಳ್ಳುತ್ತಾರೆ ಅಲ್ಲಿ ಒಂದು ಲಕ್ಷದ 65 ಸಾವಿರ ಗ್ರಾಹಕರಿದ್ದಾರೆ. ಹೈದ್ರಾಬಾದ್ ನಗರದಲ್ಲಿ 700 ಎಂಎಲ್‌ಡಿ ನೀರನ್ನು ತೆಗೆದುಕೊಳ್ಳುತ್ತಾರೆ, ಅಲ್ಲಿರತಕ್ಕಂಥ ಗ್ರಾಹಕರು ಒಂದು ಲಕ್ಷದ ಐವತ್ತು ಸಾವಿರ ಸಂಖ್ಯೆಯಲ್ಲಿದ್ದಾರೆ. ಇಂಥ ಎಲ್ಲಾ ವ್ಯವಸ್ಥೆಗಳಲ್ಲಿಯೂ ಕೂಡ ನಮ್ಮ ಸ್ನೇಹಿತರುಗಳೇನು ವಿವರವಾಗಿ ತಿಳಿಸಿದ್ದಾರೆ, ಅದರಲ್ಲಿ ಕೆಲವು ವಿಚಾರಗಳನ್ನು ಮಾತ್ರ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನನಗೆ ಒಂದು ಸಂಶಯ ಬಂದಿರತಕ್ಕಂಥಾದ್ದು ಈ ರಾಜ್ಯದ ರಾಜಧಾನಿಯ ವ್ಯವಸ್ಥೆಯನ್ನು ಸರಿದೂಗಿಸತಕ್ಕಂಥಾದ್ದರಲ್ಲಿ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿರತಕ್ಕಂಥ ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು, ಬೆಂಗಳೂರು ನಗರಕ್ಕೆ ಒಂದು ಹೊಸ ಆಧ್ಯತೆಯನ್ನು ಕೊಟ್ಟು ಈ ನಗರವನ್ನು ಬೇರೆ ರಾಷ್ಟ್ರಗಳಂತೆ ಮಾದರಿ ನಗರವನ್ನಾಗಿ ಮಾಡುತ್ತೇನೆ ಎನ್ನುವ ಒಂದು ಆಲೋಚನೆಯನ್ನು ಇಟ್ಟುಕೊಂಡು ಅದರ ಬಗ್ಗೆ ಎಲ್ಲೋ ಒಂದು ಕಡೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ

ಎನ್ನುವ ಭಾವನೆಯನ್ನು ಇಟ್ಟುಕೊಂಡು ಕೆಲಸವನ್ನು ಮಾಡುವಾಗ ಇಂಥ ಒಂದು ದುರಾದೃಷ್ಟಕರ, ಯಾರಿಗೆ ಇಂಥ ಮಾರಕವಾದಂಥ ಭಾವನೆ ಇದೆ, ಬೆಂಗಳೂರು ನಗರದಲ್ಲಿ ವಾಸ ಮಾಡತಕ್ಕಂಥ ಜನರೇನಿದ್ದಾರೆ, ಇಂಥ ಜನರಿಗೆ ಒಂದು ರೀತಿಯಲ್ಲಿ ಕೊಡಲಿ ಪೆಟ್ಟನ್ನು ಕೊಡತಕ್ಕಂಥಾದ್ದಕ್ಕೆ ಅರರ ತಲೆಗೆ ಈ ಯೋಜನೆಯನ್ನು ಕೊಟ್ಟಂಥ ಬೃಹಸ್ಪತಿ ಯಾರು ಎನ್ನುವುದು ಗೊತ್ತಿಲ್ಲ ಎಲ್ಲೋ ಒಂದು ಕಡೆ ಅವರ ಹುಡುಕಾಟವನ್ನು ನಾವು ಮಾಡುತ್ತಾ ಇದ್ದೇವೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನೂ ಕೂಡ ಸಚಿವನಾಗಿದ್ದೆ. ಸಚಿವರನಾಗಿದ್ದಾಗ ಈ ರೀತಿಯಾದ ಪ್ರಸ್ತಾವನೆಗಳು ಬಂದಿದ್ದವು. ಇಡೀ ಸದನದಲ್ಲಿ ನಮ್ಮ ಕಾಗೋಡು ತಿಮ್ಮಪ್ಪನವರು, ರಾಮಲಿಂಗಾರೆಡ್ಡಿಯವರು ಮುಂತಾಗಿ ಅನೇಕ ಹಿರಿಯರು ಇಲ್ಲಿದ್ದಾರೆ. ಇವರೆಲ್ಲರೂ ಕೂಡ ಆಗ ಎಲ್ಲಾ ವ್ಯವಸ್ಥೆಯನ್ನು ನೀವು ಪ್ರೈವಾಟರ್ ಸಂಸ್ಥೆಗೆ ಕೊಡುತ್ತಾ ಇದ್ದೀರಿ, ಎಂದು ಕೂಗಾಡಿರತಕ್ಕಂಥ ಸನ್ನಿವೇಶನಗಳು ಸಾಕಷ್ಟು ಇದ್ದುವು. ಅಂದಿನ ಮುಖ್ಯಮಂತ್ರಿಯವರಾದ ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಆ ಕುರಿತು ಕೊನೆಯ ಕಡತ ಬಂದಾಗ, ನಾನು ಆ ಕಡತವನ್ನು ತೆಗೆದುಕೊಂಡು ಹೋಗಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಾಗ ಒಂದು ವಿನಂತಿಯನ್ನು ಮಾಡಿದೆ. ಇದು ಬೆಂಗಳೂರು ನಗರಕ್ಕೆ 270ಎಂಎಲ್‌ಡಿ ನೀರನ್ನು ಕಾವೇರಿ ನಾಲ್ಕನೇ ಹಂತದ ಮೊದಲನೇ ಘಟ್ಟದಲ್ಲಿ 1080 ಕೋಟಿ ರೂ.ಪಾಯಿಗಳನ್ನು ಯಾವುದೋ ಒಂದು ಸಂಸ್ಥೆಗೆ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುವುದು ಸಾಧುವಾದುದು ಅಲ್ಲ, ಹಾಗಾದರೆ ನಗರದ ಜನರು ಒಂದು ಸಾವಿರ ಲೀಟರ್ ನೀರಿಗೆ 33 ರೂಪಾಯಿಗಳವರೆಗೆ ಕೊಡಬೇಕಾಗುತ್ತದೆಯಾದುದ್ದರಿಂದ ಇದನ್ನು ಮಾಡುವುದು ಬೇಡ ನಿಮ್ಮ ಕಾಲದಲ್ಲಿ ಇಂತಹ ಪ್ರಕ್ರಿಯೆಗೆ ಚಾಲನೆ ಕೊಡುವುದು ಬೇಡ ಎಂದು ಅವರಲ್ಲಿ ವಿನಂತಿ ಮಾಡಿಕೊಂಡೆ, ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಆ ಕಡತವನ್ನು ಪಕ್ಕದಲ್ಲಿ ಇರಿಸಿದರು.

4.40 ಪಿ.ಎಂ.

ಆ ಕಡತಕ್ಕೆ ತಿಲಾಂಜಲಿಯನ್ನು ಮಾಡಲಾಯಿತು. ಅದಾದ ಮೇಲೆ ಆಸ್ಟ್ರೇಲಿಯಾದಿಂದ ಒಂದು ಟೀಮ್ ಬಂತು. ಅವರು ಈ ನಗರಕ್ಕೆ ನೀರನ್ನು ಕೊಡುತ್ತೇವೆ, ನಾವು ನೀರು ಒದಗಿಸಬೇಕಾದರೆ ನಗರದ ನೀರು ನಿರ್ವಹಣೆಯನ್ನೂ ನಮಗೆ ಕೊಡಬೇಕು ಅಂದರು. ಆವಾಗ ಅವರಿಗೆ ನಾನು ವಿನಂತಿಸಿದೆ ನಿಮಗೇನಾದರೂ ಕರ್ನಾಟಕದ ಬಗ್ಗೆ ಕಳಕಳಿ ಇದ್ದರೆ, ಮೈಸೂರು, ಹುಬ್ಬಳ್ಳಿ, ರಾಜ್ಯದ ಮಧ್ಯಬಾಗದಲ್ಲಿರುವ ದಾವಣಗೆರೆ ನಗರಗಳಲ್ಲಿ ತೆಗೆದುಕೊಳ್ಳಿ ತಕ್ಷಣ ಕೊಡುತ್ತೇವೆ ಎಂದು ಹೇಳಿದ ಮೇಲೆ ಅವರು ಅಧ್ಯಯನ ಮಾಡಿ ಬಂದು ಒಂದೂವರೆ ತಿಂಗಳಲ್ಲಿ ಹೇಳುತ್ತಾರೆ; ನಮಗೆ ಗಿಟ್ಟುವುದಿಲ್ಲ, ನಾವು ಮಾಡುವುದಿಲ್ಲ ಅಂತ. ಹಾಗಾದರೆ ಬೆಂಗಳೂರು ನಗರದಲ್ಲಿ ಮಾಡುತ್ತೇವೆಂದು ಯಾಕೆ ಹೇಳಿದಿರಿ ಅಂತ ಕೇಳಿದ್ದಕ್ಕೆ ಇಲ್ಲಿ ಗಿಟ್ಟುತ್ತದೆ ನಾವು ಮಾಡುತ್ತೇವೆ ಎಂದರು. ಆಗ ನಾನು ಇದನ್ನು ನೀವು ಮಾಡುವುದು ಬೇಡ, ಇದನ್ನು ಮಾಡುವುದಕ್ಕೆ ಒಂದು ಯೋಜನೆಯನ್ನು ರೂಪರೇಷೆಗಳನ್ನು ಕೊಡಿ ಎಂದು ಕೇಳಿದಾಗ ಅವರು ನಮ್ಮ ಜಲಮಂಡಲಿ ಅಧಿಕಾರಿಗಳೊಡನೆ ಬೆರೆತು ತಿಂಗಳಾನುಗಟ್ಟಲೆ ಸುತ್ತಾಡಿ ಈ ನಗರದ ಕುಡಿಯುವ ನೀರು, ಸೋರುವಿಕೆ, ಹಳೆಯ ಪೈಪುಗಳನ್ನು ಬದಲಾವಣೆ ಮಾಡುವುದು ಮತ್ತು ಇವತ್ತು ವೃಷಭಾವತಿ ನದಿಯಲ್ಲಿ ಚೆಲ್ಲಘಟ್ಟ ಕೆರೆ ಕಡೆಗೆ ಹೋಗುವ ಸ್ಯಾನಿಟರಿ ನೀರೇನಿದೆ ಆ ಕೊಳಚೆ ನೀರನ್ನು ನೈರ್ಮಲೀಕರಣಗೊಳಿಸುವುದು- ಇದೆಲ್ಲಾ ಸೇರಿ 240 ಕೋಟಿ ರೂ.ಗಳ ಒಂದು ಯೋಜನೆಯನ್ನು

ಸರ್ಕಾರದ ಮುಂದಿಟ್ಟರು. ನಾವು ಅವರಿಗೆ ಆವತ್ತೂ ಕೂಡ ಹೇಳಿದೆವು 240 ಕೋಟಿ ರೂಪಾಯಿ ಖರ್ಚು ಮಾಡಿದರೆ ಇಡೀ ನಗರದ ವ್ಯವಸ್ಥೆಯನ್ನು ಸರಿಮಾಡಬಹುದು. ಅಂತ ಅಲ್ಲಿಗೆ ನಮ್ಮ ಅವಧಿ ಮುಗಿಯಿತು. ನಾವು ಪಕ್ಕಕ್ಕೆ ಬಂದ್ವಿ. ಇದಾದಮೇಲೆ ಯಾಕೋ ಏನೋ ನನಗೆ ಗೊತ್ತಿಲ್ಲ. ಕೆಲವು ಅಂಶಗಳನ್ನು ತಮ್ಮ ಮುಂದಿಡುತ್ತೇನೆ. ನನಗೆ ಎರಡು ವಿಷಯಗಳ ಮೇಲೆ ಇವತ್ತು ಸರ್ಕಾರದ ಮೇಲೆ, ಸರ್ಕಾರವನ್ನು ನಿರ್ವಹಣೆ ಮಾಡುತ್ತಿರುವ ಮುಖ್ಯಮಂತ್ರಿಗಳು ಎಲ್ಲೋ ಒಂದು ಕಡೆ ಯಾರ ಮಾತಿಗೋಸ್ಕರವಾಗಿ ದೂರ ಇವತ್ತು 1 ಸಾವಿರ ಲೀಟರಿಗೆ 7 ರೂ ಇದ್ದುದು 13 ರೂ ಮಾಡಿದ್ದೀರಿ. ಇಷ್ಟೆಲ್ಲಾ ಹಣವಿದ್ದರೂ ಬೆಂಗಳೂರಿನ ನಗರದ ಜನ ಕೇವಲ ಒಂದು ವರ್ಷದಲ್ಲಿ ಎರಡು ಬಾರಿ ವಿದ್ಯುಚ್ಛಕ್ತಿ ದರವನ್ನು ನಾವು ದ್ವಿಗುಣಗೊಳಿಸಿದರೂ ಕೂಡ ಈ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ಒಂದೇ ಒಂದು ಚಕಾರ ಎತ್ತಲಿಲ್ಲ. ನಮ್ಮ ಹತ್ತಿರ 700 ಎಂಎಲ್‌ಡಿ ನೀರು ನಮ್ಮ ಹತ್ತಿರ ಇತ್ತು ಮತ್ತೆ 1080- ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿ 270 ಎಂಎಲ್‌ಡಿ ಸೇರಿ ಒಟ್ಟು 970 ಎಂಎಲ್‌ಡಿ ನೀರು ಬೆಂಗಳೂರಿಗೆ ಸರಾಗವಾಗಿ ಕಾವೇರಿ ನೀರು ಹರಿದುಬರುತ್ತಿರುವ ಸಂದರ್ಭದಲ್ಲಿ ಖಾಸಗೀಕರಣಗೊಳಿಸುವ ವ್ಯವಸ್ಥೆ ಏತಕ್ಕೋಸ್ಕರವಾಗಿ? ಯಾರಿಗೋಸ್ಕರವಾಗಿ? ಇದರ ಅವಶ್ಯಕತೆ ಇತ್ತಾ? ಯಾರ ಒಂದು ಮರ್ಜಿಗೋಸ್ಕರ ಬಾಧಕಗಳ ಅರಿವಿಲ್ಲದೆ ಇದನ್ನು ಮಾಡುವ ಅವಶ್ಯಕತೆಯಾದರೂ ಏನು? ಇದರ ಬಗ್ಗೆ ದಯಮಾಡಿ ತಿಳಿಸಬೇಕು. ಆದರೆ ಒಂದನ್ನು ತಮ್ಮ ಗಮನಕ್ಕೆ ತರುತ್ತೇನೆ. ಒನಿಡಿಯೋ ಮತ್ತು ವಿವಿಡಾ ಫ್ರೆಂಚ್ ಕಂಪೆನಿ ಅಂತ ಹೇಳುತ್ತಾರೆ. ಆ ಕಂಪೆನಿಯಿಂದ ಬರುವವರು ಕೇವಲ 44 ಜನ, ಈ 44 ಜನರಿಗೆ ಒಂದು ತಿಂಗಳ ಸಂಬಳ 2 ಕೋಟಿ 40 ಲಕ್ಷ ರೂಪಾಯಿಗಳು ಯಾರು ಮ್ಯಾನೇಜರ್ ಕೆಲಸ ಮಾಡಲಿಕ್ಕೆ ಬರುತ್ತಾರೆ ಬೆಂಗಳೂರು ಜಲಮಂಡಳಿಯ ಚುಕ್ಕಾಣಿಯನ್ನು ಹಿಡಿಯಲಿಕ್ಕೆ ಬರುತ್ತಾರೆ ಅವರು ಕೇವಲ 44 ಜನ ಈ 44 ಜನರಿಗೆ ಜಲಮಂಡಳಿಯಿಂದ ಭರಿಸತಕ್ಕ ಹಣ 2 ಕೋಟಿ 40 ಲಕ್ಷ ರೂಪಾಯಿ 2900 ಸಿಬ್ಬಂದಿಯಿರುವ ಜಲಮಂಡಲಿಗೆ ಒಂದು ತಿಂಗಳಿಗೆ ನಾವು ಕೊಡುತ್ತಾ ಇರುವ ಸಂಬಳ 4.36 ಕೋಟಿ ರೂಗಳು 20 ವರ್ಷದಿಂದ ನೇಮಕಾತಿ ಆಗದಿದ್ದರೂ ಇಷ್ಟೆಲ್ಲಾ ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರು 2900 ಜನ ಕಾಯಾವಾಚಾಮನಸಾ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ ಅವರನ್ನು ತಂದು ನಮ್ಮ ಮೇಲೆ ಭಾರ ಹೊರಿಸುವ ಒಂದು ವ್ಯವಸ್ಥೆ, ಈ ವವಸ್ಥೆಯ ಅವಶ್ಯಕತೆ ಇವತ್ತಿನ ದಿನಗಳಲ್ಲೂ ಇದೆಯಾ ಎಂಬ ಬಗ್ಗೆ ತಾವು ಚಿಂತನೆ ಮಾಡಬೇಕಾಗಿದೆ ಮತ್ತು ಸರ್ಕಾರಕ್ಕೆ ಎರಡು ಮೂರು ವಿಚಾರಗಳಲ್ಲಿ ಯಾರು ಮಾಹಿತಿ ಕೊಟ್ಟಿದ್ದಾರೋ ಅವರು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅದೇನೆಂದರೆ ಶೇಕಡ 48 ಸೋರಿಕೆ ಇದೆ ಎಂದರೆ ನೀವು ಒಪ್ಪುತ್ತೀರಾ? 700 ಎಲ್‌ಡಿ ನೀರು 3.70 ಲಕ್ಷ ಗ್ರಾಹಕರಿಗೆ ಹೋಗುತ್ತಿರುವಾಗ 48 ಪರ್ಸೆಂಟ್ ಸೋರಿಕೆ ಇದ್ದರೆ ಎಲ್ಲಿಂದ ನೀರು ತಂದುಕೊಡಬಹುದು ಹೇಳಿ? ನಾನೂ ಕೂಡ ಸಚಿವನಾಗಿ ಕೆಲಸ ಮಾಡಿದ್ದೇನೆ. ಬೆಂಗಳೂರಿನ ಅನೇಕ ಬಡಾವಣೆಗಳಲ್ಲಿ ಸುತ್ತಾಡಿದ್ದೇನೆ. ನಗರಪಾಲಿಕೆ ಸದಸ್ಯನಾಗಿ, ಸ್ಥಾಯಿಸಮಿತಿ ಅಧ್ಯಕ್ಷನಾಗಿ ಮತ್ತೆ ಎಲ್ಲಾ ಒಂದು ಕಡೆ ಈ ನಗರದ ಜನತೆ ಜೊತೆ ಸ್ಪಂದಿಸುವ ಕೆಲಸ ಬಹುತೇಕ ಮಾಡಿದ್ದೇನೆ. ಇವೆಲ್ಲಾ ಮಾಡುವ ಸಂದರ್ಭದಲ್ಲಿ, ನಮ್ಮಲ್ಲಿನ ವಾಸ್ತವಾಂಶ ಶೇಕಡ 30ರ ಮೇಲೆ ಸೋರುವಿಕೆ ಇದ್ದರೆ ಅದನ್ನು ಆ ಫ್ರೆಂಚ್ ಕಂಪೆನಿ ರುಜುವಾತು ಪಡಿಸಿದರೆ ನೀವು ಯಾವ ತೀರ್ಮಾನ ತೆಗೆದುಕೊಳ್ಳುತ್ತೀರೋ

ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಇವತ್ತು ನಮ್ಮಲ್ಲಿನ ನೀರನ್ನು ನಾವು ಯಾವ ರೀತಿ ಹಂಚುತ್ತಿದ್ದೇವೆಂದರೆ, ಗೃಹಬಳಕೆ, ಯಾರಿಗೆ? ಸಾಮಾನ್ಯ ಜನ ಬಡವರು ವಾಸಮಾಡುವ ಪ್ರದೇಶಗಳಿಗೆ ಸೊನ್ನೆಯಿಂದ 15,000 ಲೀಟರ್, 15,000 ದಿಂದ 25,000 ಲೀಟರ್, 25,000 ದಿಂದ 50,000 ಲೀಟರ್, 50,000 ದಿಂದ 75,000 ಲೀಟರ್ ಯಾರು ತೆಗೆದುಕೊಳ್ಳುತ್ತಾರೆ ಇಂಥವರು ಶೇಕಡ 40, ನಾನ್ ಡೊಮೆಸ್ಟಿಕ್‌ಗೆ 10 ಪರ್ಸೆಂಟ್, ರೈಲ್ವೆ ಮತ್ತು ಡಿಫೆನ್ಸ್‌ನವರಿಗೆ 10 ಪರ್ಸೆಂಟ್, ಇಂಡಸ್ಟ್ರೀಸ್‌ಗೆ 10 ಪರ್ಸೆಂಟ್ ಅದಲ್ಲದೆ ಪಬ್ಲಿಕ್ ಟ್ಯಾಪ್ಸ್ ನಾವು ಕ್ಷೇತ್ರಗಳಿಗೆ ಹೋದಾಗ 365 ಕೊಳಚೆ ಪ್ರದೇಶಗಳು ಬೆಂಗಳೂರು ಸರಹದ್ದಿನಲ್ಲಿವೆ ಇನ್ನು ಅಘೋಷಿತ ಕೊಳಚೆ ಪ್ರದೇಶಗಳು ನೂರಾರಿವೆ. ಹೋದ ಕಡೆಯೆಲ್ಲಾ ಜನ ಹಿಡಿದುಕೊಳ್ಳುತ್ತಾರೆ ಒಂದು ಪಬ್ಲಿಕ್ ಟ್ಯಾಪ್ ಹಾಕಿಕೊಡಿ ಸ್ವಾಮಿ ಅಂತ. ಆಗ ನಾವು ಪಬ್ಲಿಕ್ ಟ್ಯಾಪ್ ಹಾಕಿರಿ ಎನ್ನುತ್ತೇರೆ. ಅಂಥಾದ್ದು 10 ಪರ್ಸೆಂಟಿದೆ, ಮತ್ತೆ ಅನಧಿಕೃತವಾಗಿರುವುದು 5 ಪರ್ಸೆಂಟ್ - ಹೀಗೆ 75 ಪರ್ಸೆಂಟ್ ನೀರನ್ನು ಬೆಂಗಳೂರಿಗೆ ಜಲಮಂಡಲಿ ತಲುಪಿಸುವ ಕೆಲಸ ಮಾಡುತ್ತಿರುವಾಗ 48 ಪರ್ಸೆಂಟ್ ಸೋರುವಿಕೆ ಇದೆಯೆಂದು ಫ್ರೆಂಚಿನವರು ಹೇಳುತ್ತಾರೆ ಹಿಂದೆ ಬ್ರಿಟಿಷರು ಇಂಡಿಯಾಕ್ಕೆ ಯಾವ ರೀತಿ ಟೋಪಿ ಹಾಕಿದರೋ, ಆ ಟೋಪಿ ಹಾಕುವ ಕೆಲಸವನ್ನು ಇವತ್ತು ಮಾಡಲು ಹೊರಟಿರುವಾಗ ಈ ಹುನ್ನಾರಕ್ಕೆ ಬಲಿಯಾಗುವುದು ಸರ್ಕಾರ ಮತ್ತು ನಾವುಗಳಲ್ಲ, ಬದಲಿಗೆ ರಾಜಧಾನಿಯಲ್ಲಿರುವ 65 ಲಕ್ಷ ಜನ. ಆದ್ದರಿಂದ ಸೋರುವಿಕೆ ಪ್ರಯಾಣದ ಬಗ್ಗೆ ಒಂದು ವೈಟ್‌ಪೇಪರನ್ನು ಸರ್ಕಾರ ಹೊರಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲು ಇಚ್ಛೆಪಡುತ್ತೇನೆ. ಅದಲ್ಲದೆ ಹಿಂದೆ ಇದ್ದ ಸರ್ಕಾರದ ಅವಧಿಯಲ್ಲಿ 46,000 ಅನಧಿಕೃತ ಕನೆಕ್ಷನ್‌ಗಳಿದ್ದವು. ಸನ್ಮಾನ್ಯ ಜೆಎಚ್ ಪಟೇಲರ ಹತ್ತಿರ ಫೈಲ್ ತೆಗೆದುಕೊಂಡು ಹೋದಾಗ ಅವರು ತಕ್ಷಣ ಅವೆಲ್ಲವನ್ನೂ ರೆಗ್ಯುಲರೈಸ್ ಮಾಡಿದರು. ಇದರಿಂದ ಅವರಿಗೆ ಬರುತ್ತಿರುವ ಆದಾಯ ಎಷ್ಟು ಎಂದರೆ, ಬೆಂಗಳೂರು ನಗರದಲ್ಲಿ 1995-96 ರಲ್ಲಿ ರೆವಿನ್ಯೂ ಜೆನರೇಟ್ ಆಗುತ್ತಿದ್ದುದ್ದು 113.98 ಕೋಟಿ ರೂಗಳು, ಇವತ್ತದು 229.37 ಕೋಟಿ ರೂಗಳಾಗಿದೆ. ನಮ್ಮ ಕಾಸ್ಟ್ ಆಫ್ ರಿಕವರಿ ಒಂದು ಸಾವಿರ ಲೀಟರಿಗೆ 95-96ರಲ್ಲಿ ರೂಪಾಯಿ 7.80 ಇತ್ತು ಅದು ಈವತ್ತು ರೂಪಾಯಿ. 13.61 ಆಗುತ್ತದೆ. ಕೊರತೆ 2.72 ಇದ್ದುದ್ದು ಇವತ್ತು 1.37ಗೆ ಇಳಿದಿದೆ. ಬೆಂಗಳೂರಿಗೆ ಬರುತ್ತಿರುವ 700 ಎಂಎಲ್‌ಡಿ ನೀರಿನಲ್ಲಿ 3700 ಮೀಟರ್‌ಗಳಿಗೆ ಮತ್ತು ಪಬ್ಲಿಕ್ ಟ್ಯಾಪ್‌ಗಳಿಗೆ 95-96ರಲ್ಲಿ ನಾವು ಕೊಡುತ್ತಾ ಇದ್ದುದ್ದು 1,46,03 ಎಂಎಲ್‌ಡಿ, ಅದು 2000-01 ಕ್ಕೆ 1,68,564 ಎಂಎಲ್‌ಡಿ ಇಷ್ಟು ಅಭಿವೃದ್ಧಿ ಹೇಗೆ ಆಯಿತು? ಬೆಂಗಳೂರಿನ ಜಲಮಂಡಳಿಯವರು ಏನು ಇವತ್ತು ಸೋರುವಿಕೆಯ ಪ್ರಮಾಣವನ್ನು ತಡೆಗಟ್ಟುವಿಕೆ ಬಗ್ಗೆ ಒಂದು ಹೊಸ ಪ್ರಕ್ರಿಯೆಯನ್ನು ಚಾಲನೆಗೆ ತೆಗೆದುಕೊಂಡರು ಅದರಿಂದ ಬಹಳ ಉಪಯೋಗ ಆಗಿದೆ. ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಸುಬ್ರಹ್ಮಣ್ಯರಸ್ತೆ, ಮಾಗಡಿ ರಸ್ತೆ, ಹಳೆಯ ಮದ್ರಾಸ್ ರಸ್ತೆ, ಟ್ರಿನಿಟಿ ಸರ್ಕಲ್ ಏರ್‌ಪೋರ್ಟ್ ರಸ್ತೆ, ಪ್ಯಾಲೆಸ್ ರಸ್ತೆ, ತುಮಕೂರು ರಸ್ತೆ, ಇಂಥ ಸ್ಥಳಗಳಲ್ಲಿ ಯಾವಾಗಲೂ ನೀರು ಉಕ್ಕಿ ಹರಿಯುವುದು. ಮಾನ್ಯ ರಾಮಲಿಂಗಾರೆಡ್ಡಿಯವರು ಸಚಿವರು ಇಲ್ಲಿ ಇದ್ದಾರೆ, ನಾನು ಸಚಿವನಾಗಿದ್ದಾಗ ಆ ಪ್ರದೇಶಗಳಿಗೆ ಕರೆದುಕೊಂಡು ಹೋದರು. ಇವತ್ತು ಅಂಥ ಸೋರುವಿಕೆಯ ಪ್ರಮಾಣವು ಕೂಡ ಬೆಂಗಳೂರು ನಗರದಲ್ಲಿ ಕಡಿಮೆಯಾಗಿದೆ. ಇಷ್ಟೆಲ್ಲಾ ಕೆಲಸವನ್ನು ಮಾಡಿ 50-60 ವರ್ಷದ ಹಳೆಯ ಪೈಪುಗಳನ್ನು ಸುಮಾರು 35-40 ಕಿಲೋಮೀಟರ್ ದೂರದ ಪೈಪುಗಳನ್ನು ಈಗಾಗಲೇ ಬದಲಾವಣೆ ಮಾಡಿದ್ದಾರೆ.

ಕಾವೇರಿ 4ನೇ ಹಂತದ ಮೊದಲನೇ ಘಟ್ಟದಲ್ಲಿ 1080 ಕೋಟಿ ರೂಪಾಯಿಗಳಲ್ಲಿ 170 ಕೋಟಿ ರೂಪಾಯಿಗಳನ್ನು ಸಿವರೇಜ್ ಟ್ರೀಟ್‌ಮೆಂಟ್‌ಗೆ ಕೊಟ್ಟಿದ್ದೇವೆ. ಇಷ್ಟೆಲ್ಲಾ ಮಾಡಿರುವಾಗ ನೀವು ಏತಕ್ಕೆ ಇಂಥ ಒಂದು ಕರಾಳವಾದ ಭಾವನೆಯನ್ನು ಕೈಗೆ ತೆಗೆದುಕೊಳ್ಳುತ್ತಿದ್ದೀರಿ? ಇದರ ಅವಶ್ಯಕತೆಯೇನು? ಇದರಿಂದ ಯಾರಿಗೆ ಅನುಕೂಲ? ಯಾರಿಗೋಸ್ಕರವಾಗಿ ಈ ಒಂದು ಖಾಸಗೀಕರಣವನ್ನು ಮಾಡುತ್ತಿದ್ದೀರಿ? ಈ ಖಾಸಗೀಕರಣವನ್ನು ಮಾಡತಕ್ಕ ಸಂದರ್ಭದಲ್ಲಿ ಬೆಂಗಳೂರು ನಗರದ ಜನ ನಿಮಗೆ ಜಲಮಂಡಳಿಯವರು ಎಲ್ಲೋ ಒಂದು ಕಡೆ ನಮಗೆ ತೊಂದರೆಯಾಗಿದೆ, ಜಲಮಂಡಳಿಯಿಂದ ನಮಗೆ ನೀರು ಬರುತ್ತಿಲ್ಲ, ಜಲಮಂಡಳಿಯಿಂದ ನಮಗೆ ತೊಂದರೆ ಯಾಗುತ್ತಿದೆ, ಹಾಹಾಕಾರವಾಗುತ್ತಿದೆ, ಎಂದು ತಮಗೇನಾದರೂ ಕೇಳಿದ್ದಾರೆಯೇ? ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು, ಇವರು ಕೊಡುತ್ತಿರುವ ಪಶ್ಚಿಮ ಮತ್ತು ದಕ್ಷಿಣ ವಿಭಾಗಗಳಿಗೆ ಒಂದೊಂದು ವಿಭಾಗಕ್ಕೆ ಒಟ್ಟು ಇವರು ಕೇಳಿರುವುದು 584 ಕೋಟಿ 40 ಲಕ್ಷ ರೂಪಾಯಿಗಳು. ಅದರಲ್ಲಿ ಪಶ್ಚಿಮಕ್ಕೆ 123 ಕೋಟಿ 20 ಲಕ್ಷ ರೂಪಾಯಿಗಳನ್ನು ಇವರು ಕೇಳುತ್ತಾರೆ. ದಕ್ಷಿಣಕ್ಕೆ 161 ಕೋಟಿ 20 ಲಕ್ಷ ರೂಪಾಯಿಗಳನ್ನು ಇವರು ಕೇಳುತ್ತಾರೆ. ನಿರ್ವಹಣಾ ವೆಚ್ಚ ಸುಮಾರು ಕೇವಲ ಆ ಮೇಲ್ದರ್ಜೆಯವರಿಗೆ ಮಾತ್ರ 81 ಕೋಟಿ ರೂಪಾಯಿಗಳು ಅದಲ್ಲದೆ ಮಂಡಳಿಯಿಂದ ಸಾಲ ಪಡೆಯುವಾಗ ಕೊಡಬೇಕಾದ ಬಡ್ಡಿ ಇವೆಲ್ಲಾ ಸೇರಿ ಒಟ್ಟು 584 ಕೋಟಿ ರೂಪಾಯಿಗಳನ್ನು ಕೇವಲ ಎರಡು ಭಾಗದ ನೀರು ನಿರ್ವಹಣೆಗೆ ಕೇಳತಕ್ಕ ಪರಿಸ್ಥಿತಿಗೆ ತಾವೇನು ಇವತ್ತು ಯೋಚನೆಯನ್ನು ಮಾಡಿದ್ದೀರಿ, ಅವರು ಮಾಡತಕ್ಕದ್ದು ಏನು? ಇವರು 584 ಕೋಟಿ ರೂಪಾಯಿಗಳನ್ನು ಕೊಟ್ಟರೆ ಏನು ಮಾಡುತ್ತಾರೆ ಎನ್ನುವುದನ್ನು ಹೇಳಿದ್ದಾರೆ ಟೆಕ್ನಿಕಲ್ ಪಾಯಿಂಟ್ ಇದೆ ತಾವು ಕೇಳಬೇಕು 48 ಪರ್‌ಸೆಂಟ್ ಎಂದು ಹೇಳಿ ಆ ಫ್ರೆಂಚ್ ಕಂಪನಿಯವರು ಕೊಟ್ಟಿದ್ದಾರೆ; ಅವರು ಹೇಳುತ್ತಾರೆ ಇಷ್ಟೆಲ್ಲಾ ಮಾಡಿದರೂ ಕೂಡ ನಾವು ಸೋರುವಿಕೆಯನ್ನು 20 ಪರ್‌ಸೆಂಟ್‌ಗೆ ಇಳಿಸುತ್ತೇವೆಂದು ಹೇಳುತ್ತಾರೆ. ನಮ್ಮಲ್ಲಿ ಸೋರುವಿಕೆ ಇರುವುದೇ 29 ಪರ್‌ಸೆಂಟ್ 29 ಪರ್‌ಸೆಂಟ್ ಸೋರುವಿಕೆಯನ್ನು ಇಟ್ಟುಕೊಂಡು 48 ಪರ್‌ಸೆಂಟ್ ಸೋರುವಿಕೆ ಎಂದರೆ ಹಾಗಾದರೆ ಬರತಕ್ಕ 700 ಎಂಎಲ್‌ಡಿ ನೀರು ಯಾವ ಊರಿಗೆ ಹೋಯಿತು? ಯಾರಿಗೆ ಹೋಗುತ್ತಿದೆ? ಯಾವ ಕರೆಕಟ್ಟೆಗಳಿಗೆ ತಲುಪುತ್ತಿದೆ?

ಶ್ರೀ ಬಿ.ಎನ್. ಬಚ್ಚೇಗೌಡ : – ಮಾನ್ಯ ಸೋಮಣ್ಣನವರೇ, 40 ಎನ್ನುವುದು ಈ ಕಡೆಯವರಿಗೆ ಅದೃಷ್ಟ ಸಂಖ್ಯೆ 40 ಪರ್‌ಸೆಂಟ್ ವಿದ್ಯುತ್‌ನಲ್ಲಿ ಸೋರುವಿಕೆ ಎನ್ನುತ್ತಾರೆ. 40 ಪರ್‌ಸೆಂಟ್ ನೀರು ಸೋರುವಿಕೆ ಎಂದು ಹೇಳಿದ್ದಾರೆ. ಆ ಕಡೆಯವರಿಗೆ ಅದು ಲಕ್ಕಿ ನಂಬರ್ ಮುಖ್ಯಮಂತ್ರಿಗಳು 40 ಭಾಗ ನೀರು ಸೋರುವಿಕೆಯಾಗುತ್ತದೆ, ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ. 40 ಜನ ಎಂಎಲ್‌ಎ ಗಳನ್ನು ಅಮೇರಿಕಾಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಮುಂದಿನ ತಿಂಗಳು. ಮಾನ್ಯ ಶ್ರೀಕಂಠಯ್ಯನವರಿಗೆ ಅದು ಗೊತ್ತಿಲ್ಲ. ಅವರ ಜೊತೆಯಲ್ಲಿ ಸಗೀರ್ ಅಹಮದ್‌ರವರೂ ಹೋಗುತ್ತಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಸೋಮಣ್ಣನವರೇ, ಬೇಗ ಮುಗಿಸಿ.

ಶ್ರೀ ವಿ. ಸೋಮಣ್ಣ : ಮಾನ್ಯ ಉಪಾಧ್ಯಕ್ಷರೇ, ನಾನು ಈ ಸದನದಲ್ಲಿ ಮೊದಲನೇ ಬಾರಿಗೆ ಮಾತನಾಡುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ನೋಡಿ ನಮ್ಮ ಗೌರವಾನ್ವಿತ ಬಚ್ಚೇಗೌಡರಿಗೆ ನಮ್ಮಲ್ಲಿ ಏನೇನು ನಡೆಯುತ್ತದೆ ಎನ್ನುವುದರ ಬಗ್ಗೆ ಮಾಹಿತಿ ಎಷ್ಟೊಂದು ಚೆನ್ನಾಗಿ ಗೊತ್ತಿದೆ ಎಂದರೆ, ಅವರ ಹೆಸರೂ ಆ ಪಟ್ಟಿಯಲ್ಲಿ ಇದ್ದ ಹಾಗೆ ಎಂದು ಕಾಡುತ್ತದೆ.

ಶ್ರೀ ವಿ. ಸೋಮಣ್ಣ : ಮಾನ್ಯ ಉಪಾಧ್ಯಕ್ಷರೇ, ನನ್ನ ತರ್ಕ್ ಇಷ್ಟೆ. ಮಾಹಿತಿಯನ್ನು ಸರ್ಕಾರಕ್ಕೆ ಕೊಡುವಾಗ ಜವಾಬ್ದಾರಿಯುತವಾಗಿ ಕೊಡಬೇಕಾದಂಥ ಮಾಹಿತಿಗಳನ್ನು 585 ಕೋಟಿ ರೂಪಾಯಿಗಳ ಈ ನಗರದ ಎರಡು ಭಾಗಕ್ಕೆ ಜನರಿಗೆ ಆ ಹೊರೆಯನ್ನು ಹೊರಿಸುವ ಸಂದರ್ಭದಲ್ಲಿ ಅದನ್ನು 20 ಪರ್‌ಸೆಂಟ್‌ಗೆ ಇಳಿಸುತ್ತಾರಂತೆ. ನೀರು ಸರಬರಾಜು ಸಮಯವನ್ನು ಜಾಸ್ತಿ ಮಾಡುತ್ತಾರಂತೆ. ಮತ್ತೆ ಚರಂಡಿಯಲ್ಲಿ ಹರಿಯುವ ಕೊಳಚೆ ನೀರಿನ ಪ್ರಮಾಣವನ್ನು ತಗ್ಗಿಸುವುದು. ಈ ಕೊಳಚೆ ನೀರಿಗೋಸ್ಕರವಾಗಿ ಈಗಾಗಲೇ ಕೇಂದ್ರ ಸರ್ಕಾರ ಜಲಮಂಡಳಿಗೆ 40 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿ ಕೊಟ್ಟಿದೆ. ಅದರಲ್ಲಿ ಶೇಕಡ 70ನ್ನು ಅನುದಾನ ಎಂದು ಇನ್ನು 30 ಪರ್‌ಸೆಂಟನ್ನು ಅದು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ. ಈಗಾಗಲೇ ಜಲಮಂಡಳಿಯವರು ಕೊಳಚೆಪ್ರದೇಶಗಳ ನೀರನ್ನು ಶುದ್ಧೀಕರಣಗೊಳಿಸುವುದಕ್ಕೆ ಕಾವೇರಿ 4 ಹಂತದಲ್ಲಿ 70 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವಿ. ವ್ಯಾಲಿಯಲ್ಲಿ ಹಾಗೂ ಬೆಳ್ಳಘಟ್ಟದಲ್ಲಿ ನಾವು ಈಗಾಗಲೇ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ತಾಂತ್ರಿಕ ವಿಧಾನಗಳನ್ನು ಅಳವಡಿಸತಕ್ಕ ಕೆಲಸವನ್ನು ಈಗಾಗಲೇ ಅಲಸೂರು ಇನ್ನಿತರ ಪ್ರದೇಶಗಳಲ್ಲಿ ಮಾಡಿ ನೂರಕ್ಕೆ ನೂರು ಪಟ್ಟು ಸಫಲತೆಯನ್ನು ಕಂಡಿದ್ದಾರೆ. ನಮಗೆ ಬೇಕಾಗಿರುವುದು ಇಷ್ಟೇನೆ. 240 ಕೋಟಿ ರೂಪಾಯಿಗಳನ್ನು ಒಟ್ಟಿಗೆ ಕೊಟ್ಟರೆ ಈ ಇಡೀ ಬೆಂಗಳೂರು ನಗರದಲ್ಲಿ ಏನು ವ್ಯವಸ್ಥೆ ಇದೆ, ಇದನ್ನು ನಾವು ಭರಿಸುತ್ತೇವೆಂದು ಜಲಮಂಡಳಿಯವರು ಹೇಳಿದರೆ ಅದನ್ನು ಬಿಟ್ಟು ಫ್ರೆಂಚ್ ಕಂಪನಿಯವರಿಗೆ 585 ಕೋಟಿ ರೂಪಾಯಿಗಳಿಗೆ ನೀವು ಎಲ್ಲೋ ಒಂದು ಕಡೆ ಕೇವಲ ಎರಡು ಭಾಗಗಳನ್ನು ಕೊಡುತ್ತಿದ್ದೀರಲ್ಲಾ, ಇದರ ಹಿಂದೆ ಇರುವ ಗಮನಾರ್ಹವಾದ ಸಂಶಯ ಏನು ಇದೆ, ಈ ಗಮನಾರ್ಹವಾದ ಸಂಶಯಕ್ಕೆ ಮುಖ್ಯಮಂತ್ರಿಗಳ ಭಾವನೆಯನ್ನು ಇದಕ್ಕೆ ಸ್ಪಂದಿಸತಕ್ಕಂಥದ್ದಕ್ಕೆ ಯಾರು ಕಾರಣೀಭೂತರು ಎಂದು ಹೇಳಬೇಕು. ನನಗಾದರೂ ಕೂಡ ಚಿಂತನೆ ಇದೆ. ಅದಾದಮೇಲೆ ಈಗಾಗಲೇ ವಾಟರ್ ಅದಾಲತ್ ಎಂದೂ ಕೂಡ ಮಾಡಿದ್ದಾರೆ. ವಾಟರ್ ಆಡಿಟಿಂಗ್‌ನ್ನು ಮಾಡಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಸೋಮಣ್ಣನವರೇ, ಬೇಗ ಮುಗಿಸಿ.

ಶ್ರೀ ವಿ. ಸೋಮಣ್ಣ : ಆಮೇಲೆ ಟೆಕ್ನಿಕಲ್ ಆಗಿ ಏನೇನು ಮಾಡಬೇಕೋ ಅವೆಲ್ಲವನ್ನೂ ಕೂಡ ಜಲಮಂಡಳಿಯವರು ಮಾಡಿದ್ದಾರೆ ಇಷ್ಟೆಲ್ಲವನ್ನು ಕೂಡ ಮಾಡುವಾಗ ಅವರಿಗೆ ವಹಿಸುವ ಅವಶ್ಯಕತೆ ಇದೆಯೇ? ಈ ಅವಶ್ಯಕತೆ ಯಾರಿಗೋಸ್ಕರವಾಗಿ ಎಂದು ತಾವು ಯೋಚನೆ ಮಾಡಬೇಕು. ಆಸ್ಟ್ರೇಲಿಯನ್ ಸರ್ಕಾರದವರು ಆ ತಜ್ಞರು ಆಸಿಸ್‌ಏಡ್ ಎನ್ನುವ ಒಂದು ಕಂಪನಿಯವರು ಏನು ಒಂದು ವರದಿಯನ್ನು ಕೊಟ್ಟಿದ್ದಾರೆ. ದಯಮಾಡಿ ಆ ವರದಿಯನ್ನು ಮಂಡಿಸುವ ಬಗ್ಗೆ ಸರ್ಕಾರ ಮುಂದಾಗಬೇಕು. ಅದಲ್ಲದೇ ಇವತ್ತೇನು ಡೆಲಿಗೇಟೆಡ್ ಮ್ಯಾನೇಜ್‌ಮೆಂಟ್ ಕಂಟ್ರಾಕ್ಟ್‌ನಲ್ಲಿ ಎರಡು ಪೈಲಟ್ ಏರಿಯಾಗಳನ್ನು ಈಗಾಗಲೇ ತೆಗೆದುಕೊಂಡು ಆ ಪೈಲಟ್ ಏರಿಯಾಗಳಿಗೆ ಮಾತ್ರ 584 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ

ಎನ್ನುವುದಕ್ಕೆ ಇಡೀ ಬೆಂಗಳೂರು ನಗರಕ್ಕೆ 240 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು ಎಂದು ಅದನ್ನು ಆಗಲೇ ಹೇಳಿದ್ದೇವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಈ ಫ್ರೆಂಚ್ ಸರ್ಕಾರಕ್ಕೆ ಈ ಒಂದು ಕಂಟ್ರಾಕ್ಟನ್ನು ಕೊಡುವುದಕ್ಕೆ ಜಲಮಂಡಳಿ ಆ್ಯಕ್ಟ್‌ನಲ್ಲಿ ಪ್ರಾವಿಷನ್ ಇದೆಯೇ? ಬಿಡಬ್ಲ್ಯೂಎಸ್ಎಸ್‌ಬಿ ಆ್ಯಕ್ಟ್‌ನಲ್ಲಿ ಈ ರೀತಿ ಏನೂ ಕೇಳದೆ ಮೌಖಿಕವಾಗಿ ಎರಡು ಅರ್ಜಿಗಳನ್ನು ತೆಗೆದುಕೊಂಡು ಆ ಅರ್ಜಿಗಳಿಗೆ ತೀರ್ಮಾನವನ್ನು ಕೊಡತಕ್ಕ ಆದೇಶವನ್ನು ನೀಡತಕ್ಕ ಸಚಿವ ಸಂಪುಟದ ತೀರ್ಮಾನವನ್ನು ಕೊಡತಕ್ಕ ಒಂದು ವ್ಯವಸ್ಥೆ ಈ ರಾಜ್ಯದಲ್ಲಿ ಇದೆಯೇ? ಆ ರೀತಿ ಇರುವುದಾದರೆ ನಿನ್ನೆ ತಾನೇ ನಾನು ಪತ್ರಿಕೆಯಲ್ಲಿ ಓದಿದೆ. ಬೈವಾಟರ್‌ಗೆ ಸಂಬಂಧಪಟ್ಟ ಹಾಗೆ ನಾವು ಈ ಕಾನ್‌ಸೆಪ್ಟ್‌ನ್ನು ಅಳವಡಿಸಿಕೊಂಡಿದ್ದೇವೆ. ಬೈವಾಟರ್ ಇನ್ನೂ ಮಾಡಿಲ್ಲ. ಬೈವಾಟರ್‌ನಿಂದ ಈ ರಾಜ್ಯದ ಜನರಿಗೆ ತೊಂದರೆಯಾಗುತ್ತದೆ ಎಂದು ಅರಿತುಕೊಂಡು ಆ ಕಡತವನ್ನು ಬಿಸಾಕಿದೆವು. ಅದಲ್ಲದೇ ನಾನು ಸ್ವತಃ ಸಚಿವನಾಗಿದ್ದಾಗ ಬಂದಂಥ ಜನರಿಗೆ ಮೈಸೂರು, ದಾವಣಗೆರೆ ಮತ್ತು ಹುಬ್ಬಳ್ಳಿಯನ್ನು ತೋರಿಸಿದೆವು. ಏಕೆ ಬಾಂಬೆಗೆ ಹೋಗಬಾರದು? ಏಕೆ ದೆಹಲಿಗೆ ಹೋಗಬಾರದು? ಏಕೆ ಚೆನ್ನೈಗೆ ಹೋಗಬಾರದು? ಏಕೆ ಹೈದರಾಬಾದ್‌ಗೆ ಹೋಗಬಾರದು? ಇವರಿಗೆ ಬೆಂಗಳೂರೇ ಏಕೆ ಬೇಕು? ಬೆಂಗಳೂರು ನಗರದ ನೀರು ನಿರ್ವಹಣೆ ಮಾಡುವ ನಮ್ಮ ಇಲಾಖೆ ಏನಿದೆ, ಇದು ದಕ್ಷವಾಗಿದೆ. ನೀವೇನಾದರೂ ಈ ರೀತಿ ಕೊಟ್ಟರೆ ಇನ್ನು ವಿಧಾನಸೌಧ ಒಂದು ಬಿಟ್ಟರೆ ಅಠಾರಾ ಕಛೇರಿ ಮತ್ತು ಕೆಂಪು ಕೋಟೆ ಬಿಟ್ಟರೆ ನನಗನ್ನಿಸುತ್ತದೆ ಎಲ್ಲವೂ ಕೂಡ ಖಾಸಗೀಕರಣವಾಗತಕ್ಕ ಪರಿಸ್ಥಿತಿ ಬರುತ್ತದೆ. ನಾನು ತಮ್ಮೂಲಕ ಈ ಸರ್ಕಾರವನ್ನು ಒತ್ತಾಯಿಸುತ್ತೇನೆ, ನಾನು ಏಕೆ ಹೇಳುತ್ತೇನೆಂದರೆ ನಮ್ಮ ದರ ಇಲ್ಲಿದೆ, ಈಗಾಗಲೇ ನೀರಿನ ದರ ಪ್ರಾಯಶಃ ಬಡವರು ಮಧ್ಯಮ ವರ್ಗದವರು, ಇನ್ನು ಕೊಳಚೆ ಪ್ರದೇಶದಲ್ಲಿ ಯಾರು ನಿಮಗೆ ವೋಟು ಹಾಕುತ್ತಿದ್ದಾರೆ, ಕಾಂಗ್ರೆಸ್ -ಐ ಶ್ರೀಮತಿ ಇಂದಿರಾ ಗಾಂಧಿಯವರು, ಸನ್ಮಾನ್ಯ ರಾಜೀವ್ ಗಾಂಧಿ, ಸೋನಿಯಾ ಗಾಂಧಿಯವರ ಹೆಸರಿನಲ್ಲಿ ವೋಟನ್ನು ಹಾಕುತ್ತಾರೆ, ಆ ಜನರೇ ನಿಮಗೆ ದಡಿಯನ್ನು ತೆಗೆದುಕೊಳ್ಳುತ್ತಾರೆ. ಶೇಕಡ 40ರಷ್ಟು ಇರುವ ಜನ ಯಾರು ಇದ್ದಾರೆ? ಬಡವರು, ಆ ಬಡವರ ಓಟುಗಳನ್ನು ಏನು ಪಡೆಯುತ್ತಿದ್ದೀರಿ ಆ ಬಡವರಿಗೆ ಕುಡಿಯುವ ನೀರಿಗೂ ಕೂಡ ಎಲ್ಲೋ ಒಂದು ಕಡೆ ನೀವು ತೊಂದರೆ ಮಾಡುತ್ತಿದ್ದೀರಿ ನೀರು ಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಆ ಆದ್ಯ ಕರ್ತವ್ಯವನ್ನು ಮರೆತು ಯಾವುದೋ ಒಂದು ಕಂಪನಿಯವರಿಗೆ ನಾವು ಆ ಇಲಾಖೆಯನ್ನು, ಕೋಟ್ಯಾಂತರ ರೂಪಾಯಿ ಆಸ್ತಿಯನ್ನು 44 ಜನರು ಪಾರ್ಟ್‌ನರ್ ಆಗಿರತಕ್ಕಂಥವನ್ನೂ ಪರಿಣಿತರಾಗಿರತಕ್ಕಂಥ ಅಧಿಕಾರಿಗಳ ಮೇಲೆ ಅವರನ್ನು ಮ್ಯಾನೇಜರ್ ಆಗಿ ತಂದು ಕೂರಿಸಿದರೆ ಎಂಥದ್ದು ಈ ಗತಿ? ನಾನೂ ಸಹ ಒಬ್ಬ ಸಚಿವನಾಗಿ ಕೆಲಸ ಮಾಡಿದ್ದೇನೆ. ಕನ್‌ವಿನ್ಸ್ ಮಾಡಿದ್ದೇನೆ. ಇವತ್ತೇನು ನೀರಿನ ದರ ಇದೆ, ಆ ದರ ಎಷ್ಟು ಪಟ್ಟು ಜಾಸ್ತಿ ಆಗುತ್ತದೆ? ಏನಾದರೂ ಇದು ಇಂಪ್ಲಿಮೆಂಟ್ ಆಗಿ ಈ ವ್ಯವಸ್ಥೆ ಜಾರಿಗೆ ತಂದರೆ ಕೇವಲ ಎರಡು ವರ್ಷದಲ್ಲಿ ನೂರು ರೂಪಾಯಿ ಹಣವನ್ನು ಯಾರು ಗ್ರಾಹಕ ಕಟ್ಟುತ್ತಿದ್ದಾನೆ, ಅವರು ಸುಮಾರು 450 ರೂಪಾಯಿಯಿಂದ 500 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಮಾನ್ಯ ಚಂದ್ರೇಗೌಡ ಸಾಹೇಬರ ಮನೆಯ ಅಮ್ಮನವರಿಗೆ ಹೋಗಿ ಹೇಳುತ್ತೇವೆ. ತಾಯಿ, ನಿಮ್ಮ ಸರ್ಕಾರ ಹೀಗೆ ಮಾಡಿದೆ. 450 ರೂಪಾಯಿ ಕಟ್ಟಬೇಕಾಗಿತ್ತು, 2000 ರೂಪಾಯಿ ಬರುತ್ತಿದೆ ಎಂದು ನಾನು ಹೇಳುವುದಿಲ್ಲ, ಅವರ ಶಾಪಕ್ಕೆ ನೀವು ಗುರಿ ಆಗುವುದು ಬೇಡ. ಈ ಶಾಪಗ್ರಸ್ಥವಾಗಿರತಕ್ಕ ಇಂತಹ ಕರಾಳವಾದಂತಹ

ತೀರ್ಮಾನ ಏನು ಇದೆ? ಈ ತೀರ್ಮಾನವನ್ನು ದಯವಿಟ್ಟು ತಾವು ವಾಪಸ್ ತೆಗೆದುಕೊಳ್ಳಬೇಕು. ನೀವು ಮಾಡಬೇಕು ಎಂಬ ಆಸೆ ಇದ್ದರೆ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನೋ ಇಲ್ಲವೇ ಸದನದ ಸಮಿತಿಯನ್ನೋ ನೇಮಕ ಮಾಡಿ. ಬೆಂಗಳೂರು ನಗರದ ಶಾಸಕರ ಸಭೆಯನ್ನು ಕರೆಯುತ್ತೇವೆಂದು ಹೇಳಿದರು. ಸಭೆಯಲ್ಲಿ ಅವೆಲ್ಲವನ್ನೂ ನಾವು ಮಾತನಾಡಿದೆವು. ಚರ್ಚೆ ಆಯಿತು. ಮಾನ್ಯ ಸುರೇಶ್ ಕುಮಾರ್‌ಅವರು ಮಾತನಾಡಿದ ಒಂದು ಅಂಶವನ್ನೂ ಕೂಡ ನಾನು ಮಾತನಾಡುವುದಕ್ಕೆ ಹೋಗಿಲ್ಲ. ನನ್ನ ಹತ್ತಿರ ಇರತಕ್ಕ ಮಾಹಿತಿಯ ಪ್ರಕಾರ ಇವತ್ತು ಏಳು ಸಾವಿರ ಬೋರ್‌ವೆಲ್‌ಗಳು ಇವೆ. ಎರಡು ಸಾವಿರ ಬೋರ್‌ವೆಲ್‌ಗಳಿಗೆ ಪಂಪುಗಳನ್ನು ಅಳವಡಿಸಿದ್ದಾರೆ. ಇಷ್ಟೆಲ್ಲಾ ನೀರು ನಿರ್ವಹಣೆ ಮಾಡಿ ಎಲ್ಲವನ್ನೂ ಹದ ಮಾಡಿ, ಬೆಂಗಳೂರು ನಗರಕ್ಕೆ ಜೆ.ಎಚ್. ಪಟೇಲ್ ಅವರು ಮತ್ತು ಎಸ್.ಎಂ. ಕೃಷ್ಣ ಅವರು ನೀರು ಕೊಟ್ಟು, ಇವತ್ತು ಯಾರೋ ಒಬ್ಬ ಗಿರಾಕಿಗೆ ಕೊಡುವುದಾ? ಆ ಗಿರಾಕಿಗೆ ಏನಾದರೂ ಕೊಟ್ಟರೆ ಈ ನಗರದ ಜನರ ಗತಿ ಏನು? ಬಡವರ ಗತಿ? ತುಳಿತಕ್ಕೆ ಒಳಪಟ್ಟಂಥವರ ಗತಿ ಏನು? ಆ ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಪಬ್ಲಿಕ್‌ಟ್ಯಾಪ್‌ಗಳಲ್ಲಿ ನೀರು ಹಿಡಿಯುತ್ತಿರುವವನು, ಹಣವನ್ನೇ ಕಟ್ಟದೇ ಇರುವಂಥವನು, ಆ ಕೊನೆಯ ಹಂತದಲ್ಲಿ ಇರತಕ್ಕವನ ಗತಿ ಏನು ಎಂಬ ಬಗ್ಗೆ ತಾವು ಚಿಂತನೆ ಮಾಡಿದ್ದೀರಾ? ಈ ಚಿಂತನೆಯನ್ನು ಮಾಡುವುದರ ಮುಖೇನ ದಯಮಾಡಿ ಈ ಒಂದು ಪ್ರಕ್ರಿಯೆ ಏನು ಇದೆ ಈಗಾಗಲೇ ಆಗಿರುವ ತೀರ್ಮಾನ ಏನು ಇದೆ? ಈ ತೀರ್ಮಾನವನ್ನು ರದ್ದು ಪಡಿಸಬೇಕು. ಈ ತೀರ್ಮಾನದಿಂದ ಆಗತಕ್ಕಂಥ ಅನಾಹುತವನ್ನು ಮುಂದಿನ ದಿನಗಳಲ್ಲಿ ಮರುಕಳಿಸುವುದಕ್ಕೆ ಅವಕಾಶ ಕೊಡದೇ ತಾವ ಆ ಬಗ್ಗೆ ಯೋಚನೆ ಮಾಡುವುದನ್ನು ಬಿಟ್ಟು ದಯಮಾಡಿ ತಾವೇನು ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ತೀರ್ಮಾನ ಮಾಡಿದ್ದೀರಿ ಇದನ್ನು ವಾಪಸ್ ಪಡೆಯತಕ್ಕಂಥದ್ದು ಸೂಕ್ತವಾದುದು. ಇದನ್ನು ತಾವು ಮಾಡಲೇಬೇಕು ಎನ್ನುವುದಾದರೆ ನಾನು ಇನ್ನೊಂದು ಸಲ ಅರ್ಜ್‌ಮಾಡುತ್ತೇನೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನೋ ಅಥವಾ ಸದನ ಸಮಿತಿಯನ್ನೋ ನೇಮಕ ಮಾಡಿ ಕೂಲಂಕುಷವಾಗಿ ಚರ್ಚೆ ಆಗಲಿ. ನಾಗರೀಕರ ಹತ್ತಿರ ಹೋಗೋಣ. ಅವರೇನು ಅಲ್ಲಿ ತೀರ್ಮಾನ ಕೊಡುತ್ತಾರೆ, ಆ ತೀರ್ಮಾನಕ್ಕೆ ತಲೆ ಬಾಗೋಣ. ದಯವಿಟ್ಟು ಅಲ್ಲಿಯವರೆಗೆ ಈ ಆದೇಶವನ್ನು ಯಾವುದೇ ಕಾರಣಕ್ಕೆ ಜಾರಿ ಮಾಡಬಾರದು. ಬೆಂಗಳೂರು ನಗರದ ಮಹಾ ಜನತೆಗೆ ಜಾರಿ ಮಾಡಬಾರದು ಎಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ಸುರೇಶ್ ಕುಮಾರ್ ಅವರು, ಮಾನ್ಯ ಸೋಮಣ್ಣ ಅವರು ಏನು ಜಲ ಮಂಡಲಿಯು ಈ ಫ್ರೆಂಚ್ ಎರಡು ಕಂಫನಿಗಳ ಜೊತೆಯಲ್ಲಿ ಸರ್ಕಾರ ಮಾಡಿಕೊಂಡಿರುವ ಒಪ್ಪಂದದ ವಿಚಾರ ಕುರಿತು ಜನಸಾಮಾನ್ಯರ ಕಷ್ಟಗಳ ಬಗ್ಗೆ ಆಗಬಹುದಾದಂಥ ಎಲ್ಲಾ ಕಷ್ಟಗಳ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದಾರೆ. ಜಲ ಮಂಡಲಿಯ ಅಧ್ಯಕ್ಷರು ಬೆಂಗಳೂರು ನಗರದ ಎಲ್ಲಾ ಶಾಸಕರ ಮೀಟಿಂಗ್ ಅನ್ನು ಎರಡು ಬಾರಿ ಕರೆದಿದ್ದರು. ಆ ಮೀಟಿಂಗ್‌ನಲ್ಲಿ ಯಾವತ್ತೂ ಕೂಡ ಈ ಜಲ ಮಂಡಲಿಯ ಒಂದು ಕೆಲಸವನ್ನು ಎನ್‌ಡಬ್ಲ್ಯೂಎಲ್ ಮತ್ತು ವಿಡಬ್ಲ್ಯೂ ಎಂದು ಹೇಳಿ ಈ ಫ್ರೆಂಚ್ ಕಂಪನಿಗಳಿಗೆ ಎಂಓಯು ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಯಾರಿಗೂ ಕೂಡ ತಿಳಿಸಲ್ಲ ಅವತ್ತಿನ ದಿವಸ ನಮಗೆ ಜಲಮಂಡಲಿಯಲ್ಲಿರುವಂತಹ ಕಷ್ಟನಷ್ಟಗಳ ಬಗ್ಗೆ

ಶಾಸಕರ ಜೊತೆಯಲ್ಲಿ ಸಮಾಲೋಚನೆ ಮಾಡಿದರು. ಯಾವುದೇ ವಿಚಾರವನ್ನು ಖಾಸಗೀಕರಣ ಮಾಡಬಾರದು ಎಂದು ಎಲ್ಲಾ ಶಾಸಕರೂ ಪಕ್ಷಾತೀತವಾಗಿ ಜಲಮಂಡಲಿಯಲ್ಲಿ ಚರ್ಚೆ ಮಾಡಿದೆವು. ನಮ್ಮನ್ನು ಯಾತಕ್ಕೋಸ್ಕರ ಕತ್ತಲಲ್ಲಿ ಇಟ್ಟರು? ಮತ್ತೆ ಎರಡನೆಯದು ಇವತ್ತು ಏನಾದರೂ ಸರ್ಕಾರದಿಂದಾಗಲೀ ಅಥವಾ ಅಧಿಕಾರಿಗಳಿಂದಾಗಲೀ ನೀರನ್ನು ಸರಬರಾಜು ಮಾಡುವುದರಲ್ಲಿ ವಿಫಲರಾಗಿ, ಸರಿಯಾದ ರೀತಿಯಲ್ಲಿ ಸರಬರಾಜು ಮಾಡದಿದ್ದಲ್ಲಿ ತಾವು ಈ ರೀತಿ ಯೋಜನೆ ಮಾಡಿದ್ದರೆ ಸರಿ ಇತ್ತು. ಎರಡನೆಯದು ಅವರೇನಾದರೂ ಅಪಾರವಾದಂತಹ ನಷ್ಟವನ್ನು ಅನುಭವಿಸಿ, ಅವ್ಯವಹಾರಗಳನ್ನು ಏನಾದರೂ ಮಾಡಿದ್ದರೆ ಈ ರೀತಿ ಯೋಚನೆ ಮಾಡಬಹುದಿತ್ತು. 1989ರಲ್ಲಿ ಸನ್ಮಾನ್ಯ ವೀರೇಂದ್ರ ಪಾಟೀಲ್ ಅವರು ಮುಖ್ಯಮಂತ್ರಿಗಳಾಗಿದ್ದರು. ಆವತ್ತಿನ ದಿವಸ ಬಿಡಿಎ ಸಂಸ್ಥೆ ಸ್ವಾಯತ್ತ ಸಂಸ್ಥೆ ಆ ಸಂಸ್ಥೆ ಬಗ್ಗೆ ಹೇಳಿದ್ದು ಏನು ಅಂದರೆ ಇದನ್ನು ಮುಚ್ಚಿಸಬೇಕು. ಅಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ರೆವಿನ್ಯೂ ಡಿವಿಜನಲ್ ಕಮೀಷನರ್ ಅವರಿಗೆ ಇದನ್ನು ಒಪ್ಪಿಸಬೇಕೆಂದು ಹೇಳಿ ಮಾತನಾಡಿದರು. ಆದರೆ ಇವತ್ತು ಅದೇ ಬಿಡಿಎ ಯಾವ ರೀತಿ ಕೆಲಸವನ್ನು ನಿರ್ವಹಿಸುತ್ತಿದೆ? ಇವತ್ತು 300,400 ಕೋಟಿ ರೂಪಾಯಿಗಳು ಲಾಭ ಬರುವ ದಿಸೆಯಲ್ಲಿ ಅವರು ಬಿಡಿಎ ಕೆಲಸ ಮಾಡಿದೆ. ಯಾವ ರೀತಿ ಲಾಭ ಮಾಡಿದೆ? ಅಲ್ಲಿ ಸರಿಯಾದಂತಹ ಅಧಿಕಾರಿಗಳು ಇದ್ದಾರೆ ಅಲ್ಲಿ ಅವರು ಸರಿಯಾಗಿ ಕೆಲಸ ಮಾಡಿದ್ದಾರೆ. ಈಗಿರುವ ಜಲ ಮಂಡಲಿಯ ಅಧ್ಯಕ್ಷರೂ ಕೂಡ ಒಳ್ಳೆಯವರು ಇದ್ದಾರೆ ಆದರೆ ಒಂದು ಸಂಸ್ಥೆ ಸರಿಯಾಗಿ ಕೆಲಸ ಮಾಡುವಂತಹ ಸಂಸ್ಥೆ ಇದ್ದರೆ, ಇನ್ನೊಂದು ಸಂಸ್ಥೆಯನ್ನು ತಾವು ಖಾಸಗಿಕರಣ ಮಾಡುವಂತಹ ಕಾರಣ ಏನು? ಅನೇಕ ಸಂಸ್ಥೆಗಳು ಇವೆ. ಇವತ್ತು ಉದಾಹರಣೆಗೆ ಬಿಎಂಟಿಆರ್‌ಸಿ ನಷ್ಟದಲ್ಲಿಲ್ಲ, ಲಾಭದಲ್ಲಿ ನಡೆಯುತ್ತಿದೆ. ಬಿಡಿಎ ನಷ್ಟದಲ್ಲಿ ಇಲ್ಲ. ಇವತ್ತು ಉದಾಹರಣೆ ನಮ್ಮ ಬಿಡಬ್ಲ್ಯೂಎಸ್‌ಎಸ್‌ಬಿ ಕೂಡ ಕಳೆದ ವರ್ಷ ಎರಡೂವರೆ ಕೋಟಿ ರೂಪಾಯಿ ಲಾಸ್ ಆಗಿದೆ ಎಂದು ಹೇಳಿದ್ದಾರೆ. ಸ್ವಾಮಿ, ನಿಜವಾಗಿ ಹೇಳುವುದಾದರೆ 11 ಕೋಟಿ ರೂಪಾಯಿ ಲಾಭ ಬಂದಿದೆ ಎಂದು ಹೇಳಿ ನಮ್ಮಲ್ಲಿ ಮಾಹಿತಿ ಇದೆ ಯಾತಕೋಸ್ಕರ ಈ ರೀತಿ 2.5 ಕೋಟಿ ರೂಪಾಯಿ ಲಾಸ್ ಆಗಿದೆ ಎಂದು ಹೇಳಿದ್ದಾರೆ? ಇದು ವಿಚಾರಣೆ ಆಗಬೇಕಾಗಿದೆ. 11 ಕೋಟಿ ರೂಪಾಯಿ ಲಾಭ ಬಂದಿರುವ ಜಾಗದಲ್ಲಿ 2.5 ಕೋಟಿ ರೂಪಾಯಿ ಜಲ ಮಂಡಲಿಯಲ್ಲಿ ಲಾಸ್ ಆಗಿದೆ ಎಂದು ಮಾಹಿತಿ ಕೊಟ್ಟಿರುವ ಬಗ್ಗೆ ಸಮಗ್ರವಾದಂತಹ ತನಿಖೆ ಆಗಬೇಕಾಗಿದೆ. ಇನ್ನೊಂದು ಮುಖ್ಯವಾದ ವಿಚಾರ ಎಂದರೆ ಆನೇಕ ಭಾಗಗಳಲ್ಲಿ ಬೆಂಗಳೂರು ನಗರದಲ್ಲಿ ಮಾನ್ಯ ಸೋಮಣ್ಣನವರು ಹೇಳಿದ ಹಾಗೆ 400 ಕೊಳಚೆ ಪ್ರದೇಶಗಳು ಇದ್ದಾವೆ. ಅಲ್ಲಿ ಶೇಕಡಾ 30ರಷ್ಟು ಜನ ಹರಿಜನ ಗಿರಿಜನ, ಬಡವರು ಎಲ್ಲರೂ ಕೂಡ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲಿ ನಾವು ಪಬ್ಲಿಕ್ ಟ್ಯಾಪ್ಸನ್ನು ಹಾಕಿದೆವು. ಆ ನೀರನ್ನು ಬಿಡುವ ಕೆಲಸವನ್ನು ಮತ್ತೆ ಈ ಖಾಸಗಿ ಸಂಸ್ಥೆಗೆ ಕೊಟ್ಟರೆ ಅವರು ಆ ನೀರನ್ನು ಕೊಡುತ್ತಾರಾ? ಇವತ್ತೇನು ತೊಂದರೆ ಆದರೂ ಕೂಡ ನಾವು ಜನ ಪ್ರತಿನಿಧಿಗಳು, ಮಹಾನಗರ ಪಾಲಿಕೆಯ ಸದಸ್ಯರುಗಳು ಇರಬಹುದು, ಶಾಸಕರು ಇರಬಹುದು. ಯಾವುದೇ ತೊಂದರೆ ಆದರೂ ಕೂಡ ಕೂಡಲೇ ನಾವು ಅಧಿಕಾರಿಗಳನ್ನು ಕರೆಯುತ್ತೇವೆ. ಅವರಿಂದ ಕೆಲಸ ಮಾಡಿಸಿಕೊಳ್ಳುವಂತಹ ಒಂದು ಸೌಜನ್ಯತೆ ಇದೆ, ವ್ಯವಸ್ಥೆ ಇದೆ. ತಾವು ಯಾವುದೋ ಫ್ರೆಂಚ್ ಸಂಸ್ಥೆಗೆ ಕೊಟ್ಟರೆ ಆ ಜನ ಯಾರ ಹತ್ತಿರ ಹೇಳಬೇಕು? ನಾವು ಹೋಗಿ ಯಾರ ಹತ್ತಿರ ಹೇಳಬೇಕು? ಮತ್ತೆ ಅವರೇನಾದರೂ ಫ್ರೆಂಚ್‌ನಿಂದ ಹಣವನ್ನು

ತಂದು ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ, ನಮ್ಮ ಬೆಂಗಳೂರಿನಲ್ಲಿ ಏನಾದರೂ ಬಂಡವಾಳವನ್ನು ಹೂಡಿಕೆ ಹಾಕುತ್ತಿದ್ದಾರಾ? ಇಲ್ಲ. ಅವರಿಗೆ ಬಂಡವಾಳವನ್ನೂ ಕೂಡ ನಾವೇ ಕೊಡುವುದು, ಅವರಿಗೆ ಸಂಭಾವನೆಯನ್ನು ಕೂಡ ನಾವೇ ಕೊಡುವುದು. ಜೊತೆ ಜೊತೆಯಲ್ಲಿ ನಮ್ಮ ಅಧಿಕಾರಿಗಳು, ನಮ್ಮ ಸಿಬ್ಬಂದಿ ಏನು ಇದೆ, ಅವರು ಬೇರೆ ಕಡೆಗೆ ಹೋಗುತ್ತಾರಂತೆ. ಕಾರಣ ಏನು? ಈ ಸಿಬ್ಬಂದಿಯ ಗತಿ ಏನು? ಮತ್ತೆ ಅವರಿಗೆ ಸಂಬಳ ಯಾರು ಕೊಡುವುದು? ಮತ್ತೆ ಬೇರೆ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಾಗ, ಆ ಸಿಬ್ಬಂದಿಗೆ ಕೊಡುವ ವೇತನವನ್ನು ಯಾರು ಕೊಡುತ್ತಾರೆ? ಇದು ಅದಕ್ಕೆ ಹೊರೆ ಆಗುವುದಿಲ್ಲವಾ? ಇನ್ನೊಂದು ವಿಷಯ. ಮುಖ್ಯವಾಗಿ ಬಡವರು; ಒಂದು ಸಾವಿರ, ಒಂದೂವರೆ ಸಾವಿರ ರೂಪಾಯಿ ಇವತ್ತು ಸಂಬಳದಲ್ಲಿ ಜೀವನ ಮಾಡುವ ಅನೇಕ ಬಡವರು ಇದ್ದಾರೆ. ಅದು ತಮಗೂ ಗೊತ್ತಿದೆ. ಅಂಥವರಿಗೆ ವಾಟರ್ ಬಿಲ್ 500 ರೂಪಾಯಿ 600 ರೂಪಾಯಿ ಬಂದರೆ ಅವರು ಜೀವನ ಮಾಡುವುದಾದರೂ ಹೇಗೆ? ಸನ್ಮಾನ್ಯ ಚಂದ್ರೇಗೌಡರು ಇವತ್ತು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ. ತುಂಬಾ ಲೆಕ್ಕಾಚಾರವಾಗಿ ಅವರು ಕೊಡುತ್ತಾರೆ. ಅನುಭವಸ್ಥರು ಇದ್ದಾರೆ. ಅನೇಕ ವರ್ಷಗಳಿಂದ ಅವರು ನಮ್ಮ ಸ್ಥಾನದಲ್ಲಿ ಕುಳಿತು, ಮಂತ್ರಿಗಳಾಗಿ, ಎಂಪಿಗಳಾಗಿ, ಕೆಲಸ ಮಾಡಿರುವಂತಹ ವ್ಯಕ್ತಿ. ಅವರಿಗಾದರೂ ಮನಸ್ಸು ಹೇಗೆ ಒಪ್ಪಿದೆ ಎಂದು ನಾನು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾವು ಬೆಂಗಳೂರನ್ನು ಸಿಂಗಾಪುರ ಮಾದರಿಯಲ್ಲಿ ಮಾಡುತ್ತೇವೆಂದು ಹೇಳಿದರು. ಬೆಂಗಳೂರು ಜನರ ಸಂತೋಷ ಪಟ್ಟೆವು, ನಾವೂ ಕೂಡ. ಆದರೆ ಅವರ ಕೈಯಲ್ಲಿ ಆಗುವುದಿಲ್ಲ ಎಂದು ನಮಗೂ ಕೂಡ ಗೊತ್ತಿದೆ. ಕಾರಣ ಏನು ಎಂದರೆ ಬೆಂಗಳೂರಲ್ಲಿ 65 ಲಕ್ಷ ಜನಸಂಖ್ಯೆ ಇದ್ದರೆ ಸಿಂಗಾಪುರದಲ್ಲಿ 30 ಲಕ್ಷ ಜನಸಂಖ್ಯೆ ಇದೆ. ಅದೇ ರೀತಿ ವಿಸ್ತೀರ್ಣದಲ್ಲಿ ಕೂಡ ಸಿಂಗಾಪುರ ನಮಗಿಂತಲೂ ನಾಲ್ಕು ಪಟ್ಟು ಜಾಸ್ತಿ ವಿಸ್ತೀರ್ಣ ಇದೆ. ಅದೇ ರೀತಿಯಲ್ಲಿ ನಮಗೆ ಮಾಡುವುದಕ್ಕೆ ಆಗುವುದಿಲ್ಲ. ನಾವು ಅದನ್ನು ಕೇಳುವುದಕ್ಕೆ ಹೋಗುವುದಿಲ್ಲ. ಆ ರೀತಿ ನೀವು ಸಿಂಗಾಪುರದ ತರಹ ಹೇಳಿದ್ದೀರಿ, ನೀವು ಮಾಡಿ ಎಂದು ನಾವು ಹೇಳುತ್ತಿಲ್ಲ. ಆದರೆ ತಮಗೆ ಜಲಮಂಡಲಿಯ ಮೇಲೆಯೇ ಏಕೆ ಕಣ್ಣು ಬಂದಿದೆ? ಎಲ್ಲಾ ಬರುವ ಸರ್ಕಾರಗಳೂ ಕೂಡ ಇದರ ಮೇಲೆ ಕಣ್ಣಾ? ಮನುಷ್ಯನಿಗೆ ಬೇಕಾಗಿರುವುದು ಗಾಳಿ, ಬೆಳಕು ನೀರು. ಈ ಮೂರು ವಿಚಾರಗಳ ಮೇಲೆಯೇ ಕಣ್ಣು ಹೋಗುತ್ತದಲ್ಲಾ? ಬಂದ ಕೂಡಲೇ ಸರ್ಕಾರಕ್ಕೆ ನೀರಿನ ಅಂಶದ ಮೇಲೆಯೇ ಏಕೆ ಕಣ್ಣು ಹೋಗಿದೆ? ಯಾವುದಕ್ಕೋಸ್ಕರ ಇದರ ಬಗ್ಗೆ ಚಿಂತನೆ ಮಾಡಿದ್ದಾರೆ? ಇವತ್ತು ನಿಜವಾಗಲೂ ಕೂಡ ಜನತೆಗೆ ಆಗಿರುವ ನೋವಿನ ಬಗ್ಗೆ ಚಿಂತನೆ ಮಾಡಿದ್ದಾರಾ? ಇವತ್ತು ಒಳ್ಳೆಯ ಅನುಭವ ಇರುವಂತಹ ಮಂತ್ರಿಮಂಡಲ ಇದೆ ಇವತ್ತು ಮುಂಭಾಗದಲ್ಲಿ ಕುಳಿತಿರುವವರು, ಮಂತ್ರಿಮಂಡಲದಲ್ಲಿ ಸನ್ಮಾನ್ಯ ಖರ್ಗೆ ಸಾಹೇಬರು ಇದ್ದಾರೆ, ಮಾನ್ಯ ಧರ್ಮಸಿಂಗ್ ಸಾಹೇಬರು ದೇಶಪಾಂಡೆ ಸಾಹೇಬರು, ಶ್ರೀಕಂಠಯ್ಯನವರು ಇದ್ದಾರೆ. ಅವರಿಗೆ ಅನೇಕ ವರ್ಷಗಳ ಅನುಭವ ಇದ್ದೂ ಕೂಡ ಈ ರೀತಿಯ ವಿಚಾರಕ್ಕೆ ಏಕೆ ಆಸ್ಪದ ಕೊಡುತ್ತಿದ್ದೀರಿ? ಬೆಂಗಳೂರಿನಲ್ಲಿ ಇವತ್ತು 65 ಲಕ್ಷ ಜನ ವಾಸ ಮಾಡುವ ಜಾಗದಲ್ಲಿ ಖಾಸಗಿ ಸಂಸ್ಥೆಯವರಿಗೆ ನೀರಿನ ವ್ಯವಸ್ಥೆ ಮಾಡುವುದಕ್ಕೆ, ನೀರಿನ ಸರಬರಾಜು ಮಾಡುವುದಕ್ಕೆ ತಾವು ಯಾವ ರೀತಿ, ಏತಕ್ಕೋಸ್ಕರ ಅವಕಾಶ ಮಾಡಿಕೊಟ್ಟಿರಿ? ತಮಗೆ ನೋವಾಗುವುದಿಲ್ಲವಾ? ಈ ರೀತಿ ಕೆಲಸ ಆದರೆ ಹೇಗೆ? ಗುಲ್ಬರ್ಗಾದಲ್ಲಿ ಮಾನ್ಯ ಖರ್ಗೆಯವರು ನೀರು ಸರಬರಾಜು ಮತ್ತು ರಸ್ತೆಗಳಿಗಾಗಿ 85 ಕೋಟಿ ರೂಪಾಯಿಗಳನ್ನು

ಖರ್ಚು ಮಾಡುತ್ತಿದ್ದೇವೆಂದು ಅವರು ಕಳೆದ ಸದನದಲ್ಲಿ ಉತ್ತರ ಕೊಟ್ಟರು ತುಂಬಾ ಸಂತೋಷ ಆಯಿತು. ಆಟ್‌ಲೀಸ್ಟ್ ಗುಲ್ಬರ್ಗಾ ನಗರದಲ್ಲಿ ಒಳ್ಳೆಯ ಕುಡಿಯುವ ನೀರಿನ ಯೋಜನೆ ಮಾಡುತ್ತಿದ್ದೀರಿ ಎಂದು ಸಂತೋಷ ಆಯಿತು. ಹಾಗಿದ್ದರೆ ಬೆಂಗಳೂರು ನಗರದಲ್ಲಿ ಆ ರೀತಿ ಮಾಡುವುದು ಬೇಡವಾ ಸ್ವಾಮಿ? ತಾವು ಈ ರೀತಿ ಏಕೆ ಜಾಸ್ತಿ ಹೊರೆಯನ್ನು ನಮ್ಮ ಮೇಲೆ ಹಾಕುತ್ತಿದ್ದೀರಿ? ಕಳೆದ 20 ದಿವಸಗಳಿಂದ ಜನ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದಿದೆ ಬಡವರಿಗೆ ಒಳ್ಳೆಯದು ಮಾಡುತ್ತದೆ ಎಂದು ನಾವು ಅಂದುಕೊಂಡಿದ್ದೇವೆ. ಆದರೂ ಕೂಡ ಈ ಕೆಲಸ ಏತಕ್ಕೆ ಮಾಡುತ್ತಿದ್ದೀರಿ ಎಂದು ಜನ ಮಾತನಾಡುತ್ತಿದ್ದಾರೆ. ಅದು ಒಂದೇ ಅಲ್ಲ, ಬಿಟಿಎಸ್ ಸ್ಟೂಡೆಂಟ್ಸ್‌ಗಳಿಗೆ ಪಾಸ್ ಕೊಡುತ್ತದೆ, ಔಲ್ಡ್ ಏಜ್‌ನವರಿಗೆ ಪಾಸ್ ಕೊಡುತ್ತದೆ, ಫ್ರೀಡಂ ಫೈಟರ್ಸ್‌ಗೆ ಪಾಸ್ ಕೊಡುತ್ತದೆ. ಈ ರೀತಿಯಲ್ಲಿ ಕೆಲಸ ನಡೆಯುತ್ತಿರುವಾಗ ಇಲ್ಲಿ ನಾವು ಜಲ ಮಂಡಳಿಯಿಂದ ಬಡವರಿಗಾಗಿ ಏನು ಮಾಡುತ್ತಿದ್ದೇವೆ? ಅದೇ ರೀತಿ ಇವತ್ತು ಖಾಸಗಿ ಫ್ರೆಂಚ್ ಸಂಸ್ಥೆಯವರು ಬರುತ್ತಾರೆ, ಅವರು ಸಂಪಾದನೆಗೋಸ್ಕರ ಬರುತ್ತಿದ್ದಾರಾ? ಸಮಾಜಸೇವೆ ಮಾಡುವುದಕ್ಕೋಸ್ಕರ ಬರುತ್ತಿದ್ದಾರಾ? ಸಮಾಜ ಸೇವೆ ಮಾಡುವುದಕ್ಕೋಸ್ಕರ ಅವರ ದೇಶದಲ್ಲಿ ಸಮಾಜ ಸೇವೆ ಮಾಡುವುದಕ್ಕೆ ಆಗಲಿಲ್ಲವಾ? ಸಂಪಾದನೆ ಮಾಡುವುದಕ್ಕೋಸ್ಕರ ಬರುತ್ತಿದ್ದಾರೆ? ಏತಕ್ಕೋಸ್ಕರ ಈ ರೀತಿ ಅವಕಾಶ ಕೊಡುತ್ತಿದ್ದೀರಿ? ಅನೇಕ ವಿಚಾರಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಹೇಳುವಾಗ ನಮಗೆ ಸಂತೋಷವಾಯಿತು. ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ವಿರೋಧಪಕ್ಷದವರಿಗೆ ಕರೆದು ಸಹಕಾರ ಪಡೆದು ನಾವು ಸರ್ಕಾರ ನಡೆಸುತ್ತೇವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಮೂರು ವರ್ಷಗಳಲ್ಲಿ ಬೆಂಗಳೂರು ನಗರದ ಶಾಸಕರಿಗೆ ಕರೆದು ಕಷ್ಟ ಸುಖ ಏನೆಂದು ಕೇಳಿರುವುದು ಕೇವಲ ಒಂದು ಬಾರಿ ಮಾತ್ರ ಜನ ನಮಗೆ ಕೇಳುವುದಿಲ್ಲವಾ? ಶಾಸಕರಿಗೆ ಕರೆದು ತಮ್ಮ ಕಷ್ಟ ಸುಖ ಏನೆಂದು ಕೇಳಿದ್ದೀರಾ? ಶಾಸಕರ ಸಹಕಾರವನ್ನು ಪಡೆದುಕೊಳ್ಳುತ್ತೇವೆಂದು ಸದನದಲ್ಲಿ ಹೇಳಿದ ತಾವುಗಳು ನಮ್ಮನ್ನು ಏಕೆ ಕರೆದು ಕೇಳಲಿಲ್ಲ? ಯಾವುದೇ ವಿಚಾರ ಬಂದರೂ ತಾವೇ ನಿರ್ಣಯ ತೆಗೆದುಕೊಳ್ಳುತ್ತಿದ್ದೀರಿ ಸಂತೋಷ ಒಳ್ಳೆಯದಾದರೆ ನಾವು ಯಾವುದಕ್ಕೂ ಆಕ್ಷೇಪ ಮಾಡುವುದಿಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ನಿಮ್ಮ ಸರ್ಕಾರ ಇದ್ದಾಗ ಕಾಂಗ್ರೆಸ್‌ನವರಿಗೆ ಎಷ್ಟು ಸಾರಿ ಕರೆದು ಕೇಳಿದ್ದೀರಿ?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ತಾವು ಹೇಳಿದ ಮಾತನ್ನು ತಮಗೆ ಹೇಳುತ್ತಿದ್ದೇನೆ. ನಾನು ಹೇಳಿದ್ದು ಅಲ್ಲ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಅನಂತ ಕುಮಾರ್‌ರವರು ಮಾತನಾಡುತ್ತಾರೆ ಅಂದರೆ ಅವರು ಮಾತನಾಡುವ ಜಾಗ ಬೇರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಸಚಿವರು ಅಲ್ಲಿಯೇ ಪಕ್ಕದಲ್ಲಿದ್ದಾರೆ ಅವರಿಗೆ ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನಾಯ್ಡುರವರು ಚೆನ್ನಾಗಿ ಮಾತನಾಡುತ್ತಿದ್ದಾರೆ, ಮಾತನಾಡಲಿ ಅವರು ಕೆಟ್ಟಿದ್ದು ಹೇಗೆಂದರೆ, ಸುರೇಶ್‌ಕುಮಾರ್‌ರವರು ಹೋಗಿ ಏನೋ ಹೇಳಿ ಬಂದರು, ಮಾನ್ಯ ಸುಬ್ಬಾರೆಡ್ಡಿಯವರು ಅಡ್ವೊಕೇಟ್ ಸಾಹೇಬರು

ಏನೋ ಹೇಳುತ್ತಿದ್ದಾರೆ. ಇಲ್ಲದಿದ್ದರೆ ನಾಯ್ಡು ಅವರು ಚೆನ್ನಾಗಿ ಮಾತನಾಡುತ್ತಾರೆ. ಇವರೆಲ್ಲಾ ಹೇಳುವುದರಿಂದ ಅಟೆನ್ಷನ್ ಡೈವರ್ಟ್ ಆಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸುಬ್ಬಾರೆಡ್ಡಿಯವರು ಯಾರು ಫೀಸ್ ಕೊಡುತ್ತಾರೆ. ಅವರಿಗೆ ವಕಾಲತ್ತು ಹಾಕುವುದು ಅಷ್ಟೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸುಬ್ರಹ್ಮಣ್ಯ ನಾಯ್ಡುರವರು ಮಾತನಾಡುವುದು ಹೇಗಿದೆ ಎಂದರೆ, ಬೆಂಗಳೂರು ವಾಟರ್ ಸಪ್ಲೈಯವರು ನೀರು ಸಪ್ಲೈ ಮಾಡಿದ ಹಾಗೆ ಇದೆ ನಾನು ಹೇಳಿ ಕೊಟ್ಟಿದ್ದು ಹೇಗಿದೆ ಎಂದರೆ ಫ್ರೆಂಚ್ ಕಂಪನಿಯವರು ಹೇಳುವ ಹಾಗೆ ಇದೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ಮಾನ್ಯ ಸುರೇಶ್ ಕುಮಾರ್‌ರವರು ಏನು ಹೇಳಿದರೂ ಕೂಡ ಮಾನ್ಯ ಸುಬ್ಬಾರೆಡ್ಡಿಯವರು ಏನು ಹೇಳಿದರೂ ಕೂಡ ತಮ್ಮ ವಿರುದ್ಧ ಅಂತೂ ಹೇಳಲಿಲ್ಲ. ಅವರು ಹೇಳಿದ್ದು ಬೆಂಗಳೂರು ಜನತೆ ಬಗ್ಗೆ ಬೆಂಗಳೂರು ಜನತೆ ಸಮಸ್ಯೆ ಬಗ್ಗೆ ಜಲ ಮಂಡಳಿ ಬಗ್ಗೆ ಹೇಳಿರಬಹುದು. ಅನೇಕ ಅನುಭವವಿರುವಂಥ ಮಂತ್ರಿಗಳು ಇದ್ದು, ಈ ತರಹ ಆಗುವುದು ಒಳ್ಳೆಯದಾ? ಇದನ್ನು ನಾನು ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಕೆಲವರು ಬಿಲ್‌ಗಳು ಬರುತ್ತದೆ ಎಂದು ಕಾಯುತ್ತಾ ಕೂತಿದ್ದಾರೆ. ತಾವು ತೀರ್ಮಾನ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ.

ಉಪಾಧ್ಯಕ್ಷರು : ವಿರೋಧ ಪಕ್ಷದ ನಾಯಕರೂ ಕೂಡ ಒಡಂಬಡಿಕೆ ಮಾಡಿಕೊಂಡಿದ್ದಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಸುರೇಶ್ ಕುಮಾರ್ : ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿ ಬಿಟ್ಟರೆ ನಾವು ಸುಮ್ಮನೆ ಕೂತು ಬಿಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಹೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳಬಹುದು. ಇಂಟರ್ವಿನ್ ಆಗಿ ಹೇಳುವ ಅಭ್ಯಾಸ ನಮಗೆ ಇಲ್ಲ. ನನಗೆ ಯಾರಾದರೂ ಇಂಟರ್ವಿನ್ ಮಾಡಿದರೆ ಪೇಶೆನ್ಸ್ ಹೋಗಿ ಬಿಡುತ್ತದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಉಪಾಧ್ಯಕ್ಷರೆ, ನಾನು ಯಾವಾಗಲೂ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾವುದರಲ್ಲೂ ಮಧ್ಯೆ ಪ್ರವೇಶ ಮಾಡುವುದಿಲ್ಲ. ಬೆಂಗಳೂರಿನ ವಿಚಾರ, ನೀರಿನ ವಿಚಾರ ಬಂದಾಗ ಮಾತ್ರ ನಾವು ಮಾತನಾಡುತ್ತೇವೆ. ನಾವು ಬೆಂಗಳೂರಿನ ಶಾಸಕರು ಆಗಿದ್ದೇವೆ. ಮಾನ್ಯ ಸೋಮಣ್ಣನವರು, ಸುರೇಶ್‌ಕುಮಾರ್‌ರವರು, ನಾನು ಮಾತನಾಡಿದ್ದೇನೆ, ಬಚ್ಚೇಗೌಡರು ಮಾತನಾಡುತ್ತಾರೆ, ಸಿಂಧ್ಯಾ ಸಾಹೇಬರು ಮಾತನಾಡುತ್ತಾರೆ. ಬೆಂಗಳೂರು ಜಲ ಮಂಡಳಿಯಲ್ಲಿ ಸುಮಾರು 3000 ಜನ ನೌಕರರು ಇದ್ದಾರೆ. ಖಾಸಗಿ ಸಂಸ್ಥೆಯವರಿಗೆ ತಾವು ವಹಿಸುತ್ತಿದ್ದೀರಿ 3000 ಜನ ನೌಕರರನ್ನು ಅವರು ತೆಗೆದುಕೊಳ್ಳುವುದಿಲ್ಲವೆಂದು ಸುದ್ದಿ ಇದೆ. ಅವರದೇ ಆದ ನೌಕರರನ್ನು ಇಟ್ಟುಕೊಂಡು ಅವರು ಅವರಿಗೆ ಸಂಬಳ ಕೊಡಬೇಕಾಗುತ್ತದೆ. ಬಂಡವಾಳ ನಾವು ಕೊಡಬೇಕು, ಹೊಸದಾಗಿ ನೇಮಕವಾದ ಸಿಬ್ಬಂದಿಗೆ ಸಂಬಳ ಕೊಡಬೇಕು, ಈಗಿರುವ ಸಿಬ್ಬಂದಿಗೆ ಕೂಡ ಸಂಬಳ ಕೊಡಬೇಕು. ಏತಕ್ಕೋಸ್ಕರ ಈ ರೀತಿ ಮಾಡಿದ್ದೀರಿ? ಇದು ನಮಗೆ ಕಾಡುತ್ತಿರುವ ದೊಡ್ಡ ಸಮಸ್ಯೆಯಾಗಿದೆ. ನಾವೆಲ್ಲರೂ ಬೀದಿಯಲ್ಲಿ ತಿರುಗಾಡಬೇಕಾದರೆ ಕಾಂಗ್ರೆಸ್, ಜನತಾದಳ, ಬಿಜೆಪಿ ಎಂದು ಬರುವುದಿಲ್ಲ, ನೀವು ಶಾಸಕರಿದ್ದೀರಿ ಸಾಮಾನ್ಯ ಜನ ಏನು ಕೇಳುತ್ತಾರೆ, ಕಾಂಗ್ರೆಸ್ ಸರ್ಕಾರ ಇದೆ ಎಂದು

ಹೇಳುವುದಿಲ್ಲ. ಜನತಾದಳ ಇದೆ ಎಂದು ಹೇಳುವುದಿಲ್ಲ, ನೀವು ಶಾಸಕರಿದ್ದೀರಿ ನಿಮ್ಮ ಕಾಲದಲ್ಲಿ ನೀರಿನ ಬೆಲೆ ಜಾಸ್ತಿ ಮಾಡಿದ್ದೀರಿ, ಕರೆಂಟ್ ಬೆಲೆ ಜಾಸ್ತಿಯಾಯಿತು, ರಸ್ತೆಗಳು ಸರಿಯಾಗಿ ಮಾಡಲಿಲ್ಲ, ಕೊಳಚೆ ಪ್ರದೇಶ ನಿರ್ಮೂಲನೆ ಆಗಲಿಲ್ಲ, ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುತ್ತೇವೆಂದು ಹೇಳಿದ್ದೀರಿ, ಮಾಡುವುದಕ್ಕೆ ಆಗಲಿಲ್ಲ. ಮೂರು ವರ್ಷವಾಯಿತು ನೀವು ಏನು ಮಾಡಿದ್ದೀರಿ ಎಂದು ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ. ಇದು ನಮಗೆ ಕಾಡುತ್ತಿರುವ ಪ್ರಶ್ನೆ ಅವರು ಕೇಳುತ್ತಿರುವುದು ನಾಳೆ ಬೆಳಿಗ್ಗೆ ಅವರು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪ್ರೈವೇಟೈಸ್ ಮಾಡಿ ಬೇರೆ ಖಾಸಗಿ ಸಂಸ್ಥೆಯವರಿಗೆ ಕೊಡುತ್ತಾರೆ. ಶಿಕ್ಷಣ ಸಂಸ್ಥೆಗಳನ್ನು ಬೇರೆಯವರಿಗೆ ಕೊಡುತ್ತಾರೆ, ಆಸ್ಪತ್ರೆಗಳನ್ನು ಬೇರೆಯವರಿಗೆ ಕೊಡುತ್ತಾರೆ, ನಾಳೆ ನೀವೂ ಕೂಡ ಬೇರೆಯವರ ಜೊತೆ ಮಾರಿ ಹೋಗುತ್ತೀರಿ ಎಂದು ಈ ರೀತಿ ಕೇಳುವ ಸಂಶಯ ಬಂದಿದೆ. ಅದಕ್ಕೋಸ್ಕರ ದಯವಿಟ್ಟು ನಾನು ಸರ್ಕಾರದಲ್ಲಿ ತಮ್ಮ ಮುಖೇನ ಒತ್ತಾಯ ಮಾಡುವುದೇನೆಂದರೆ, ಖಾಸಗಿ ಸಂಸ್ಥೆಯವರಿಗೆ ಇದನ್ನು ವಹಿಸುವುದು ಬೇಡ, ಯಾವ ರೀತಿ ಬಿಎಮ್‌ಟಿಸಿ ಇವತ್ತು ಲಾಭದಲ್ಲಿ ನಡೆಯುತ್ತಿದೆ. ಕೆಎಸ್‌ಆರ್‌ಟಿಸಿ ಲಾಭದಲ್ಲಿ ನಡೆಯುತ್ತಿದೆ. ಅದೇ ರೀತಿ ಬಿಡಿಎ ಕೂಡ ಲಾಭದಲ್ಲಿ ನಡೆಯುತ್ತಿದೆ. ಅದರ ಮಾದರಿಯಲ್ಲಿ ಈ ಸಂಸ್ಥೆಯನ್ನು ಕೂಡ ನೋಡಿಕೊಳ್ಳುವುದಕ್ಕೆ ಸರ್ಕಾರ ಸರ್ವ ವಿಧವಾದ ಪ್ರಯತ್ನ ಮಾಡಬೇಕು. ನಮ್ಮ ಸರ್ಕಾರಿ ಸಂಸ್ಥೆಗಳು ಏನಿವೆ, ರಾಜ್ಯ ಸರ್ಕಾರದ ಅಡಿಯಲ್ಲಿ ನಡೆಯುವ ಸ್ವಾಯತ್ತ ಸಂಸ್ಥೆಗಳು ಏನಿವೆ ಅದರಲ್ಲಿ ಕೂಡ ಸರಿಯಾದ ರೀತಿಯಲ್ಲಿ ನಷ್ಟವಾಗದೆ ಇರುವ ರೀತಿಯಲ್ಲಿ ಸರ್ಕಾರ ಕಟ್ಟು ನಿಟ್ಟಿನ ಕ್ರಮಗಳನ್ನು ತೆಗೆದುಕೊಂಡು ಲಾಭ ಬರುವ ದೃಷ್ಟಿಯಲ್ಲಿ ಕೆಲಸ ಮಾಡಿದಾಗ ಸರ್ಕಾರಕ್ಕೆ ತೊಂದರೆಯಾಗುವುದಿಲ್ಲ. ಅದೇ ರೀತಿಯಲ್ಲಿ ಕಾವೇರಿ ನಾಲ್ಕನೇ ಹಂತ ಬಂದಾಗ ಪ್ರತಿ ದಿನ 55 ಲೀಟರ್ ನೀರು ಒಬ್ಬರಿಗೆ ಕೊಡುತ್ತೇವೆಂದು ಹೇಳಿದ್ದೀರಿ, ಆದರೆ ಸರ್ಕಾರಕ್ಕೆ ಅದನ್ನು ಇಲ್ಲಿಯವರೆಗೆ ಮಾಡುವುದಕ್ಕಾಗಲಿಲ್ಲ. ಇರಲಿ ಸರ್ಕಾರಕ್ಕೆ ಕೂಡ ಕಷ್ಟ ಬರುತ್ತದೆ, ಕಾವೇರಿ ನಾಲ್ಕನೇ ಹಂತ ಬಂದಾಗ ನಮಗೆ ನೀರು ಕೊಡುವುದಕ್ಕೆ ಏನು ಸಮಸ್ಯೆ ಆಗುವುದಿಲ್ಲ. ಪ್ರತಿಯೊಬ್ಬ ಪ್ರಜೆಗೆ ಕೂಡ ನೀರು ಸಿಗುತ್ತದೆ. ಹೆಚ್ಚಿಗೆ ಹೊರೆಯಾಗುವ ಸಂಸ್ಥೆ ಜೊತೆಗೆ ಸರ್ಕಾರ ಒಪ್ಪಂದ ಮಾಡಿಕೊಳ್ಳುವುದು ಸರಿ ಅಲ್ಲ. ಇದನ್ನು ಕೈಬಿಡಬೇಕೆಂದು ತಮ್ಮ ಮುಖಾಂತರ ಒತ್ತಾಯಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಸನ್ಮಾನ್ಯ ಅಧ್ಯಕ್ಷರೆ, ನಗರದಲ್ಲಿ ನೀರು ವಿತರಣಾ ವ್ಯವಸ್ಥೆಯನ್ನು ಮೊದಲ ಬಾರಿಗೆ ಖಾಸಗಿಯವರಿಗೆ ಕೊಡುವ ಕಾರ್ಯ ಇದು ಒಂದು ಹುನ್ನಾರ ಅಥವಾ ಇದೊಂದು ಹಗಲು ದರೋಡೆ ಎಂದು ಹೇಳಬಹುದು. ನಮ್ಮ ನೀರನ್ನು ಬಳಸುವವರಿಗೆ ಇಂತಹ ಫ್ರೆಂಚ್ ಸಂಸ್ಥೆಗಳನ್ನು ತಂದು ಇಲ್ಲಿ ಮೊದಲ ಬಾರಿಗೆ ಅಲ್ಲಿ ತಳ ಕಚ್ಚಿರುವ, ಸಂಸ್ಥೆಗಳು ಅಲ್ಲಿ ಅವರಿಗೇ ಬಂಡವಾಳ ಇಲ್ಲ. ಆ ಸಂಸ್ಥೆಗಳ ಹಣದ ಬ್ಯಾಕ್‌ಗ್ರೌಂಡ್ ಏನಿದೆ ಯಾವ ಉದ್ದೇಶದಿಂದ ಇಲ್ಲಿ ತಂದು ಅವರಿಗೆ 500 ಕೋಟಿ ರೂಪಾಯಿ ಕೊಡುವುದು, ಈ ಸದನ ಎಂಟನೇ ತಾರೀಖಿನಿಂದ ನಡೆಯುತ್ತಿದೆ. 11ನೇ ತಾರೀಖಿಗೆ ಒಂದು ನೋಟಿಫಿಕೇಷನ್ ಹೊರಡಿಸುತ್ತಾರೆ. ಖಾಸಗಿ ಫ್ರೆಂಚ್ ಸಂಸ್ಥೆಗೆ ಎರಡು ಜೋನ್ ವಿತರಣಾ ವ್ಯವಸ್ಥೆ ಕೊಡಿ ಎಂದು ಹೇಳುವುದು ಇದು ಬಹಳ ನಾಚಿಗೇಡು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ತಾವು ಬಲ್ಕ್ ವಾಟರನ್ನು ಬೆಂಗಳೂರಿನ 65 ಲಕ್ಷ ಜನರಿಗೆ ತರುವುದು

ಕಾವೇರಿ ಮೂಲದ 1,2,3, ಮತ್ತು ನಾಲ್ಕನೇ ಯೋಜನೆಗಳಿಂದ ಆ ನಂತರ ತರುವುದು ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟದಿಂದ ಮೂರು ಮೂಲಗಳಿಂದ ನೀರನ್ನು ತಂದು ವಿತರಣೆ ಮಾಡುವ ವ್ಯವಸ್ಥೆ ಇದೆ. ಇದನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಬಹಳ ಚೆನ್ನಾಗಿ ನಡೆಸಿಕೊಂಡು ಬಬಿದ್ದದಾರೆ. ನಾವು ತಿಳಿದ ರೀತಿಯಲ್ಲಿ ಅವರ ಅನೇಕ ಯೋಜನೆಗಳ ರೂಪದಲ್ಲಿ ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಮ್ಸ್ ಹಾಕಿಕೊಂಡು ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನದಲ್ಲಿ ಇರತಕ್ಕಂತಹ ವ್ಯವಸ್ಥೆಯನ್ನು ಮಾಡಿಕೊಂಡಿರತಕ್ಕಂತಹ ಸಂಸ್ಥೆ ಇದನ್ನು ನಾವು ಮೆಚ್ಚ ಬೇಕಾಗುತ್ತದೆ. ಸರ್ಕಾರದ ಹಣವನ್ನು ಇದರಲ್ಲಿ ತೊಡಗಿಸಿಲ್ಲ. ಈ ಸಂಸ್ಥೆಗೆ ಕೊಡುವುದಕ್ಕೆ ಮುಂಚೆ ಮಾನ್ಯ ರಾಮಲಿಂಗಾರೆಡ್ಡಿಯವರು, ನಗರದ ಎಲ್ಲಾ ಶಾಸಕರು ಸುತ್ತಲೂ ಇರುವ ಶಾಸಕರಿದ್ದೇವೆ. ಮಾನ್ಯ ಕೃಷ್ಣಪ್ಪನವರು ಈ ಬಗ್ಗೆ ಸಿಎಮ್‌ಸಿಗಳಿಗೂ ನೀರು ಕೊಡಬೇಕೆಂದು ಕೇಳತಕ್ಕಂತಹವರಲ್ಲಿ ಅವರೂ ಒಬ್ಬರು. ಈ ಸಂದರ್ಭದಲ್ಲಿ ನಮಗೆ ಬರುವಂತಹ ನೀರಿನ ಪ್ರಮಾಣ ಎಷ್ಟು? ಮತ್ತು ನಮ್ಮ ಭವಿಷ್ಯದಲ್ಲಿ ಎಷ್ಟು ಬೇಕಾಗುತ್ತದೆ, 2010ಕ್ಕೆ ಎಷ್ಟು ಬೇಕು, 2025ಕ್ಕೆ ಎಷ್ಟು ಬೇಕು? ನಮ್ಮ ಪ್ರೊಜೆಕ್ಟಡ್ ಪಾಪುಲೇಷನ್ ಫಿಗರ್ ಏನು ಇದಕ್ಕೆ ಒದಗಿಸುವ ನೀರಿನ ಪ್ರಮಾಣ ಏನು ಎಂದು ಅರ್ಥ ಮಾಡಿಕೊಳ್ಳದೆ ಕಷ್ಟ ಪಟ್ಟು ಸಾವಿರಾರು ಕೋಟಿ ರೂಪಾಯಿ ಜನರ ಮೇಲೆ ಹಾಕಿರುವ ತೆರಿಗೆಯಿಂದ ತಂದಿರತಕ್ಕಂತಹ ನೀರನ್ನು ಬಹಳ ಸುಲಭವಾಗಿ ಯಾರೋ ಎಲ್ಲಿಂದಲೋ ಬಂದಂತಹ ಸಂಸ್ಥೆಗಳಿಗೆ ಕೊಡುವ ವ್ಯವಸ್ಥೆಯನ್ನು ಕೂಡಲೇ ರದ್ದು ಪಡಿಸಬೇಕು. ಇದು ಬಹಳ ಅನ್ಯಾಯವಾಗುತ್ತಿದೆ. ಅವರನ್ನು ರೆಡ್ ಕಾರ್ಪೆಟ್ ಹಾಕಿ ಸ್ವಾಗತ ಮಾಡಿ ನೀವು ಬನ್ನಿ ಎಂದು ಹೇಳುತ್ತೀರಿ. ಒಳಗೊಳಗೆ ಅವರು ತೀರ್ಮಾನಗಳನ್ನು ತೆಗೆದುಕೊಂಡು ವೆಸ್ಟ್ ಎಂಟ್ ಹೋಟೆಲ್‌ನಲ್ಲಿ ಕೂತು ತೀರ್ಮಾನವಾಗಿದೆ ಎಂದು ಆಚೆ ಹೇಳುತ್ತಾರೆ. ನಾರಾಯಣನಮಃ ಎಂದು ಹೇಳಿ ಅವರ ಕಾಣದ ಕೈ ಇದರಲ್ಲಿ ಪ್ರವೇಶ ಮಾಡಿ ಇವತ್ತು ಕೊಡುತ್ತಿರತಕ್ಕಂತಹ ವ್ಯವಸ್ಥೆಯನ್ನು ಕೂಡಲೇ ರದ್ದು ಮಾಡಬೇಕು. ನಾನೂ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದೆ. ಸಾಕಷ್ಟು ಬ್ರಿಟೀಷ್ ಸಂಸ್ಥೆಗಳು ವಿತರಣಾ ವ್ಯವಸ್ಥೆಗೆ ಬಂದಿದ್ದವು. ಅವರಿಗೆ ನಾವು ಇವತ್ತು 500 ಕೋಟಿ ರೂಪಾಯಿ ಕೊಡುವಂತಾದ್ದು. 500 ಕೋಟಿ ರೂಪಾಯಿ ನಾವು ಕೊಟ್ಟು ಅವರು ಮಾಡುವಂತಾದ್ದು ಈಗಲೇ ನಾವು ಸಾಲದಲ್ಲಿ ಮುಳಗಿ ಹೋಗಿದ್ದೇವೆ. 1996-97ನೇ ಸಾಲಿನಲ್ಲಿ ರಾಜ್ಯದ ಸಾಲ ಇದ್ದಂತಾದ್ದು 9 ಸಾವಿರ ಕೋಟಿ ರೂ.ಗಳು ಇವತ್ತು 2002-2003ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ 29 ಸಾವಿರ ಕೋಟಿರೂಪಾಯಿ ಸಾಲ. ಅಂದರೆ 20 ಸಾವಿರ ಕೋಟಿ ರೂಪಾಯಿ ಕಳೆದ ನಾಲ್ಕು ವರ್ಷಗಳಲ್ಲಿ ಆಗಿರತಕ್ಕಂಥ ಸಾಲದ ಪ್ರಮಾಣ. ಈ ಸರ್ಕಾರ ಬಿಡುವಷ್ಟರೊಳಗೆ ನಿರೀಕ್ಷೆ ಮಾಡಿರತಕ್ಕಂಥ ಸಾಲ ಮುಂದೆ 45 ಸಾವಿರ ಕೋಟಿ ರೂ. ಎಂದು ಹೇಳುತ್ತಾರೆ. ಅಂದರೆ ಸಾಲದಲ್ಲಿ ಮುಳುಗಿಸಿ ಮುಳುಗಿಸಿ ಹೋಗುವಂತಹ ಒಂದು ಪರಿಸ್ಥಿತಿಯನ್ನು ನಾವು ಪ್ರೊಜೆಕ್ಟ್‌ಟೆಡ್ ಫಿಗರ್ಸ್ ಏನು ಇದೆ ಅದನ್ನು ಕಾಣುವಂತಾದ್ದು ನಾವು ನೋಡುತ್ತಿರತಕ್ಕಂಥಾದ್ದು. ಆದರೆ ನಾನು ಬಹಳ ಸಮಯ ತೆಗೆದುಕೊಳ್ಳುವುದಿಲ್ಲ. ಈ ಬೆಂಗಳೂರು ನಗರ ನೀರು ಸರಬರಾಜು ಮಂಡಲಿ ಪ್ಲಾನ್ ಏನಿದೆ ಇದನ್ನು ಡ್ಯೂಯಿಲ್ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಒಬ್ಬರು ನೀರು ತರುವಂತಾದ್ದು, ಒಬ್ಬರು ಒ ಅಂಡ್ ಎಂ ಮಾಡುವಂತಾದ್ದು ಮಾಡುವಂತಾದ್ದಕ್ಕೆ ಅವಕಾಶ ಕೊಡಲಿಕ್ಕೆ ಆಗುವುದಿಲ್ಲ ಅಲ್ಲಿರತಕ್ಕಂಥ ಅಧಿಕಾರಿಗಳು, ಛೇರ್ಮನ್‌ಗಳು ಸುಮ್ಮನೇ

ಏಕೆ ಕುಳಿತಿದ್ದಾರೋ ನನಗೆ ಗೊತ್ತಿಲ್ಲ. ಬೆಂಗಳೂರು ನಗರ ನೀರು ಸರಬರಾಜು ಮಂಡಲಿಯಲ್ಲಿರತಕ್ಕಂಥವರು. ಆ ಅಧಿಕಾರಿಗಳಿಗೆ ಏನು ಆಗಿದೆ? ಅವರಿಗೆ ಆಗಿರತಕ್ಕಂಥ ಕಷ್ಟ ಏನು? ಏಕೆ ಈ ವಿಷಯವನ್ನು ಅವರು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಹೇಳಿದರು. ದೆಹಲಿಯಲ್ಲಿ ಯಮುನಾ ನದಿ ಹರಿಯುತ್ತಿದೆ ಪಕ್ಕದಲ್ಲಿಯೇ ಗಂಗಾ ಯಮುನಾ ಅಲ್ಲೇ ನೀರು ಇಲ್ಲದೇ ಇರತಕ್ಕಂಥ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ ಆದರೆ ಬೆಂಗಳೂರು ಜಲ ಮಂಡಲಿಯಲ್ಲಿ ನಾವು ಪರಿಸ್ಥಿತಿಯನ್ನು ಇವತ್ತಿನವರೆಗೂ ಕಂಡಿಲ್ಲ. ವರ್ಷದ 365 ದಿನ ನೀರು ಕೊಡತಕ್ಕಂಥ ವ್ಯವಸ್ಥೆ ಇರುವುದನ್ನು ಇವತ್ತು ಯಾರದೋ ಕೈಗೆ ಕೊಡುವುದು, ಅವರು ತಂದಂತಹ 550 ಕೋಟಿ ರೂಪಾಯಿ ಮತ್ತು ಗ್ರಾಹಕ ಯಾರು ಉಪಯೋಗಿಸುತ್ತಾನೆ ಅವನಿಗೆ 10 ರೂಪಾಯಿ ಒಂದು ಸಾವಿರ ಲೀಟರ್ಸ್‌ಗೆ ಅವರು ಚಾರ್ಜ್ ಮಾಡುತ್ತಾರೆ, ಅದು ಇವತ್ತು 40-50 ರೂಪಾಯಿಗಳು ಒಂದು ಸಾವಿರ ಲೀಟರ್ಸ್‌ಗೆ ಚಾರ್ಜ್ ಮಾಡುವಂತಾದ್ದಕ್ಕೆ ಕೊಡುವಂತಾದ್ದು ಅವರು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ನಾನು ಹೇಳುತ್ತಿದ್ದೇನೆ ಈ ಸದನದಲ್ಲಿ ನಾವೇ ನೀರು ತರುವಂತಹ ವ್ಯವಸ್ಥೆ, ನಾವೇ ನೀರು ವಿತರಣೆ ಮಾಡುವಂತಹ ವ್ಯವಸ್ಥೆ ಎರಡೂ ಒಬ್ಬರ ಅಧೀನದಲ್ಲಿರಬೇಕಾಗುತ್ತದೆ. ನಾವು ನೀರು ತರುವುದು ಬೇರೆಯವರು ನೀರು ವಿತರಣೆ ಮಾಡುವುದಾದರೆ ಇದು ಬಹಳ ದೊಡ್ಡ ದುಷ್ಪರಿಣಾಮವಾಗುತ್ತದೆ. ಮಾನ್ಯ ಚಂದ್ರೇಗೌಡರೇ, ಲಾ ಅಂಡ್ ಆರ್ಡರ್ ಪ್ರಾಬ್ಲಂ ಸಹ ಆಗುತ್ತದೆ. ಅವರು ಮನಸ್ಸಿಗೆ ಬಂದ ಹಾಗೆ ವಿತರಣೆ ಮಾಡಲಿಕ್ಕೆ ಆಗುವುದಿಲ್ಲ. ಅನೇಕ ಕಡೆ ನಮ್ಮ ಅನುಭವ ಇದೆ. ಇವತ್ತು ನೀರನ್ನು ಆಮೇಶ ಕೊಡಬೇಕು. ಅಂದರೆ 24 ಗಂಟೆಗಳ ಕಾಲ ನೀರು ಕೊಡುವಂತಹ ವ್ಯವಸ್ಥೆಯನ್ನು ನಾವು ನೋಡಿದ್ದೇವೆ ಅನೇಕ ಕಡೆಗಳಲ್ಲಿ. ಇವತ್ತು ನಾವು ಪೂರ್ತಿ ನೀರನ್ನು ಕೊಡುವುದಿಲ್ಲ. ಅವನು ಯಾವ ರೂಪದಲ್ಲಿ ಚಾರ್ಜ್ ಮಾಡುತ್ತಾನೆ. ಕನ್‌ಸೆಂಷನ್ ರೇಟ್‌ನಲ್ಲಿ ಚಾರ್ಜ್ ಮಾಡುತ್ತಾನೆ. ಕನ್‌ಸೆಂಷನ್ ರೇಟ್ ಕೊಡಬೇಕೆಂದು ಎಲ್ಲಿ ಇದೆ ಅಥವಾ ನಾವು ಏನು ಇವತ್ತು ಎಂಎಲ್‌ಡಿ ಅಂತ ಹೇಳುತ್ತೇವೆ ನೂರು ಲೀಟರ್ಸ್ ಪರ್ ಕ್ಯಾಪಿಟಾ ಅಂತ ಏನು ನಾವು ಹೇಳುತ್ತಿದ್ದೇವೆ, ರೂರಲ್ ಸೆಕ್ಟಾರ್‌ನಲ್ಲಿ 50 ಲೀಟರ್ ಪರ್ ಕ್ಯಾಪಿಟಾ ಕೊಡುತ್ತಿದ್ದೇವೆಂದು ಹೇಳುತ್ತಿದ್ದೇವೆ, ಅದಕ್ಕೆ ತಾವು ಬದ್ಧರಾಗಬೇಕಾಗುತ್ತದೆ. ನಾವು ಪ್ರತಿ ನಾಗರೀಕನಿಗೆ ಪಟ್ಟಣದಲ್ಲಿರತಕ್ಕಂಥ ಕನ್‌ಷೂಮರ್ಸ್ ಅಂತ ಏನು ಲಿಸ್ಟ್ ಮಾಡಿದ್ದೇವೆ, ಸುಮಾರು 64 ಲಕ್ಷ ಕುಟುಂಬಗಳು ಏನು ಇವತ್ತು ಈ ನಗರದಲ್ಲಿವೆ ಅಂತ ಹೇಳುತ್ತಾರೆ ಅಥವಾ 75 ಲಕ್ಷ ಕುಟುಂಬಗಳು ಏನು ಇದೆ ಅವರಿಗೆ ನೀರನ್ನು ಕೊಡುವಂತಹ ಸಂಪೂರ್ಣ ಜವಾಬ್ದಾರಿಯನ್ನು ಅವರು ವಹಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಅವರು ಸಿದ್ಧರಿಲ್ಲ. ಅವರು ಬರುವಂತಾದ್ದು ಮಾಡುವಂತಾದ್ದು ಏನು ನಮಗೆ ನೀವು ಹಣವನ್ನು ಕೊಡಬೇಕು, ಸಾಲದ ರೂಪದಲ್ಲಿ ನಾವು ತರುತ್ತೇವೆ ಆದರ ಜೊತೆಗೆ ಬ್ಯಾಂಕ್‌ನಲ್ಲಿ ಡಿಪಾಜಿಟ್ಸ್ ಏನು ಇದೆ ಅದನ್ನು ತೊಡಗಿಸಬೇಕು. ತಾವು ಇವತ್ತು ಏನು ಎಂ.ಒ.ಯು. ರುಜು ಮಾಡಿದ್ದೀರಿ ಇದು ಬಹಳ ದೊಡ್ಡ ಗಂಡಾಂತರ ಇರತಕ್ಕಂಥ ಎಂ.ಒ.ಯು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಮ್ಮ ನಗರಕ್ಕೆ ನೀರು ಕೊಡುವಂತಹ ವ್ಯವಸ್ಥೆಗೆ. ಆದ್ದರಿಂದ ನಾನು ಮತ್ತೊಮ್ಮೆ ಹೇಳುವಂಥಾದ್ದು, ಸರ್ಕಾರ ಇದನ್ನು ಪುನರ್‌ಪರಿಶೀಲಿಸಿ ನೋಡಬೇಕು. ನಾನು ಒಂದು ಹೇಳುತ್ತೇನೆ, ಸದನ ಇರುವಾಗ ಈ ನೋಟಿಫಿಕೇಶನ್ ಏಕೆ ಬಂತು? ಯಾರನ್ನು ಕೇಳಿ ಈ ನೋಟಿಫಿಕೇಶನ್ ಮಾಡಿದ್ದಾರೆ? ದಿನಾಂಕ

11-7-2002 ರಂದು ಇವರು ನೋಟಿಫಿಕೇಶನ್ ಮಾಡಿರುವಂತಾದ್ದು, ಎಂ.ಓ.ಯು ಮಾಡಿರತಕ್ಕಂಥಾದ್ದು ಹೇಗೆ? ಸಾರ್ವಜನಿಕರಿಂದ ಇವರು ಅಹವಾಲುಗಳನ್ನು ಪಡೆದರಾ ಅಥವಾ ಇವರು ಶಾಸಕರನ್ನು ಮಂತ್ರಿಗಳನ್ನು ನಗರದ ಶಾಸಕರನ್ನು ಕಂಡು ಕೇಳಿದ್ದಾರಾ ಅಥವಾ ಇದಕ್ಕೆ ಏನಾದರೂ ಅಬ್ಜೆಕ್ಷನ್ಸ್ ಕಾಲ್‌ಫಾರ್ ಮಾಡಿ ಮಾಡಿರತಕ್ಕಂಥಾದ್ದು ಇದೆಯೇ? ಇದನ್ನು ಯಾವುದೂ ಮಾಡಿಲ್ಲ. ಇದನ್ನು ಇವತ್ತು ಒಂದು ಟ್ರಯಲ್‌ಬೇಸಿಸ್‌ನಲ್ಲಿ ನೋಡೋಣ ಇದು ಯಾವ ರೀತಿ ಆಗುತ್ತದೆ ಅಂತ ಅಲ್ಲ ಇದು ಟ್ರಯಲ್ ಬೇಸಿಸ್‌ನಲ್ಲಿ ನೋಡುವುದು ಅಲ್ಲ. ಹಾಗಾದರೆ ಅವರು ಬಂಡವಾಳ ಹೂಡಿಕೊಂಡು ಬರಲಿ. ಆಗ ಟ್ರಯಲ್ ಬೇಸಿಸ್ ಅಂತ ಮಾಡಲಿ ಅಥವಾ ಇವತ್ತು ನಮ್ಮಲ್ಲಿ ಎಷ್ಟು ಲೀಕೇಜಸ್ ಇದೆ, ಎಷ್ಟು ಫಿರ್‌ಪರೇಜ್ ಇದೆ. ನಗರದಲ್ಲಿ ನೀರು ಸೋರುವಿಕೆ ಪ್ರಮಾಣ ಎಷ್ಟು ಇದೆ, ಅದನ್ನು ಮಾಡುವಂತಾದ್ದು ಬೋರ್ಡಿನ ಅಧಿಕಾರಿಗಳು ಬೋರ್ಡಿನಲ್ಲಿರತಕ್ಕಂಥ ನೌಕರರು ಅವರಿಗಿಂತ ಚೆನ್ನಾಗಿ ಮಾಡುವಂತಹ ಅನುಭವ ಇದೆ. ನೀರಿಗೆ ಏನೂ ತೊಂದರೆ ಇಲ್ಲ. ಸಾಕಷ್ಟು ನೀರು ನಗರಕ್ಕೆ ಬರುತ್ತದೆ. ಆದರೆ ವಿತರಣಾ ವ್ಯವಸ್ಥೆಯಲ್ಲಿ ಲೋಪ ಇರತಕ್ಕಂಥಾದ್ದು, ಇವತ್ತು ನಾವು ಕಂಡಿರತಕ್ಕಂಥಾದ್ದು ಅನೇಕ ಭಾಗಗಳಲ್ಲಿ. ಏನು ನಾವು ವಾಟರ್‌ಮೆನ್ ಅಂತ ಕರೆಯುತ್ತೇವೆ ಅವನು ಮಾಡತಕ್ಕಂಥ ಕೆಲವು ವ್ಯತ್ಯಾಸಗಳಿಂದ ಇವತ್ತು ಇದು ಆಗಿರತಕ್ಕಂಥಾದ್ದು. ಆದ್ದರಿಂದ ಬೆಂಗಳೂರು ನಗರ ನೀರು ಸರಬರಾಜು ಮಂಡಲಿ ಸಾಕಷ್ಟು ಕೇಪಬಲ್ ಇದೆ. ಅದನ್ನು ನಾವು ಕಡಿಮೆ ಮಾಡಿ ಯಾರೋ ಎಲ್ಲೋ ಇರುವಂತಹ ಸಂಸ್ಥೆಯನ್ನು ತಂದು ಇವರ ಮೇಲೆ ಸವಾರಿ ಹೊಡೆ ಎಂದು ಡ್ಯಾಯಲ್ ಕಂಟ್ರೋಲ್ ಮಾಡುವಂತಹ ವ್ಯವಸ್ಥೆಯನ್ನು ಮಾಡಲೇಬಾರದು. ಇದನ್ನು ಸರ್ಕಾರ ಪ್ರತಿಷ್ಠೆಯನ್ನಾಗಿ ತೆಗೆದುಕೊಳ್ಳಬಾರದು. ದಯವಿಟ್ಟು ಸಾರ್ವಜನಿಕರ ಅಹವಾಲನ್ನು ಕೇಳಿ, ಮಾನ್ಯ ಕೃಷ್ಣಪ್ಪನವರು, ರಾಮಲಿಂಗಾರೆಡ್ಡಿ ನಗರದ ಮಂತ್ರಿಗಳು ರೇವಣ್ಣನವರು ನಾವೆಲ್ಲಾ ಇದ್ದೇವೆ. ನಮ್ಮ ಅನುಭವ ಇದೆ ಇದರ ಹಿಂದೆ ಇವು ಬೋಗಸ್ ಕಂಪನಿಗಳು. ಇದೇ ರೀತಿ ನಮ್ಮ ಹತ್ತಿರ ಬಂದಿದ್ದರು. ಬೈ ವಾಟರ್ ಅಂತ ಬ್ರಿಟೀಷ್ ಕಂಪನಿಗಳವರು ಬಂದರು. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅನ್ನು ನಮಗೆ ಹ್ಯಾಂಡ್ ಓವರ್ ಮಾಡಿ ಎಂದು ಆಸ್ಟ್ರೇಲಿಯಾದವರು ಬಂದರು. ಬೆಳಗಾಂನಲ್ಲಿ ಟ್ರಯಲ್ ಬೇಸಿಸ್‌ನಲ್ಲಿ ಮಾಡುತ್ತೇವೆಂದು ಬಂದರು, ಅವರ ಕಂಡೀಷನ್ಸ್ ನೋಡಿ ನಾವು ನಮಗೆ ಒದೇ ಬೀಳುತ್ತದೆ ಅಂತ ಅಂದು ಕೊಂಡೆವು ನಾವು. ಸಾರ್ವಜನಿಕರಿಂದ ಒದೆ ಬೀಳುತ್ತದೆ ಇವರಿಗೆ ನಾವು ಕೊಟ್ಟರೆ, ಒಂದು ದಿವಸ ಜನ ಬಂದು ನಮ್ಮನ್ನು ಹೊಡೆಯುತ್ತಾರೆ ಬಿಡುವುದಿಲ್ಲ ಎಂದು ಕೊಂಡೆವು ಇದು ಇವತ್ತು ಇರತಕ್ಕಂಥ ಒಂದು ಪರಿಸ್ಥಿತಿ ಏಕೆ ಸರ್ಕಾರ ಇದನ್ನು ತೆಗೆದುಕೊಂಡು ಮಾಡುತ್ತೇವೆಂದು ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಈ ಇಶ್ಯೂಸ್‌ನಲ್ಲಿ ಇವತ್ತು ನಾನು ಕೇಳುವಂತಹದ್ದು ಇದಕ್ಕೆ ನಾವೆಲ್ಲಾ ಪ್ರೊಟೆಸ್ಟ್ ಮಾಡಬೇಕು. ಇದಕ್ಕೆ ನಮ್ಮೆಲ್ಲರ ವಿರೋಧ ಇದೆಲ್ಲ ಸರ್ಕಾರದ ಈ ತೀರ್ಮಾನವನ್ನು ನಾವೆಲ್ಲಾ ಪ್ರೊಟೆಸ್ಟ್ ಮಾಡುತ್ತೇವೆ. ಇವರು ಜಾಗತೀಕರಣ ನೆಪದಲ್ಲಿ ಫ್ರೆಂಚ್ ಕಂಪನಿಗಳು ಬಂದಿರತಕ್ಕಂಥವರು. ನಮ್ಮ ಬೆಂಗಳೂರು ನಗರ ನೀರು ಸರಬರಾಜು ಸಂಸ್ಥೆಯನ್ನು ಮುಗಿಸಬೇಕು ಅಂತ ಬಂದಿರುವವರು. ಚೆನ್ನಾಗಿರತಕ್ಕೂ ಈ ಸಂಸ್ಥೆಯನ್ನು ಹಾಳು ಮಾಡಬೇಕೆನ್ನುವ ಉದ್ದೇಶದಿಂದ ಬಂದಿದ್ದಾರೆಯೇ ವಿನಹಃ ಒಳ್ಳೆಯದು ಮಾಡುವುದಕ್ಕೆ ಬರುತ್ತಿಲ್ಲ. ಅವರ ಉದ್ದೇಶಗಳು ಏನೆಂದರೆ ಅದರಲ್ಲಿ ಲಾಭ ಬಂದರೆ ಮಾತ್ರ ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಬಂದಿದ್ದಾರೆ. ನಮ್ಮ ಬಂಡವಾಳ ಹೂಡಬೇಕು, ನಮ್ಮ

ಮೇಲೆ ಸಾಲದ ಹೊರೆ ಹೊರಿಸಬೇಕು. ನಮ್ಮ ಗ್ರಾಹಕರಿಗೆ ಹೆಚ್ಚಿನ ಹಣ ಹಾಕಬೇಕು. ಅವರ ಟ್ಯಾರೀಫ್ ಜಾಸ್ತಿ ಮಾಡಬೇಕು. ಯಾರನ್ನು ಕೇಳಿ ಇವರು ಟ್ಯಾರೀಫ್ ಫಿಕ್ಸ್ ಮಾಡುತ್ತಾರೆ? ಬೆಂಗಳೂರು ನಗರ ನೀರು ಸರಬರಾಜು ಮಂಡಲಿಯವರು ಮಾಡುವ ಟ್ಯಾರಿಫ್ ಒಂದು ಕಡೆ ಮತ್ತು ಇವರು ಕೊಡುವಂತಹ ವಿಭಾಗಗಳು ಇವೆ, ಅವರು ಟ್ಯಾರೀಫ್ ಫಿಕ್ಸ್ ಮಾಡುವಂತಾದ್ದು ಬೇರೆ. ಇದು ಯಾವ ರೀತಿಯಲ್ಲಿ ಆಗುತ್ತದೆ? ಸಾಧ್ಯವೇ ಇಲ್ಲ. ವರು ಯಾವ ರೀತಿ ನೀರು ಕೊಡುತ್ತಾರೆ? ನಾವು ತಂದಂತಹ ಬಲ್ಕ್ ವಾಟರ್‌ನ್ನು ಅವರು ವಿತರಣೆ ಮಾಡುವಂತಾಗುತ್ತದೆ ಇದು ಬಹಳ ಪ್ರಮುಖವಾಗಿ ನಮ್ಮ ಮುಂದೆ ಇರುವ ಪ್ರಶ್ನೆ ಆ ದೃಷ್ಟಿಯಿಂದ ಇವತ್ತು ಮಾನ್ಯ ಚಂದ್ರೇಗೌಡರು ಹಿರಿಯ ಸಚಿವರು ಕೂಡಲೇ ಈ ಆದೇಶವನ್ನು ತಡೆಹಿಡಿಯುವಂತಹ ಆರ್ಡರ್ ಆಗಬೇಕು. ತಾವು ತಡೆ ಹಿಡಿಯಬೇಕು. ಈ ಒಂದು ನೋಟಿಫಿಕೇಶನ್ ತಡೆ ಹಿಡಿಯುವಂತಹ ಕಾರ್ಯ ಆಗಬೇಕು. ಮುಖ್ಯವಾಗಿ ಮಾನ್ಯ ಸದಸ್ಯರಾದ ಸೋಮಣ್ಣನವರು ಏನು ಹೇಳಿದ್ದಾರೆ ಒಂದು ಸದನದ ಸಮಿತಿ ರಚನೆಯಾಗಬೇಕು. ಅವರು ಇದನ್ನು ಥ್ರೆಡಬೇರ್ ಆಗಿ ಯೋಚನೆ ಮಾಡಿ ಈ ಸಾಧಕ ಬಾಧಕಗಳನ್ನು ಯೋಚನೆ ಮಾಡಬೇಕು. ನನಗನ್ನಿಸುತ್ತದೆ ಅಧಿಕಾರಿಗಳಿಗೆ ಇದು ಆಗುವುದಿಲ್ಲವೆಂದು ಹೇಳುವುದಕ್ಕೆ ಧೈರ್ಯ ಇದೆ. ಆದರೆ ಮುಖ್ಯಮಂತ್ರಿಗಳು ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಅಥವಾ ಇದರ ಹಿಂದೆ ಯಾರ ಕೈವಾಡ ಇದೆಯೋ ಅಥವಾ ಅವರಿಗೆ ಧೈರ್ಯ ಇಲ್ಲವೋ ನಮ್ಮ ಅಧಿಕಾರಿಗಳು ಏನಾಗಿದ್ದಾರೆ? ಇವರೇನು ಅಂತ ನನ್ನ ಮನಸ್ಸಿನಲ್ಲಿದೆ ಸ್ವಾಮಿ. ಅಧಿಕಾರಿಗಳಿಗೆ ಏನಾಗಿದೆ? ಏಕೆ ಧೈರ್ಯ ಇಲ್ಲ? ಇದು ಸರಿ ಇಲ್ಲ ಅಂತ ಹೇಳುವುದಕ್ಕೆ ಏನಾಗಿದೆ ಅಧಿಕಾರಿಗಳಿಗೆ, ಸುಮ್ಮನೇ ಅದಕ್ಕೆ ಅಧಿಕಾರಿಗಳು ಬೋರ್ಡ್ ಛೇರ್ಮನ್, ಎಲ್ಲಾ ವ್ಯವಸ್ಥೆ ಇದೆ. ಆದರೆ ಅವರು ಕಣ್ಣು ಮುಚ್ಚಿ ಕುಳಿತಿದ್ದಾರೆ ನಮ್ಮಗೇಕೆ ಅಂತ ಎಲ್ಲೋ ಸರ್ಕಾರ ಏನೋ ತೀರ್ಮಾನ ತೆಗೆದುಕೊಳ್ಳಲಿ ಅಂತ. ಇಂತಹ ತೀರ್ಮಾನಗಳು ಆಗಬಾರದು? ಇದು ಮಾರಕ. ಇವತ್ತು ಮಾನ್ಯ ಕೃಷ್ಣಪ್ಪನವರು ಸಿ.ಎಂ.ಸಿಗಳಿಗೆ ನೀರು ಕೊಡಬೇಕು ಎಂದು ಕೇಳುತ್ತಿದ್ದಾರೆ. ಕಾವೇರಿ ನದಿ ನೀರಿನ ಅವೈಲಬಲಿಟಿ ನೋಡಬೇಕಾಗುತ್ತದೆ. ನೀರಿನ ಅವೈಲಬಲಿಟಿ ನಮಗೆ ಎಷ್ಟು ಸಿಗುತ್ತದೆ ಪ್ರೊಜೆಕ್ಟ್‌ಟೆಡ್ ಪಾಪುಲೇಶನ್ ಮೇಲೆ ನೋಡಬೇಕಾಗುತ್ತದೆ. ನೀವು ಎಷ್ಟು ಸಾಲ ಮಾಡಬೇಕೆಂದು ಇದ್ದೀರಿ ಇವತ್ತು ನಾವು ತುಂಬಾ ಸಾಲದ ಹೊರೆ ಹೊತ್ತುಕೊಳ್ಳಬೇಕಾಗುತ್ತದೆ. ನೀರಿನ ಅವೈಲಬಲಿಟಿ ನೋಡಿಕೊಂಡು ಮಾಡಬೇಕಾಗುತ್ತದೆ. ನಾವು ಹಿಂದೆ ಒಂದು ಯೋಚನೆ ಮಾಡಿದ್ದೆವು. ತಿಪ್ಪಗೊಂಡನಹಳ್ಳಿಗೆ ಹೇಮಾವತಿ ನೀರು ತರಬೇಕೆಂದು ಇದು ಬಹಳ ಮುಖ್ಯವಾಗಿ ಆಗಬೇಕು.

ಅಧ್ಯಕ್ಷರು: ಮಾನ್ಯ ಸದಸ್ಯರು ಮಾತನಾಡುವಾಗ ಅಧಿಕಾರಿಗಳು ಅಧಿಕಾರಿಗಳು........ ಆಗಿದ್ದಾರಾ ಅಂತ ಪದ ಉಪಯೋಗಿಸಿದ್ದಾರೆ. ಆ ಪದವನ್ನು ಕಡತದಿಂದ ತೆಗೆದುಹಾಕಿ ಅವೆಲ್ಲಾ ಬೇಕಾಗಿಲ್ಲ. ತಾವು ಮಂತ್ರಿಗಳಾಗಿದ್ದವರು. ಒಳ್ಳೆಯ ಪಾರ್ಲಿಮೆಂಟರಿ ಶಬ್ಧಗಳನ್ನು ಉಪಯೋಗಿಸಿ. ಈ ಸಭೆ ಇರುವುದು ಒಳ್ಳೆಯ ಪಾರ್ಲಿಮೆಂಟರಿ ಪದ ಉಪಯೋಗಿಸುವುದಕ್ಕೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಇರಲಿಲ್ಲ. ಈ ವಿಷಯ ಚರ್ಚೆಗೆ ಬಂದು ಎರಡು ಗಂಟೆ ಆಯಿತು.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಎಲೆಕ್ಷನ್‌ನಲ್ಲಿಯೇ ಗೆದಿದ್ದಾರೆ. ಅವೆಲ್ಲಾ ನಮಗೆ ಬೇಕಾಗಿಲ್ಲ. See, we are talking about Bangalore water supply and

ನಮಗೆ ಬೇಕಾಗಿಲ್ಲ. See, we are talking about Bangalore water supply and sewerage Board. That is not the question here. Let us not talk about elections or politics. You please conclude.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮೇಲ್ಮನೆಯಲ್ಲಿ ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ನೀಡಿದ್ದಾರೆ. ಅದರಲ್ಲಿಯ ವಿಚಾರಗಳನ್ನು ಹೊರತು ಪಡಿಸಿ, ಇನ್ನೇನಾದರೂ ವಿಶೇಷವಾಗಿ ಮಾನ್ಯ ಚಂದ್ರೇಗೌಡರು ಇಲ್ಲಿ ಹೇಳುತ್ತಾರೋ ನನಗೆ ಗೊತ್ತಿಲ್ಲ. ಮುಂದೆ ಏನು ಮಾಡಬೇಕು ಏನು ಮಾಡುತ್ತೇವೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದೆ. ಮಾನ್ಯ ಚಂದ್ರೇಗೌಡರು ಅದೇ ಸಾಲಿನಲ್ಲಿ ಹೋಗಬಹುದು ಎಂದು ನಾನು ಅಂದುಕೊಂಡಿದ್ದೇನೆ ಅಥವಾ ಅವರು ಧೈರ್ಯ ತೆಗೆದುಕೊಂಡು ಇನ್ನೂ ಮುಂದೆ ಹೋಗಿ, ಫ್ರೆಂಚ್ ಸಂಸ್ಥೆಗೆ ನೀರು ಸರಬರಾಜು ವ್ಯವಸ್ಥೆ ಒಪ್ಪಿಸುವಂತಹ ಈ ಕರಾಳ ನೋಟಿಫಿಕೇಷನ್ ಅನ್ನು ತಡೆ ಹಿಡಿದು, ಮುಂದೆ ಸದನದ ಸಮಿತಿಯನ್ನು ನೇಮಕ ಮಾಡಿ ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುವಂತಹ ಒಂದು ಕಾರ್ಯವನ್ನು ಮಾಡುವಂತಾದ್ದನ್ನು ಇವತ್ತು ಕೈಗೊಳ್ಳಬೇಕು. ಅಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೇ, ಮಾನ್ಯ ಸುಬ್ಬಾರೆಡ್ಡಿಯವರು ಐದು ನಿಮಿಷ ಅನಂತರ ಮಾನ್ಯ ಸಿಂಧ್ಯಾರವರು ಈ ಬಗ್ಗೆ ಮಾತನಾಡಲಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ನನಗೆ ಇದರ ಬಗ್ಗೆ ಎರಡು ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೇ, ನಿಮಗೂ ಇದಕ್ಕೂ ಸಂಬಂಧ ಇಲ್ಲ. Please excuse me. ನಿಮಗೆ ಮಾತನಾಡಲು ವಕಾಶ ಕೊಡುವುದಿಲ್ಲ. ನೀವು ಇರುವುದು ಕೋಲಾರದಲ್ಲಿ ನೀವು ಕೋಲಾರದ ಪ್ರತಿನಿಧಿ, ಮಾನ್ಯ ಸುಬ್ಬಾರೆಡ್ಡಿಯವರು ಐದು ನಿಮಿಷ, ನಂತರ ಮಾನ್ಯ ಸಿಂಧ್ಯಾರವರು ಐದು ನಿಮಿಷ ಮಾತನಾಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾವು ಅಪ್ಪಣೆ ಕೊಟ್ಟರೆ ಮಾನ್ಯ ಶ್ರೀನಿವಾಸಗೌಡರೂ ಸಹಿತ ಮಾತನಾಡಬಹುದು.

ಅಧ್ಯಕ್ಷರು : ನಾನು ಮಾನ್ಯ ಶ್ರೀನಿವಾಸಗೌಡರಿಗೆ ಮಾತನಾಡಲು ಅಪ್ಪಣೆ ಕೊಟ್ಟಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ಕೋಲಾರದವರೇನು ಬೆಂಗಳೂರಿನಲ್ಲಿ ನೀರು ಕುಡಿಯುವುದಿಲ್ಲವೇ? ಇದೇನು ನ್ಯಾಯ? ಬೆಂಗಳೂರಿನಲ್ಲಿ ನಾವೆಲ್ಲಾ ಬಂದು ನೀರು ಕುಡಿಯುತ್ತೇವೆ. ತಾವು ಮಾತನಾಡಬಾರದು ಎಂದರೆ ಹೇಗೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಕಾವೇರಿ ನೀರು ಏನಾದರೂ ಕೋಲಾರಕ್ಕೆ ಹೋಗುವ ಸಾಧ್ಯತೆ ಇದೆಯೇ? ಇದ್ದರೆ ಏನಾದರೂ....

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನಾನು ಎರಡೇ ನಿಮಿಷಗಳಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ತಾವು ಅಪ್ಪಣೆ ಕೊಟ್ಟಿದ್ದರೆ ಇಷ್ಟು

ನಾಯಕರು ನನ್ನ ಕೊಠಡಿಗೆ ಬಂದು ಮೂರು ಬಿಲ್‌ಗಳನ್ನು ಇವತ್ತು ಪಾಸ್ ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ. At any cost ಇವತ್ತು ಮೂರು ಬಿಲ್‌ಗಳು ಪಾಸ್ ಆಗಲೇ ಬೇಕು. ಮಾನ್ಯ ಮಂತ್ರಿಗಳ ಉತ್ತರವೂ ಆಗಬೇಕು. ನಂತರ ಮೂರು ಬಿಲ್‌ಗಳು ಪಾಸ್ ಆಗಲೇಬೇಕು. ಗಂಟೆ 6.30 ಆದಾಗ ಆಗ ತಕ್ಷಣ ಯಾರಾದರೂ ಸಮಯವಾಯಿತು ಎಂದರೆ ನಾನು ಅದನ್ನು ಇವತ್ತು ಕೇಳುವುದಿಲ್ಲ. ಇವತ್ತು ಮೂರು ಬಿಲ್‌ಗಳು At any cost ಪಾಸ್ ಆಗಲೇಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನಮ್ಮ ನಾಯಕರು ಮಾತನಾಡಿದ ಮೇಲಾದರೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ದಯವಿಟ್ಟು ಅದೆಲ್ಲಾ ಬೇಕಾಗಿಲ್ಲ. ಮಾನ್ಯ ಸುಬ್ಬಾರೆಡ್ಡಿಯವರೇ, ತಾವು ಮಾತನಾಡಿ. ಮಾನ್ಯ ಶ್ರೀನಿವಾಸಗೌಡರೇ, ತಮ್ಮ ಸಬ್ಜೆಕ್ಟ್ ಬೇರೆಯೇ ಇದೆ. ಅದಕ್ಕೆ ಮಾತನಾಡಲು ನಿಮಗೆ ಅವಕಾಶ ಮಾಡಿಕೊಡುತ್ತೇನೆ ಬಿಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಬಿಲ್ ಅನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು : ತೆಗೆದುಕೊಳ್ಳುತ್ತೇನೆ. ಮಾನ್ಯ ಸುಬ್ಬಾರೆಡ್ಡಿಯವರು, ಅವರ ನಂತರ ಮಾನ್ಯ ಸಿಂಧ್ಯಾರವರು ಐದು ನಿಮಿಷ ಮಾತನಾಡಿದ ನಂತರ ಚರ್ಚೆ ಮುಗಿದೇ ಹೋಗುತ್ತದೆ. ಅನಂತರ ಅದಕ್ಕೆ ರಿಪ್ಲೈ ಶುರುವಾಗುತ್ತದೆ.

ಶ್ರೀ ಎ. ಕೃಷ್ಣಪ್ಪ : ಅದು ಏನಾದರೂ ಲ್ಯಾಪ್ಸ್ ಆದರೆ ಏನು ಮಾಡುವುದು?

ಅಧ್ಯಕ್ಷರು : ನಾನು ಇರುವವರೆಗೂ ಅದು ಲ್ಯಾಪ್ ಆಗುವುದಿಲ್ಲ. Take it from me. Why do you worry? See, when I am here, ನಿಮ್ಮ ಬಿಲ್‌ಗಳು ಯಾವುದೂ ಲ್ಯಾಪ್ಸ್ ಆಗುವುದಿಲ್ಲ. ಡೈಲಿ ಮೂರು-ಮೂರು ಬಿಲ್ ಪಾಸ್ ಮಾಡಿಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ನನ್ನ ಬಳಿಗೆ ಬಂದು everyday 3-3 bills ಪಾಸ್ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬೆಳಿಗ್ಗೆಯಿಂದ ಮಂಡನೆ ಮಾಡಲಿಕ್ಕೇ ಆಗಿಲ್ಲ.

ಅಧ್ಯಕ್ಷರು : ನಿಮಗ್ಯಾಕೆ? ನಾನು ಮಾಡಿಸಿಕೊಡುತ್ತೇನೆ ಸುಮ್ಮನಿರಿ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು 7-8 ಗಂಟೆಯವರೆಗೆ ಸದನ ನಡೆಸಿದರೆ, 6 ಗಂಟೆಯ ನಂತರ ಯಾರೂ ಸದಸ್ಯರು ಇರುವುದೇ ಇಲ್ಲ.

ಅಧ್ಯಕ್ಷರು : 7 ಗಂಟೆಯ ತನಕ ಏನೂ ಬೇಡ. 6.30 ಗಂಟೆಗೆ ಕ್ಲೋಸ್ ಮಾಡೋಣ ಮಾನ್ಯ ಶ್ರೀನಿವಾಸಗೌಡರೇ, You please excuse me.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರು ಇವತ್ತು ಏಕೆ ಇಷ್ಟೊಂದು ಕೋಪವಾಗಿದ್ದೀರಿ?

ಅಧ್ಯಕ್ಷರು : ಆ ತರಹ ಏನೂ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರು ವಿರೋಧ ಪಕ್ಷದವರು ಮೇಲೆ ಕೋಪ ತೋರಿಸಬಾರದು.

ಅಧ್ಯಕ್ಷರು : ಮಾನ್ಯ ಸುಬ್ಬಾರೆಡ್ಡಿಯವರೇ, ತಾವು ಬೇಗ ಮಾತನಾಡಿ ಮುಗಿಸಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಜಲ ಮಂಡಳಿಯ ಛೇರ್ಮನ್‌ರವರು ನಮ್ಮನ್ನೆಲ್ಲಾ ಒಂದು ಸಾರಿ ಕರೆಸಿದ್ದರು. ಎಲ್ಲಾ ಶಾಸಕರನ್ನೂ ಕರೆಸಿದ್ದರು. ಈಗ ಮಂತ್ರಿಗಳಾಗಿರುವ ಮಾನ್ಯ ರಾಮಲಿಂಗಾರೆಡ್ಡಿಯವರೂ ಕೂಡ ಅಲ್ಲಿಗೆ ಬಂದಿದ್ದರು. Privitasation ಬಗ್ಗೆ ಅವರನ್ನು ಕೇಳಿದಾಗ he made it very clear, we are not going to privatise ಎಂದು ಹೇಳಿದ್ದರು ಈ ವಿಷಯವನ್ನು ಯಾಕೋ ಯಾರಿಗೂ ಗೊತ್ತಿಲ್ಲದ ಹಾಗೆ, ಕಾರ್ಪೋರೇಷನ್‌ನಲ್ಲಿ ಕನ್‌ಸಲ್ಟ್ ಮಾಡಿಲ್ಲ, ಕಾಮನ್ ಮ್ಯಾನ್ ಅನ್ನು ಕನ್‌ಸಲ್ಟ್ ಮಾಡಿಲ್ಲ, ಪಬ್ಲಿಕ್ ಒಪೀನಿಯನ್ ಪಡೆದಿಲ್ಲ. ಶಾಸಕರೊಡನೆ ಸಮಾಲೋಚನೆ ಮಾಡಿಲ್ಲ. ಇದ್ದಕ್ಕಿದ್ದ ಹಾಗೆ Privatisation ಮಾಡುವುದಕ್ಕೆ ತೀರ್ಮಾನ ಮಾಡಿದ್ದಾರೆ. Now-a-days there is a glamour for foreign goods. Foreign goods ಗೆ ನಮಗೆಲ್ಲಾ ವ್ಯಾಮೋಹ, ಆದ್ದರಿಂದ ಈ ರೀತಿ ಏನಾದರೂ ತಮಗೆ ಈ glamour for foreigners to come and take over our concerns, particularly insitution like Bangalore Water Supply and Sewerage Board. ಬಹಳ ಇಂಪಾರ್ಟ್ಟೆಂಟ್ ಇದು. ನಾನು ಒಂದು ಸಾರಿ ಅಮೇರಿಕಾಕ್ಕೆ ಹೋಗುವಾಗ, ಫ್ಲೈಟ್‌ನಲ್ಲಿ ಏನು ಹೇಳಿದರು ಎಂದರೆ, ಫ್ರೆಂಚ್ ವೈನ್ is very fine ಎಂದು ಎಲ್ಲರೂ ಹೇಳುತ್ತಿದ್ದರು. ಅನೇಕರಿಗೆ ಫಾರಿನ್ ಸಾಮಾನೇ ಎಲ್ಲವೂ ಇರಬೇಕು ಎನ್ನುವಂತಹ ಗ್ಲಾಮರ್ ಇದೆ. ನಾನು ಒಂದು ಸಲ ಪಾರ್ಟಿಯೊಂದಕ್ಕೆ ಹೋದಾಗ, ಇದೆಲ್ಲಾ ಇಂಡಿಯಾದ್ದು ಸಾಕಾಗುವುದಿಲ್ಲ, ಏನಿದ್ದರೂ ಫಾರಿನ್ ಸ್ಕಾಚ್ ಏನಾದರೂ ಇದ್ದರೆ ಹೇಳಿ ಎನ್ನುವಂತಹ ವಿಷಯ ಕೂಡ ಪ್ರಸ್ತಾಪಕ್ಕೆ ಬಂದಿತ್ತು. ಸಾಮಾನ್ಯವಾಗಿ ಮಂತ್ರಿಗಳಿಗೆ ಇದೆಲ್ಲಾ ಕಾಮನ್ ಇಂಡಿಯನ್‌ದ್ದು ಏನೂ ಅವರಿಗೆ ಅಂತಹ ಆಸೆ ಇಲ್ಲ. ಫಾರಿನ್ ಸ್ಕಾಚ್ ಗೀಚ್ ಏನಾದರೂ ಬಂದರೆ ಅವರಿಗೆ ಬಹಳ ಸಂತೋಷ ಇರಲಿ, ಅದೇನೇ ಆಗಲಿ. ಆದರೆ ಈ ಒಂದು ನಮ್ಮ constitutency ನಲ್ಲಿ ಜನ ಸಂಪರ್ಕ ಸಭೆ ಎಂದು ಜಲಮಂಡಲಿ ಛೇರ್ಮನ್‌ರವರನ್ನು ಕರೆಸಿದ್ದೆವು. ಕೃಷ್ಣರಾವ್ ಪಾರ್ಕನಲ್ಲಿ ಜನ ಸಂಪರ್ಕ ಸಭೆ ಮಾಡಿದಾಗ, ಅನೇಕ ರೀತಿಯಲ್ಲಿ ವಾಟರ್ ಪ್ರಾಬ್ಲಮ್ ಹೇಗೆ ಸಾಲ್ವ್ ಮಾಡುವುದು? ಜನರ ಕುಂದು ಕೊರತೆಗಳೇನು? ಹೇಗೆ ಇದನ್ನು ತೀರ್ಮಾನ ಮಾಡಬೇಕು ಎಂಬ ಬಗ್ಗೆ ಚರ್ಚೆಗಳಾದವು. ನಮ್ಮ ಬಸವನಗುಡಿ ಕ್ಷೇತ್ರದ ತ್ಯಾಗರಾಜ ನಗರ, ಶ್ರೀನಗರ, ಕೆಂಪೇಗೌಡ ನಗರದಲ್ಲೆಲ್ಲಾ ರಾತ್ರಿಯಲ್ಲಾ ನೀರು ಬರುವುದೇ ಇಲ್ಲ. ಡೈಲಿ ಬೆಳಿಗ್ಗೆ ಒಂದು ಗಂಟೆ ಮಾತ್ರ, ಅಂದರೆ 2 ರಿಂದ 3 ಗಂಟೆಯವರೆಗೆ ಮಾತ್ರ ನೀರು ಬರುತ್ತದೆ. ಯಾವಾಗಲೂ ಅವರು ಶಿವರಾತ್ರಿ ಜಾಗರಣೆ ಮಾಡುತ್ತಿದ್ದರು. ಇದನ್ನು ಛೇರ್ಮನ್‌ರವರ ಗಮನಕ್ಕೆ ನಾವು ತಂದೆವು. ಅನೇಕ ಸಾರ್ವಜನಿಕರು, ಹಿರಿಯರು ಕೃಷ್ಣರಾವ್ ಪಾರ್ಕ್‌ನಲ್ಲಿ ಛೇರ್ಮನ್‌ರವರಿಗೆ ನೀರೇ ನಮಗೆ ಸಪ್ಲೈ ಆಗುತ್ತಿಲ್ಲ ಎಂದು ಹೇಳಿದರು. ಅದಕ್ಕಾಗಿ ಮಿನಿ ವಾಟರ್ ಸ್ಕೀಮ್ ಎಂದೂ ಸಹ ಅಲ್ಲಲ್ಲಿ ಮಾಡಿದ್ದಾರೆ. ಪೈಪ್‌ಲೈನ್ ಕೂಡ ಚೇಂಜ್ ಆಗಬೇಕು. ಕೆಂಪೇಗೌಡ ನಗರದಲ್ಲಿ ಇರತಕ್ಕಂಥ ಪೈಪ್‌ಲೈನ್‌ಗಳು ಹಳೆಯವು. ತ್ಯಾಗರಾಜ ನಗರ ಮುಂತಾದ ಕಡೆಗಳಲೆಲ್ಲಾ ಪೈಪ್‌ಲೈನ್‌ಗಳು ಬದಲಾವಣೆ ಮಾಡಬೇಕೆಂದೂ ಕೂಡ ನಾವು ಮನವಿ ಕೊಟ್ಟಿದ್ದೇವೆ. ಛೇರ್ಮನ್‌ರು ಅದನ್ನು ಒಪ್ಪಿದ್ದಾರೆ. ಮಾನ್ಯ ಸೋಮಣ್ಣನವರು ಮಾತನಾಡುವಾಗ ಎಲ್ಲಾ ರೀತಿ statistics ಕೊಟ್ಟರು. ಏಕೆಂದರೆ ಅವರು ಇದೇ ವಿಷಯದಲ್ಲಿ

ಮಂತ್ರಿಗಳಾಗಿದ್ದವರು. ಮಾನ್ಯ ಸುರೇಶ್‌ಕುಮಾರ್‌ರವರೂ ಅಷ್ಟೇ. ಅವರು ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಆದ್ದರಿಂದ ನಾನು ಬಹಳ ಹೊತ್ತು ಮಾತನಾಡುವುದು ಬೇಡ ಎಂದು ನಿರ್ಧರಿಸಿದ್ದೇನೆ. ಮಾನ್ಯ ಸುರೇಶ್‌ಕುಮಾರ್‌ರವರು, ಮಾನ್ಯ ಸೋಮಣ್ಣನವರು ಮತ್ತು ಮಾನ್ಯ ಕಟ್ಟ ಸುಬ್ರಹ್ಮಣ್ಯನಾಯ್ಡುರವರು ಎಲ್ಲಾ ವಿಷಯಗಳನ್ನು ಇಲ್ಲಿ ಹೇಳಿ ಬಿಟ್ಟಿದ್ದಾರೆ. ನಾನು ಈಗ ಇಷ್ಟು ಮಾತ್ರ ಹೇಳಬಯಸುತ್ತೇನೆ. Whether they have obtained the public opinion? Whether it would help the citizens? that is more impartant than giving it to a private company The Chairman is really very effective man. ಅವರು ಒಳ್ಳೆಯ administrator and we do not know, how he has succumb to this pressure? why he has agreed to this proposal. Common man, minimum charge 100 ರೂಪಾಯಿಗಳ ಬದಲಿಗೆ 400 ರೂಪಾಯಿಗಳು ಕೊಡಬೇಕೆಂದಾಗ What is his positision? How many can pay? ಬಹುಶಃ ಮಾನ್ಯ ಸಚಿವರನೇಕರು, 2000-4000 ರೂಪಾಯಿಗಳಿಗೆ ಸ್ಲ್ಯಾಬ್ ಬರುತ್ತದೆ ಅಂತಾದರಲ್ಲಿ ಈ ಫ್ರೆಂಚ್ ಕಂಪೆನಿಗೆ ಕೊಟ್ಟರೆ, ಏನಂತೆ? ಎಂದು ಆ ಒಂದು ಭಾವನೆಯಲ್ಲಿ ಇದ್ದಾರೆಂದು ಕಾಣುತ್ತದೆ. ಅನೇಕರಿಗೆ ಇದರ ವ್ಯತ್ಯಾಸ ಏನು ಎಂದೇ ಗೊತ್ತಿಲ್ಲ. ನಾಳೆಯ ದಿವಸ ಫ್ರೆಂಚ್ ಕಂಪೆನಿ ಬಂದರೆ ಇದರಿಂದ ಏನಾಗುತ್ತದೆ ಎಂಬುದು ಗೊತ್ತಿಲ್ಲ. ಬೆಂಗಳೂರು ನಗರದ ನೀರು ಸರಬರಾಜನ್ನು privatisation ಮಾಡಿ ಫ್ರೆಂಚ್ ಕಂಪೆನಿಗೆ ಕೊಟ್ಟರೆ ಕಾಮನ್ ಮ್ಯಾನ್ ಗತಿ ಏನು? ಸ್ಲಮ್‌ಗಳಲ್ಲಿ ನೀರಿನ ಸಪ್ಲೈಗಾಗಿ ಅವರು ವಾಟರ್ ಸಪ್ಲೈ ಬೋರ್ಡ್ ಅನ್ನೇ ನೋಡುತ್ತಿದ್ದಾರೆ. ಯಾವ ರೀತಿಯಾಗಿ ಇಂತಹ ಪರಿಸ್ಥಿತಿಯಲ್ಲಿ ನಾವು ಅವರನ್ನು ಫೇಸ್ ಮಾಡವುದು? Public opinion, have they obtained? MLAS opinion, have they obtained? No.Corporation opinion, no. Corporates were not called. No one was consulted. Then how they have taken a decision? I am very sorry, Sir. ಇದು ಈ ರೀತಿ ಆಗಬಾರದು. ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಹೇಳಿದತೆ ಮುಂದುಗಡೆ ಇರುವವರೆಲ್ಲಾ ಹಿರಿಯ ಸಚಿವರುಗಳೇ ಆಗಿದ್ದಾರೆ. ಆದರೆ ಅವರಿಗೆಲ್ಲಾ ಬಹುಶಃ ಫಾರಿನ್ ಗ್ಲಾಮರ್ ಇದೆ. ಅದಕ್ಕೆ ಮಾನ್ಯ ಚಂದ್ರೇಗೌಡರು, ಈಗ ಅದನ್ನು ....

ಶ್ರೀ ರಾಮಲಿಂಗಾರೆಡ್ಡಿ : ಸ್ವಾಮಿ, ನಮಗೇನೂ ಫಾರಿನ್ ಗ್ಲಾಮರ್ ಇಲ್ಲ, ಅದು ನಿಮಗೇ ಜಾಸ್ತಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಆದುದರಿಂದ ದಯವಿಟ್ಟು ಏನಾದರೂ ಮಾಡಿ ಇದನ್ನು ಕೈ ಬಿಡಬೇಕು. ಇಲ್ಲವೇ ಸದನ ಸಮಿತಿಗೆ ಇದನ್ನು ವಹಿಸಿ, ಇದರ ಆಗು ಹೋಗುಗಳನ್ನು ಚರ್ಚಿಸಲು ಅವಕಾಶ ನೀಡಬೇಕು. ಇದರಿಂದ ಲಾಭವಾಗುತ್ತದೋ ಅಥವಾ ನಷ್ಟವಾಗುತ್ತದೋ ಎಂಬುದನ್ನು ಸದನ ಸಮಿತಿ ನೋಡಬಹುದು. ಇದು ಬಹಳ ಮುಖ್ಯವಾದುದು. Let it be referred to a committee. Let the committee go into the matter. That is very very important. ಆದ್ದರಿಂದ ಹೌಸ ಪ್ಯಾನೆಲ್‌ಗೆ ದಯವಿಟ್ಟು ಇದನ್ನು ವಹಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5.40 ಪಿ.ಎಂ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಐದಾರು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಮೊದಲನೆಯದಾಗಿ, ನಮ್ಮ ಪಕ್ಷದ ವತಿಯಿಂದ ಬಹಳ ಖಚಿತವಾಗಿ ಈ ಮಾತನ್ನು ಹೇಳುತ್ತಿದ್ದೇನೆ In the background of the globalization and privatisation which is going in the entire country, ದೇಶದಲ್ಲಿ ಆಗುತ್ತಿರುವ ಆರ್ಥಿಕ ಬದಲಾವಣೆ ಮತ್ತು ಸುಧಾರಣೆಯಲ್ಲಿ ಖಾಸಗೀಕರಣಕ್ಕೆ ನಮ್ಮ ಪಕ್ಷದ ವಿರೋಧವಿಲ್ಲ. ಇದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಖಾಸಗೀಕರಣವನ್ನು ಯಾವ ರೀತಿ ಮಾಡಬೇಕು? ಹಾಗೂ ಯಾವುದನ್ನು ಖಾಸಗೀಕರಣ ಮಾಡಬೇಕು? ಮಾಡಬಾರದು ಎಂಬ ಬಗ್ಗೆ ರಾಜಕೀಯ ನಾಯಕತ್ವವಿರುವವರು ತಮ್ಮ ಮುತ್ಸದ್ದಿತನ ತೋರಿಸಬೇಕಾಗುತ್ತದೆ. ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿರುವ ಶ್ರೀಮಾನ್ ಚಂದ್ರೇಗೌಡರಿಗೆ ಗೊತ್ತಿರುವಂತೆ 1994ನೇ ಇಸವಿಯಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಂಪೂರ್ಣ ರಾಷ್ಟ್ರೀಕರಣವಾಗಿರುವ ಬೆಂಗಳೂರು ನಗರದ ವಿಭಾಗದಲ್ಲಿ ಖಾಸಗಿ ಬಸ್ಸುಗಳಿಗಾಗಲೀ, ಟೆಂಪೋಗಳಿಗಾಗಲೀ, ಮೆಟಡಾರ್‌ಗಳಿಗಾಗಲೀ ಅವಕಾಶವಿರಲಿಲ್ಲ. ಸನ್ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಒಂದು ನಿರ್ಧಾರ ಕೈಗೊಂಡೆವು ಏನೆಂದರೆ, ಕೆಎಸ್‌ಆರ್‌ಟಿಸಿಯುವರಿಂದ ಇದನ್ನು ಕಾಂಪಿಟೆಂಟ್ ಆಗಿ ನಡೆಸುವುದಕ್ಕಾಗುವುದಿಲ್ಲವೆಂದು ಮೊದಲನೇ ಇನ್‌ಸ್ಟಾಲ್‌ಮೆಂಟ್‌ನಲ್ಲಿ 400 ಪ್ರೈವೇಟ್ ಬಸ್ಸುಗಳನ್ನು ಆಗ ಬೆಂಗಳೂರು ನಗರ ಸಾರಿಗೆ (ಬಿಎಂಟಿಎಸ್) ಗೆ ಖಾಸಗಿಯವರಿಂದ ತೆಗೆದುಕೊಳ್ಳುವುದೆಂದು ತೀರ್ಮಾನವಾಯಿತು. ಮಾನ್ಯ ಚಂದ್ರೇಗೌಡರು ಇದನ್ನು ದಯವಿಟ್ಟು ಗಮನಿಸಬೇಕು. ಖಾಸಗಿಯವರಿಂದ ನಾವು ತೆಗೆದುಕೊಳ್ಳುವುದು, ಟಿಕೇಟ್ ನಮ್ಮದು, ಕಂಡಕ್ಟರ್ ನಮ್ಮವನು, ಮೇಂಟನೆನ್ಸ್ ಪ್ರೈವೇಟ್‌ನವರದು, ಡ್ರೈವರ್ ಪ್ರೈವೇಟ್‌ನವರು ಇಂತಿಷ್ಟು ಕಿಲೋಮೀಟರ್ ಓಡಲೇಬೇಕೆಂದು ನಿಬಂಧನೆ ಹಾಕಿದೆವು. I am really happy that they have succeeded today. ಬಸ್ಸುಗಳಿದ್ದುದು ಈ ವರ್ಷ ರಸ್ತೆ ಸಾರಿಗೆ ಸಂಸ್ಥೆಯವರು 3000 ಬಸ್ಸುಗಳನ್ನು ಮಾಡಲು 400 ಬಸ್ಸುಗಳಿದ್ದದ್ದು ಈ ವರ್ಷ ರಸ್ತೆ ಸಾರಿಗೆ ಸಂಸ್ಥೆಯವರು 3000 ಬಸ್ಸುಗಳನ್ನು ಮಾಡಲು ಹೊರಟಿದ್ದಾರೆ. ಅದಕ್ಕೋಸ್ಕರ ಈ ವರ್ಷ 36 ರಿಂದ 40 ಕೋಟಿ ರೂಪಾಯಿಗಳಷ್ಟು ಲಾಭವಾಗುತ್ತಿದೆ. This is one sector wherein we can really improve. ಈ ಪಾಯಿಂಟ್ ಆಫ್ ವ್ಯೂನಿಂದ ಅದಕ್ಕೆ ನಾವು ಏನು ಮಾಡಿದೆವೆಂದರೆ, ನಮಗಿದ್ದಂಥ ಕಾನೂನು ಪ್ರಕಾರ ಅವಕಾಶವಿರಲಿಲ್ಲ. ಸಚಿವ ಸಂಪುಟದಲ್ಲಿ 400 ಬಸ್ಸುಗಳಿಗೆ ಆ್ಯಕ್ಟ್ ಅನ್ನು ಅಮೆಂಡ್ ಮಾಡಬೇಕಾಗಿತ್ತು. ಅದಕ್ಕೋಸ್ಕರ ನಾವು ಏನು ಮಾಡಿದೆವೆಂದರೆ, Road Transport Corporations ಆ್ಯಕ್ಟ್ ಅನ್ನು ಕ್ಯಾಬಿನೆಟ್‌ನಲ್ಲಿ ಅಮೆಂಡ್ ಮಾಡಿ ಅಲ್ಲಿಯೇ ಪ್ರಪೋಸ್ ಮಾಡಿ ಸದನಕ್ಕೆ ತಂದು ಅಮೆಂಡ್‌ಮೆಂಟ್ ಅನ್ನು ಪಾಸ್ ಮಾಡಿಸಿಕೊಂಡೆವು. ಅದಾದ ನಂತರ ಖಾಸಗಿಯವರಿಗೆ ಟ್ರಾನ್ಸ್‌ಪರೆಂಟಾಗಿ ವಹಿಸಿಕೊಟ್ಟೆವು. ಇವೊತ್ತೂ ಸಹ ಅದರಲ್ಲಿ ಏನೇನು ಕಾಂಪೊನೆಂಟ್ ಇದೆ, ಡೀಸೆಲ್, ಲೇಬರ್ ಕಾಂಪೊನೆಂಟ್ಸ್ ಎಲ್ಲವೂ ಸಹ ಆಟೋಮ್ಯಾಟಿಕ್ ಫೇರ್ ರಿವಿಷನ್ ಸಿಸ್ಟಂ ತೆಗೆದುಕೊಂಡು ಬಂದಿದ್ದೇವೆ. ಈಗ ಬಿಎಟಿಸಿಯಲ್ಲಿ

400 ರಿಂದ 600 ಖಾಸಗಿ ಬಸ್ಸುಗಳು ಬಹಳ ಸಕ್ಸಸ್‌ಫುಲ್ ಆಗಿ ಓಡಾಡುತ್ತಿದೆ. This is indirect way of privatisation without harming the interest of the workers there. Public interest ನಿಂದ ನಾವು ಮಾಡಿರುವ ಕೆಲಸ. ನೀವು ಅದನ್ನು ಮಾಡುವುದು ಬಿಟ್ಟು ನಿಮಗೆ ದಿನಾಂಕ 19.3.2001 ರಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನಿಯಮಗಳನ್ನು ತಿದ್ದುಪಡಿ ಮಾಡುವ ಬಗ್ಗೆ ಮಂಡಳಿಯ ಸಭೆಯ ನಡವಳಿಕೆಗಳನ್ನು ಸರ್ಕಾರಕ್ಕೆ ಕಳುಹಿಸಿ ಅರ್ಬನ್ ಡೆವಲಪ್‌ಮೆಂಟ್ ಸೆಕ್ರೆಟರಿಯವರಿಗೆ ಬಿಡಬ್ಲ್ಯೂಎಸ್‌ಎಸ್ ಬಿಯವರು ಪತ್ರ ಬರೆಯುತ್ತಾರೆ. General duties of the Board, ಅದರಲ್ಲಿ ಎಕ್ಸಿಸ್ಟಿಂಗ್ ಏನು? ಪ್ರಪೋಸ್ಡ್ ಏನು? ಮತ್ತೆ ರೀಸನ್ಸ್ ಏನೆಂಬುದನ್ನು ಇಲ್ಲಿ ಕೊಟ್ಟಿದ್ದಾರೆ. ಇದು ಅವರ ಹತ್ತಿರ ಇರುತ್ತದೆ. ಮಾನ್ಯ ಚಂದ್ರೇಗೌಡರು ಉತ್ತರ ಕೊಡುವುದಕ್ಕೆ ಸಿದ್ಧವಾಗಿ ಬಂದಿರಬಹುದು. "The Board shall be charge with the general duty of providing supply and improving the existing supply of water in Bangalore Metropolitan Area and making adequate provision for the sewerage and disposal of the sewege in the Bangalroe Metropolitan Area and for the efficient discharge of such duty, the Board shall exercise such powers and perform such functions as are conferred or imposed by or under this Act." ಇದು ಎಕ್ಸಿಸ್ಟಿಂಗ್. ಪ್ರಪೋಸ್ಡ್ ಏನಿದೆಯೆಂದರೆ, ಬೋರ್ಡ್‌ನವರು ಸರ್ಕಾರಕ್ಕೆ ಕಳುಹಿಸಿರುವುದು: "Insertion of the proviso to sub section (1): Provided that notwithstanding anything contained in sub section(1) of the Board may with the approval of the State Government delegate its powers and allow private sector participation in the operation of existing water supply and sewerage system in the Bangalore Metropolitan Area. ಅಧ್ಯಕ್ಷರೆ, ಈ ಆ್ಯಕ್ಟ್‌ಗಳನ್ನೆಲ್ಲಾ ಮಾಡಿಸುವವರು ನೀವೇ. ಇವೊತ್ತು ನೀವು ಎಷ್ಟೊಂದು ಆತುರದಲ್ಲಿದ್ದೀರಿ. ವಿರೋಧ ಪಕ್ಷದ ನಾಯಕರು ಮೂರು ಬಿಲ್‌ಗಳನ್ನು ಪಾಸ್ ಮಾಡಿಕೊಡುವುದಾಗಿ ಭರವಸೆ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಮಾನ್ಯ ಬಚ್ಚೇಗೌಡರೇ, ಸ್ವಲ್ಪ ಇತ್ತ ಗಮನಿಸಿ. ದಿನಾಂಕ 19.3.2001 ರಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿಯವರು ಸರ್ಕಾರದ ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ ಪತ್ರವೊಂದನ್ನು ಬರೆಯುತ್ತಾರೆ. ನೀವು ದಿನಾಂಕ 11.7.2002 ರಲ್ಲಿ ಈ ಪ್ರಪಂಚದ ಮಹಾಸಂಸ್ಥೆಗಳಾಗಿರುವ ಫ್ರೆಂಚ್ ದೇಶದ ಹಿನ್ನೆಲೆ ಇರುವ ಎನ್‌ಡಬ್ಲ್ಯೂ ಮತ್ತು ವಿಡಬ್ಲ್ಯೂ ಎನ್ನು ಎರಡೂ ಸಂಸ್ಥೆಗಳಿಗೆ ನೀವು ಈ ಆ್ಯಕ್ಟ್ ಅಮೆಂಡ್‌ಮೆಂಟ್ ಮಾಡದೇ ಯಾವ ಅಥಾರಿಟಿ ಮೂಲಕ ಕ್ರಮ ಕೈಗೊಂಡಿದ್ದೀರಿ 19.2.2001 ರಿಂದ 11.7.2002 ತನಕ) ನಿಮಗೆ ಈ ಪತ್ರ ಬಂದಿರುವುದು 19.2.2001 ರಂದು ನೀವು ಇವರಿಗೆ 11.7.2002 ರಲ್ಲಿ ಅಥಾರಿಟಿಯನ್ನು ಡೆಲಿಗೇಟ್ ಮಾಡಿದ್ದೀರಿ, ಗೌವರ್ನಮೆಂಟ್ ಆರ್ಡರ್ ಮಾಡಿದ್ದೀರಿ. ಯಾವ ಪ್ರಾವಿಶನ್ ನಿಮಗೆ ಇತ್ತು? ಯಾವ ಅಥಾರಿಟಿ ಇತ್ತು? I would like to know. ನೀವು 17 ತಿಂಗಳು ಏಕೆ ಮಲಗಿಕೊಂಡಿದ್ದೀರಿ? ನಿಮಗೆ ಆ ರೀತಿ ಟ್ರಾನ್ಸಪರೆಂಟಾಗಿ ಪ್ರೈವೇಟ್‌ನವರಿಗೆ ಕೊಡಲೇಬೇಕೆಂದು ಇಚ್ಛೆ ಇದ್ದಿದ್ದರೆ ಯಾವುದಾದರೂ ಕೆಂಗೇರಿ ಸ್ಯಾಟಲೈಟ್ ಟೌನ್ ಅನ್ನು ಎಕ್ಸ್‌ಪೆರಿಮೆಂಟಲ್

ಬೇಸಿಸ್ ಮೇಲೆ ಕೊಡಬಹುದಾಗಿತ್ತು. ಅಲ್ಲಿ ಐದು ಲಕ್ಷ ಪಾಪ್ಯುಲೇಶನ್ ಇರುವುದರಿಂದ ಮಾಡಿ ಎಂದು ಕೊಡಬಹುದಾಗಿತ್ತು ಅಥವಾ ಕೃಷ್ಣರಾಜಪುರಕ್ಕೆ ಎಕ್ಸ್‌ಪೆರಿಮೆಂಟಾಗಿ ನೀವು ಮಾಡಬಹುದೆಂದು ಕೊಡಬಹುದಾಗಿತ್ತು ಅಥವಾ ಕನಕಪುರಕ್ಕೆ ಕೊಡಬಹುದಾಗಿತ್ತು ಅಲ್ಲಿಗೂ ಕಾವೇರಿ ನೀರನ್ನು ಕೊಡುತ್ತಿದ್ದಾರೆ. ಅದೊಂದು ದೊಡ್ಡ ಕಥೆ. ಈ ಸಂದರ್ಭದಲ್ಲಿ ಅಲ್ಲಿಯ ಪರಿಸ್ಥಿತಿಯನ್ನು ನಾನು ಉಲ್ಲೇಖಿಸಬೇಕಾಗುತ್ತದೆ. ತಾವು ತಲೆ ಅಲ್ಲಾಡಿಸಬೇಡಿ. ದಯವಿಟ್ಟು ಕೇಳಿ. ನಿಮ್ಮ ಕ್ಷೇತ್ರವಾಗಿದ್ದರೆ ಇದರ ಬಗ್ಗೆ ನೋವಾಗುತ್ತಿತ್ತು. ನನ್ನ ಕ್ಷೇತ್ರದ 2000 ಕುಟುಂಬಗಳು ಬೀದಿಪಾಲಾಗಿವೆ. ಬೆಂಗಳೂರಿನ ಮಹಾಜನರು ತಿಳಿದುಕೊಳ್ಳಬೇಕು. ತೊರೆಕಾಡನಹಳ್ಳಿಯಿಂದ ಇಲ್ಲಿಗೆ ನೀರು ಬರಬೇಕಾದರೆ ಮಳವಳ್ಳಿ, ಸಾತನೂರು, ಕನಕಪುರದ ಜನರು ಮನೆ, ಹೊಲಗಳನ್ನು ಕಳೆದುಕೊಂಡಿದ್ದಾರೆ. "ಅಲ್ಲಿ ರಸ್ತೆ ಇಲ್ಲ, ಊರಿನೊಳಗೆ ಬರುತ್ತಿದೆ" ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಅಧ್ಯಕ್ಷರಿಗೆ ನಾನು ನೂರು ಸಲ ಹೇಳಿದ್ದೇನೆ. ಅದಕ್ಕೆ "ನಾನು ಅಧ್ಯಕ್ಷನಾಗಿದ್ದೇನೆ, ರಸ್ತೆ ಮಾಡಿಸುವುದಾಗಿ ಭರವಸೆ ಕೊಟ್ಟಿದ್ದೇನೆ" ಎಂದು ಹೇಳಿದರು. "ನಿಮಗೆ ಯಾವಾಗ ಎತ್ತಂಗಡಿ ಮಾಡುತ್ತಾರೋ ಗೊತ್ತಿಲ್ಲ, ನೀವು ಆದಷ್ಟು ಬೇಗ ಮಾಡಬೇಕು" ಎಂದು ಹೇಳಿದೆ. ಇನ್ನೂ ರಸ್ತೆ ಆಗಿಲ್ಲ. ಅಲ್ಲಿನ ಜನರು ಬೀದಿ ಪಾಲಾಗಿದ್ದು, ಮನೆಗಳನ್ನು ಕಳೆದುಕೊಂಡಿದ್ದಾರೆ. ದುಡ್ಡು ಕೊಟ್ಟಿದ್ದಾರೆ. ಎಷ್ಟು ಬೇಕೋ ಅಷ್ಟು ಕೊಟ್ಟಿದ್ದಾರೆ ಕೋರ್ಟಿನಲ್ಲಿ ಅವರು ಪ್ರಶ್ನಿಸಿದ್ದಾರೆ. ಅದು ಒತ್ತಟ್ಟಿಗಿರಲಿ, ರಸ್ತೆ ವಿಚಾರವನ್ನು ನಾನು ಇನ್ನೊಂದು ದಿವಸ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ನೀವು ಎಕ್ಸ್‌ಪೆರಿಮೆಂಟ್ ಬೇಸಿಸ್‌ನಲ್ಲಿ ಯಾವುದಾದರೊಂದು ಊರಿಗೆ ಕೊಡಬಹುದಾಗಿತ್ತು ಅದಕ್ಕೂ ನಿಮಗೆ ಪ್ರಾವಿಷನ್ ಇಲ್ಲ. ಈಗಿರುವ ಆ್ಯಕ್ಟ್ ರೀತ್ಯ ನಿಮಗೆ ಪ್ರಾವಿಷನ್ ಇಲ್ಲ. ಯಾವ ಅಥಾರಿಟಿ ಮೇಲೆ ಇದನ್ನು ನೀವು ಪ್ರೈವೇಟ್‌ನವರಿಗೆ ಕೊಟ್ಟಿದ್ದೀರಿ? ಇದು ನಾನು ಕೇಳುತ್ತಿರುವ ವಿಚಾರ. ನೀವು ಮಾಡಿರುವ ಗವರ್ನಮೆಂಟ್ ಆರ್ಡರ್ ಆದರೂ ಏನು? ನಾನು ಕೇಳುವುದೇನೆಂದರೆ, ಮಾನ್ಯ ಅಧ್ಯಕ್ಷರೆ, ಬಹಳ ಬುದ್ಧಿವಂತಿಕೆಯಿಂದ ಇರರು ಗವರ್ನಮೆಂಟ್ ಆರ್ಡರ್ ಮಾಡಿದ್ದಾರೆ. ಇಡೀ ಬೆಂಗಳೂರು ನಗರವನ್ನು ಎಂಟು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಅದರಲ್ಲಿ ಎರಡು ವಿಭಾಗಗಳನ್ನು ಮಾತ್ರ ಎರಡು ಕಂಪನಿಗಳಿಗೆ ಎಕ್ಸ್‌ಪೆರಿಮೆಂಟಲ್ ಬೇಸಿಸ್ ಮೇಲೆ ಆರು ತಿಂಗಳ ಅವಧಿಗೆ ಎಂದು ಕೊಟ್ಟು ಐದು ವರ್ಷಗಳಿಗೆ ಎಕ್ಸ್‌ಟೆನ್ಸ್‌ನ್ ಮಾಡಿರುವ ಬಗ್ಗೆ ಎಳೆಎಳೆಯಾಗಿ ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್, ಸೋಮಣ್ಣ, ಬಚ್ಚೇಗೌಡರು ಹಾಗೂ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಹೇಳಿದ್ದಾರೆ. ಇದನ್ನು ಮಾಡುವುದಕ್ಕೆ ಏನು ಅಥಾರಿಟಿ ಇದೆ? ಯಾವ ಅಥಾರಿಟಿ ಮೇಲೆ ನೀವು ಕೊಟ್ಟಿದ್ದೀರಿ? ಎಲ್ಲವನ್ನೂ ಇದೇ ರೀತಿ ಕೊಡತಕ್ಕಂಥಾದ್ದು. This is what I am questioning ಮತ್ತೆ ಅಸೆಂಬ್ಲಿಗೆ ರೆಲವೆನ್ಸಿ ಏನಿದೆ? ಅಸೆಂಬ್ಲಿಯಲ್ಲಿ ನಾವು ಆ್ಯಕ್ಟ್ ಮಾಡಿದ ನಂತರ ಆ್ಯಕ್ಟ್ ಪ್ರಕಾರ ನಿಮ್ಮ ಕ್ಯಾಬಿನೆಟ್‌ನ ನಡವಳಿಕೆಗೆ ಅವಕಾಶವಿರುತ್ತದೆ. ಯಾವ ಆಧಾರದ ಮೇಲೆ ನೀವು ಇವೊತ್ತು ಈ ಆ್ಯಕ್ಟ್ ಅನ್ನು ವಯಲೇಟ್ ಮಾಡಿದ್ದೀರಿ? ನಾನು ಹೇಳುತ್ತೇನೆ: ಎನ್‌ಡಬ್ಲ್ಯೂ ಮತ್ತು ವಿಡಬ್ಲ್ಯೂ ಈ ಎರಡು ಕಂಪನಿಗಳಿಗೆ ನೀವು 400 ಕೋಟಿ ರೂಪಾಯಿಗಳಿಗೆ ಐದು ವರ್ಷಗಳಿಗೆ ಗುತ್ತಿಗೆ ಕೊಡುವುದಕ್ಕೆ ಪ್ರಯತ್ನಿಸಿದ್ದೀರಲ್ಲಾ, ಇದರಲ್ಲಿ ಕಾಣದ ಕೈಗಳಿವೆ. ನಾನು ಏನು ಬೇಕಾದರೂ ಆಲಿಗೇಷನ್ ಮಾಡಬಹುದು. ಜವಾಬ್ದಾರಿಯಿಂದ ಇದೆಯೆಂದು ನಾನು ಆಲಿಗೇಶನ್ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನನಗೆ

ಕೊಟ್ಟಿರುವವರು, ತೆಗೆದುಕೊಂಡಿರುವವರು ಇಬ್ಬರ ಬಗ್ಗೆ ಜನರು ಬೇರೆ ಬೇರೆ ರೀತಿಯಲ್ಲಿ ಮಾತನಾಡುತ್ತಾರೆಯೇ ಹೊರತು ನನಗೆ ಅದು ಗೊತ್ತಿಲ್ಲ. ಇದರ ಬಗ್ಗೆ ಸಂಶಯ ಬರುತ್ತದೆಯೇ? ಇಲ್ಲವೇ? ನೀವೇ ಹೇಳಿ. ಯಾರ ಕಡೆ ಸಂಶಯ ಬರುತ್ತದೆ? ಮುಖ್ಯಮಂತ್ರಿಗಳ ಕಡೆ ಸಂಶಯ ಬರುತ್ತದೆ. ಏಕೆಂದರೆ, he is holding this portfolio. ಬೇರೆ ಮಂತ್ರಿಗಳ ಬಗ್ಗೆ ಸಂಶಯ ಬರುವುದಿಲ್ಲ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ತ್ರಿವೇಂಡ್ರಮ್‌ಗೆ ಹೋಗಿರುವುದರಿಂದ ಮಾನ್ಯ ಚಂದ್ರೇಗೌಡರು ಉತ್ತರ ಕೊಡುತ್ತಿದ್ದಾರೆ. But, who is responsible? How did the Chief Minister do it? What authority he has got? ಅದಕ್ಕೆ ನಾನು 5ನೇ ತಾರೀಖಿನಂದು ಅವರು ಇದ್ದಾಗ ಈ ವಿಷಯ ತೆಗೆದುಕೊಳ್ಳಬೇಕೆಂದು ತಮಗೆ ಮನವಿ ಮಾಡಿಕೊಂಡಿದ್ದೆ. ಮುಖ್ಯಮಂತ್ರಿಗಳಿಗೆ ಏನು ಅಧಿಕಾರ ಇದೆ? He should explain to the State, when he says, he claims that he is the Harischandra; when he claims he is running a transparent government, when he is claiming that there is not corruption in his government, when he is claiming that he declared a **Dharma Yuddha** against corruption, ಇದು ಕರಪ್ಷನ್ ಅಲ್ಲದೆ ಇನ್ನೇನು? ಸರ್ಕಾರ ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ನಾನು ಮುಖ್ಯಮಂತ್ರಿಗಳನ್ನು ಅಕ್ಯೂಸ್ ಮಾಡುತ್ತೇನೆ. ಅವರೇ ತಾನೇ ಈ ಪೋರ್ಟ್‌ಫೋಲಿಯೋಗಳನ್ನು ಡೀಲ್ ಮಾಡುತ್ತಿರುವುದು. ಈಗ ಮಾನ್ಯ ಸಚಿವರಾಗಿರುವ ಕೃಷ್ಣಪ್ಪನವರನ್ನು ಅವರು ಮುನಿಸಿಪಾಲಿಟಿ ಮೀಟಿಂಗ್‌ಗಳನ್ನೆಲ್ಲಾ ಅಟೆಂಡ್ ಮಾಡಿದರೆಂದು ಅವರ ರಾಜೀನಾಮೆ ಕೇಳಿದೆವು. "ರಾಜೀನಾಮೆ ಕೊಟ್ಟು ಹೋಗಬೇಕು, ಸುಮ್ಮನೆ ಗವರ್ನಮೆಂಟ್‌ಗೆ ಎಂಬರಾಸ್ ಆಗುತ್ತದೆ, ನಿಮಗೆ ಕೆಟ್ಟ ಹೆಸರು ಬರುತ್ತದೆ" ಎಂದು ಹೇಳಿದೆ. ಆದರೆ ನಾನು ಹೇಳುತ್ತೇನೆ: The Chief Minister is responsible for the treasury releases. How without the knowledge of the Chief Minister Rs. 2.50 crores in two years in one treasury can be released? when Rs. 750 crores pending bills are there. ನಾನು ಈ ಸರ್ಕಾರದಿಂದ ಕೇಳಲಿಕ್ಕೆ ಬಯಸುತ್ತೇನೆ, ಆಕ್ಟ್‌ನಲ್ಲಿ ಪ್ರಾವಿಜನ್ ಇಲ್ಲ. ಬಿಡಬ್ಲ್ಯೂ ಎಸ್‌ಎಸ್‌ಟಿಯವರು ಬಹಳ ಬುದ್ಧಿವಂತರು. ಅವರು ಸಿಕ್ಕಿ ಹಾಕಿಕೊಳ್ಳುವುದಿಲ್ಲ. I am not questioning the integrity of the Chairman, because he is helpless man; I am aware of it. I am aware of his integrity. He is one of the best officers we have. ಅವರ ಬಗ್ಗೆ ನಾನು ದೂಷಣೆ ಮಾಡುವುದಕ್ಕೆ ತಯಾರಿಲ್ಲ ಅವರೇನು ಮಾಡಿದ್ದಾರೆ? ಆಕ್ಟ್‌ನ್ನು ಅಮೆಂಡ್ ಮಾಡಿ ಎಂದು ಹೇಳಿ ಸಜೆಸ್ಟ್ ಮಾಡಿದ್ದಾರೆ. ನೀವೇಕೆ ಅಮೆಂಡ್ ಮಾಡಲಿಲ್ಲ? ಯಾರ ಕನ್ಸಿಡರೇಷನ್ ಮೇಲೆ, ನೀವು ಎಕ್ಸ್‌ಪರ್‌ಮೆಂಟಲ್ ಬೇಸಿಸ್ ಮೇಲೆ ಕೊಟ್ಟಿದ್ದೀರಿ? ನಿಮಗೆ ಎಕ್ಸ್‌ಪರ್‌ಮೆಂಟಲ್ ಬೇಸಿಸ್ ಮೇಲೆ ಕೊಡುವುದಕ್ಕೂ ಏನಾದರೂ ಆಧಾರ ಇರಬೇಕಲ್ಲಾ. ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ಅದಕ್ಕೋಸ್ಕರ ಇದಕ್ಕೆ ಈ ಆಧಾರ ಸಾಕ್ಷಿ ಏನು ಎನ್ನುವುದನ್ನು ನಮಗೆ ತಿಳಿಸಬೇಕು. ಏನೂ ಕನ್ಸಿಡರೇಷನ್ ಇಲ್ಲದೇ ಹೋದರೆ ಈಗೇನೋ ಜನ ಮಾತನಾಡುತ್ತಾರಲ್ಲಾ, ವಿಧಾನಪರಿಷತ್ತಿನಲ್ಲಿ ಮಾತನಾಡಿದರಂತೆ, ನಾನು ಅದರ ವಿವರಕ್ಕೆ ಹೋಗಲು ತಯಾರಿಲ್ಲ. ಜನ ಮಾತನಾಡುವುದನ್ನು ನಾವು ನಿಜ ಎಂದು ನಂಬಬೇಕಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಹೇಳಿ

ನನಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ. ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಸಂಸದೀಯ ವ್ಯವಹಾರಗಳು ಹಾಗೂ ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸುಮಾರು ಎರಡೂವರೆ ಗಂಟೆಗಳಷ್ಟು ಕಾಲ ಸುಧೀರ್ಘವಾಗಿ ರಾಜಧಾನಿ ಬೆಂಗಲೂರು ನಗರದಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಖಾಸಗಿ ಸಂಸ್ಥೆಯವರಿಗೆ ವಹಿಸಿ ಕೊಟ್ಟಿದ್ದೀರಿ. ಎನ್ನುವ ಶಂಕೆಯ ಮೇಲೆ ಚರ್ಚೆ ಆಗಿದೆ. ಮೊಟ್ಟ ಮೊದಲು ನಾನು ಈ ಸದನದ ಮೂಲಕ ಗೌರವಾನ್ವಿತ ಸದಸ್ಯರ ಗಮನಕ್ಕೆ ತರಬಯಸುವುದು, ವಿಶೇಷವಾಗಿ ನಮ್ಮ ಹಿರಿಯ ವಕೀಲರ ಗಮನಕ್ಕೆ ತರಬಯಸುವುದು ಏನು ಎಂದರೆ ಬೆಂಗಳೂರು ನಗರ ಒಳಚರಂಡಿ ಮತ್ತು ನೀರಿನ ವ್ಯವಸ್ಥೆಯನ್ನು ಖಾಸಗೀಕರಣ ಮಾಡತಕ್ಕಂಥ ಸಲಹೆ ಆಗಲಿ ಸೂಚನೆ ಆಗಲಿ ರಾಜ್ಯ ಸರ್ಕಾರದ ಮುಂದೆ ಇಲ್ಲ. ಖಾಸಗೀಕರಣದ ಪ್ರಸ್ತಾಪ ಇದರಲ್ಲಿ ಇಲ್ಲವೇ ಇಲ್ಲ. ಪ್ರಶ್ನೆ ಏನು ಇದೆ? ಲಿಮಿಟೆಡ್ ಪ್ರಶ್ನೆ ಅಂದರೆ private participation ಖಾಸಗೀಕರಣಕ್ಕೂ ಖಾಸಗಿಯವರ ಸಹಭಾಗಿತ್ವಕ್ಕೂ ಬಹಳ ಅಜಗಜಾಂತರವಾದ ವ್ಯತ್ಯಾಸ ಇದೆ. ಇದನ್ನು ಮೊದಲು ಗೌರವಾನ್ವಿತ ಸದನದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಎರಡನೆಯದು ಆ ಕಾರಣವೇ ಈ ಜಲ ಮಂಡಲಿಯಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ಏನೋ ಆಗಿ ಬಿಡುತ್ತದೆ? ನೀವು ಯಾರದೋ ಕೈಗೆ ಒಪ್ಪಿಸುತ್ತಿದ್ದೀರಿ? ಈ ಪ್ರಶ್ನೆ ಉದ್ಭವವೇ ಆಗುವುದಿಲ್ಲ. It is not privatisation. All assets will continue in the hands of the Board - Banglaore water Supply and Sewerage Board and they will maintain as they are doing right now. ಇಲ್ಲಿ ನಾವು ಪ್ರಯತ್ನ ಏನು ಮಾಡಿದ್ದೇವೆ? To improve the System ಆ ಪ್ರಯತ್ನ ಮಾಡಿದ್ದೇವೆಂದು ಹೇಳಿದ್ದೇನೆ. To improve the system. ಈ ಖಾಸಗಿ ಸಹಭಾಗಿತ್ವ ಪ್ರಜೆಗಳಿಗೆ ಮಾರಕವಾಗಿ ಬಿಡುತ್ತದೆ. ಬೆಂಗಳೂರು ನಗರದ ನಾಗರೀಕರಿಗೆ ಕುಡಿಯುವ ನೀರಿನ ಬೆಲೆ ಜಾಸ್ತಿ ಆಗುತ್ತದೆ. ಹೀಗೆ ಅನೇಕ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಯಾವುದೇ ಸರ್ಕಾರಕ್ಕೆ ಬಹಳ ಮೂಲಭೂತವಾದಂತಹ ಸಮಸ್ಯೆ 73-74ನೇ ಸಂವಿಧಾನದ ತಿದ್ದುಪಡಿ ಆದ ಮೇಲೆ ಚುನಾಯಿತ ಪ್ರಾತಿನಿಧಿಕ ಸರ್ಕಾರಗಳ ಮಧ್ಯೆ ಎಷ್ಟು ರಾಜ್ಯ ಸರ್ಕಾರ ಪ್ರವೇಶಮಾಡಬಹುದು ಎನ್ನತಕ್ಕ ಲಿಮಿಟೇಶನ್ಸ್ ಕೂಡ ನಮಗೆ ಗೊತ್ತಿದೆ. 73 ಮತ್ತು 74 ನೇ ಅಮೆಂಡ್‌ಮೆಂಟ್ ಆದ ಮೇಲೆ ಲಿಮಿಟೆಡ್ ಪವರ್ಸ್ ಇದೆ. ಸರ್ಕಾರ ಈ ಚುನಾಯಿತ ಸಂಸ್ಥೆಗಳಲ್ಲಿ ಎಷ್ಟು ದೂರಕ್ಕೆ ಪ್ರವೇಶ ಮಾಡಬಹುದು ಎನ್ನತಕ್ಕ ಕಲ್ಪನೆ ಕೂಡ ಈ ಸರ್ಕಾರಕ್ಕೆ ಇದೆ. ಆದ್ದರಿಂದ ಇದು ಪ್ರಯೋಗವೋ ಅಥವಾ ಏನೋ? ಯಾವ ಭಾಷೆಯಲ್ಲಾದರೂ ಕರೆಯಿರಿ ಇಂತಹ ಒಂದು ಪ್ರಯತ್ನ ನಡೆದಿದೆ ಎಂದು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಆ ಕಂಪನಿಗಳು ಯಾವುವು? ಆ್ಯಸಿಸ್‌ಏಡ್ ಪ್ಯಾಕೇಜ್ ಒಂದು ಇತ್ತು, ಫ್ರೆಂಚ್ ಕಂಪನಿಗಳಿಗೆ ಏಕೆ ಕೊಟ್ಟಿರಿ? ಅವರ ಯೋಗ್ಯತೆ ಏನು? ಇವೆಲ್ಲಾ ಪ್ರಶ್ನೆಗಳಿಗೆ ಉತ್ತರ ಹೇಳಲು ನಾನು ಪ್ರಯತ್ನ ಮಾಡುತ್ತೇನೆ. ಬಹಳ ಮುಖ್ಯವಾದಂತಹ ಪ್ರಶ್ನೆ ಏನು ಎಂದು ಹೇಳಿದರೆ ಈ ಸದನಕ್ಕೆ ಸಂಬಂಧಪಟ್ಟಂತಹ ವಿಚಾರ ಸದನ 8ನೇ ತಾರೀಖು ಸೇರುತ್ತದೆ ಎಂದು ಗೊತ್ತಿದ್ದರೂ ಆದರೂ 11ನೇ ತಾರೀಖು ಅಗ್ರಿಮೆಂಟಿಗೆ ಸಹಿ ಹಾಕಿದ್ದೀರಿ. ಇದು ಬಹಳ ಮೂಲಭೂತವಾದಂತಹ ಪ್ರಶ್ನೆ We cannot ignore the House we cannot take the House for granted. ಯಾವುದಾದರೂ

ನೆಗೋಷಿಯೇಟೆಡ್ ಸೆಟಲ್‌ಮೆಂಟ್ ಅಥವಾ ಸದನದ ಸಭೆ ನಡೆಯತಕ್ಕಂಥ ಸಮಯದಲ್ಲಿ ನಾವು ಪ್ರವೇಶ ಮಾಡುವಾಗ ಸದನ ಸೇರುತ್ತದೆ ಎನ್ನತಕ್ಕಂಥ ನೋಟಿಫಿಕೇಶನ್ ಹೋದ ಮೇಲೆ ಇಂತಹ ಒಂದು ಸಹಿ ಮಾಡಿದ್ದೇವೆ ಎನ್ನುವಂತಹ ಆಪಾದನೆ ಏನು ಇದೆ ಇದು ಸತ್ಯಕ್ಕೆ ಸಂಪೂರ್ಣವಾಗಿ ದೂರವಾಗಿರತಕ್ಕಂಥ ಮಾತು. ಏನು ಹೇಳಿದ್ದೇವೆ? ಸ್ವಲ್ಪ ತಾಳ್ಮೆಯಿಂದ ಅದನ್ನು ಓದಿದರೆ ಗೊತ್ತಾಗುತ್ತದೆ. ಅವರೇ ಓದಿದ್ದು ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ಸುರೇಶ್ ಕುಮಾರ್ ಅವರು "The two companies have furnished their financial report and the bench mark they will achieve during the five year period. The reports are under examination. A negotiating committee is constituted..... ಆ ಸೆಂಟೆನ್ಸ್ ಬಿಟ್ಟು ಬಿಡುತ್ತಾರೆ. Go ahead ಎಂದು ಹೇಳಿದ್ದೀರಿ ಎಂದರೆ ನಾನೇನು ಅನ್ನೋಣ?

".. to negotiate with these two companies". What is that negotiation? Negotiation with the company ತಾವೇನು? ತಾವೇನು ಶಂಕೆ ಪಟ್ಟಿದ್ದೀರಿ, ಆ ಶಂಕೆಗೆ ಯಾವ ಕಾರಣವೂ ಇಲ. ಕಾರಣ ಏಕೆ ಇಲ್ಲ ಎಂದು ಹೇಳುತ್ತೇನೆಂದರೆ ನೆಗೋಷಿಯೇಷನ್ ಈ ಎರಡು ವಿಭಾಗದಲ್ಲಿ ವೆಸ್ಟರ್ನ್ ಮತ್ತು ಸದರನ್ ಪೈಲಟ್ಸ್ ಜೋನ್‌ನಲ್ಲಿ ಏನು ಮಾಡಿದ್ದಾರೆ, ತಮ್ಮ ಗಮನಕ್ಕೆ ತರತಕ್ಕಂಥದ್ದು ಮೂರು ಜನರ ಕಮಿಟಿ ನೆಗೋಷಿಯೇಷನ್ ಮಾಡುವಾಗ ನೆಗೋಷಿಯೇಷನ್ ಏನು Get a French Government's assistance- seeking the French Government's assistance ನೆಗೋಷಿಯೇಷನ್ ಟೇಬಲ್‌ನಲ್ಲಿರತಕ್ಕಂಥ ಫ್ರಾನ್ಸ್ ಸರ್ಕಾರ ಈ ಒಂದು ಕುಡಿಯುವ ನೀರಿನ ಯೋಜನೆ ಅಥವಾ ವಾಟರ್ ಬೋರ್ಡ್ ಮತ್ತು ಸಿವಿರೇಜ್ ಬೋರ್ಡಿನ ಯಾವ್ಯಾವ ಹಂತ ಎಂಬುದನ್ನು ಮುಂದೆ ಹೇಳುತ್ತೇನೆ. ಫ್ರೆಂಚ್ ಸರ್ಕಾರದಿಂದ 200 ಕೋಟಿ ರೂಪಾಯಿಯ ಸಾಲ ಅಲ್ಲ, ಗ್ರಾಂಟ್ ಮಾಡುತ್ತೇವೆಂದು ಹೇಳಿದ್ದಾರೆ. ಆ ಸಹಾಯವನ್ನು ನೆಗೋಷಿಯೇಟ್ ಮಾಡುತ್ತಿದ್ದೇವೆ. " Reduce the operators' fee by Rs. 80 Crores. Reduce the interest charge by Rs. 60 Crores. ಅಂದರೆ ಟೋಟಲ್ ಮೇಂಟೆನೆನ್ಸ್ ಕಾಸ್ಟ್ 340 ಕೋಟಿ ರೂಪಾಯಿಗೆ ಕಡಿಮೆ ಮಾಡುವುದಕ್ಕಾಗಿ ನೆಗೋಷಿಯೇಷನ್ಸ್ ನಡೆಯುತ್ತಿದೆ. The total cost of the delegated contract to the Government of Karnataka as envisaged earlier is Rs, 584 crores. ಅದರಲ್ಲಿ 340 ಕೋಟಿ ರೂಪಾಯಿಗಳು ನೆಗೋಷಿಯೇಟೆಡ್‌ಸೆಟಲ್ ಮೆಂಟ್ ಆದರೆ ಅದಕ್ಕೆ ಬರತಕ್ಕಂಥ ವೆಚ್ಚ ಕೇವಲ 244 ಕೋಟಿ ರೂಪಾಯಿ ಮಾತ್ರ. ಈಗ ಸೋಮಣ್ಣನವರೂ ವಾದ ಮಾಡಿದ್ದಾರೆ ಮತ್ತು ಹಿಂದೆ ಮಂತ್ರಿ ಆಗಿದ್ದಂತಹ ಹಿರಿಯರಾದ ಬಚ್ಚೇಗೌಡರೂ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸೋಮಣ್ಣನವರು ಹೇಳಿದರು, 240 ಕೋಟಿ ರೂಪಾಯಿ ಕೊಟ್ಟು ಬಿಡಿ ನೀವು ಯಾವ ದೇಶಕ್ಕೂ ಹೋಗುವುದು ಬೇಡ ನಾವು ಪೂರೈಸುತ್ತೇವೆಂದು ಹೇಳಿದರು. ಟೋಟಲ್ ಇನ್‌ವೆಸ್ಟ್‌ಮೆಂಟ್ ಕಾಸ್ಟ್ ಇರುವುದು 244 ಕೋಟಿ ರೂಪಾಯಿಗಳು.

ಶ್ರೀ ವಿ. ಸೋಮಣ್ಣ : ಎಂಟೈರ್ ಬೆಂಗಳೂರಿಗೆ ಅದು 240 ಕೋಟಿ ರೂಪಾಯಿಗಳು.

ಶ್ರೀ ಡಿ.ಬಿ. ಚಂದ್ರೇಗೌಡ : ಟೋಟಲ್ ಆಪರೇಷನ್ ಕಾಸ್ಟ್ 240 ಕೋಟಿ ರೂಪಾಯಿ. ಇಲ್ಲಿ ಒಂದು ಕಂಪನಿ ವಿಚಾರ ಅವರು ಹೇಳುತ್ತಾರೆ. ಆಸಿಸ್‌ಏಡ್ ಪ್ಯಾಕೇಜ್ ಕಂಪನಿ ಅವರು 250 ಕೋಟಿ ರೂಪಾಯಿಗೆ ಇಡೀ ಬೆಂಗಳೂರು ನಗರದ್ದು ಎಂದರು. ನೀವು ಈ ಕಂಪನಿಗೆ

584 ಕೋಟಿ ರೂಪಾಯಿ ಕೊಡುವುದಕ್ಕೆ ಹೋಗಿದ್ದೀರಿ. ಇಲ್ಲೇನೋ ವಾಸನೆ ಬರುತ್ತಿದೆ ಎಂದರು. ಏನು ವಾಸನೆ ಬರುತ್ತದೆ? ಈ ಆಸಿಸ್ಏಡ್ ಕಂಪನಿಗೂ ಈ ಡೆಲಿಗೇಟೆಡ್ Management Contract by and between these two pilot projects Company ಗೂ ಇರತಕ್ಕಂಥ ಅತ್ಯಂತ ದೊಡ್ಡ ವ್ಯತ್ಯಾಸವನ್ನು ನಾವು ಕಾಣಬೇಕು. ಬಹಳ ದೊಡ್ಡ ವ್ಯತ್ಯಾಸ ಏನು? ಆಸಿಸ್ಏಡ್ ಪ್ಯಾಕೇಜ್‌ಕಂಪನಿ ವಿಚಾರ ಏನು ಪ್ರಸ್ತಾಪ ಮಾಡುತ್ತಾರೆ? This is purely technical and engineering package. But on the otherhand, what is contained in the delegated management, is total managment consultation, for a period of five years. No handing over, ಅದರಿಂದಾಗಿ ಈ ವ್ಯತ್ಯಾಸವನ್ನು ನಾವು ತಿಳಿದುಕೊಂಡರೆ ಒಳ್ಳೆಯದು. ಏನೋ ನಡೆದು ಹೋಗಿಬಿಟ್ಟಿದೆ ಎನ್ನುವ ವಾದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಆ ನೆಗೋಷಿಯೇಷನ್‌ನಲ್ಲಿ ಒಂದು ವೇಳೆ ಫ್ರೆಂಚ್ ಅಸಿಸ್ಟೆನ್ಸ್ 200 ಕೋಟಿ ರೂಪಾಯಿ ಕೊಡದೇ ಇದ್ದರೆ, ಒಂದು ವೇಳೆ ಅವರು 81 ಕೋಟಿ ರೂಪಾಯಿಗೆ ಇಳಿಸದೆ ಇದ್ದರೆ ಮತ್ತು ಇಂಟರೆಸ್ಟ್ ಗೇಟನ್ನು 60 ಕೋಟಿ ರೂಪಾಯಿಗೆ ಕಡಿಮೆ ಮಾಡದೆ ಇದ್ದರೆ ಏನಾಗುತ್ತದೆ? ಈ ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ, ಮುಕ್ತವಾಗಿದ್ದೇವೆ, ತೆರೆದ ಮನಸ್ಸಿನಿಂದ ಇದ್ದೇವೆ, ನಿಮ್ಮನ್ನು ಕರೆದು ಚರ್ಚೆ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದಕ್ಕೆ ಸರ್ಕಾರದ ಆಜ್ಞೆ ಏಕೆ ಬೇಕು. ಎಂಬುದು ಅರ್ಥವಾಗುತ್ತಿಲ್ಲ. ನಿಮಗೆ ಆಜ್ಞೆ ಮಾಡುವುದಕ್ಕೆ ಆ್ಯಕ್ಟ್‌ನಲ್ಲಿ ಅಥಾರಿಟಿ ಎಲ್ಲಿದೆ?

ಶ್ರೀ ಡಿ.ಬಿ. ಚಂದ್ರೇಗೌಡ : ಆಜ್ಞೆ ಮಾಡಿಲ್ಲವೆಂದು ಹೇಳುತ್ತಿದ್ದೇನೆ. It is only negotiation.

SRI P.G.R. SINDHIA: What is the order you have made on 11.7.2002, that notification?

SRI D.B. CHANDRE GOWDA: Notification is only for negotiation; to constitute a committee of three officers.

SRI S. SURESHKUMAR : For argument sake, let us agree ನೀವು ನೆಗೋಷಿಯೇಟ್ ಮಾಡುವುದಕ್ಕೆ ಒಂದು ಕಮಿಟಿ ಮಾಡಿ, ಅದರಲ್ಲಿ ಪ್ರಿನ್ಸಿಪಲ್ ಸೆಕ್ರೆಟರಿ ಫೈನಾನ್ಸ್ ಡಿಪಾರ್ಟ್‌ಮೆಂಟ್, ಸೆಕ್ರಟರಿ ಟು ದಿ ಗೌರ್ನಮೆಂಟ್ ಲಾ ಡಿಪಾರ್ಟ್‌ಮೆಂಟ್ ಹಾಗೂ ಚೇರ್‌ಮನ್ ಆಫ್ ಬಿಡಬ್ಲ್ಯೂಎಸ್‌ಎಸ್‌ಬಿ ಎಂದು ಮಾಡಿದ್ದೀರಿ ನೀವೇ ಹೇಳುತ್ತೀರಾ BWSSB as part of its goal to provide world class services may entrust, ನನಗೆ ಅರ್ಥವಾಗಿರುವಂತೆ, entrust means handing overs, handing over operation and maintenance of the existing system......

SRI D.B. CCHANDRE GOWDA: Subject to the condition we have laid down in the negotiation.

SRI S. SURESH KUMAR: Operation and maintenance of the existing system to begin with the two private sector operators, ಎಂದು ಪ್ರಿಯಾಂಬಲ್‌ನಲ್ಲಿ ಹೇಳಿದ್ದೀರಿ. ಹಾಗಿದ್ದ ಮೇಲೆ ಅವರಿಗೆ ನಿಮಮ ಎಂಬಯು ಪ್ರಕಾರ

ಮೊದಲನೆ ಸ್ಟೇಜ್‌ನಲ್ಲಿ ರಿಪೋರ್ಟ್ ಕೊಟ್ಟಿದ್ದಾಗಿದ್ದರೆ ನೆಗೋಷಿಯೇಟ್ ಮಾಡುವುದಕ್ಕೆ Why this Government order was necessary? ಈ ಕಮಿಟಿ ಹಾಗೇನೋ on its own course. ಅವರು ಹೋಗಿ ನೆಗೋಷಿಯೇಟ್ ಮಾಡಿ, ಬನ್ನಿ ನಿಮ್ಮ ರಿಪೋರ್ಟ್ ಬಂದಿದೆ, ನೆಕ್ಸ್ಟ್ ಸ್ಟೇಜ್‌ಗೆ ಹೋಗಬೇಕು, ಅದಕ್ಕೆ ನೆಗೋಷಿಯೇಟ್.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಸರ್ಕಾರ ಒಂದು ಕಂಪನಿ ಜೊತೆ ನೆಗೋಷಿಯೇಟ್ ಮಾಡುವುದಕ್ಕೆ ಯಾರು ಹೋಗಬೇಕು? ಯಾವ ಇಲಾಖೆ ಹೋಗಬೇಕು ಎಂಬುದಕ್ಕೆ ನೋಟಿಫಿಕೇಷನ್ ಬೇಡವೇ? ಕೇಳಿ, ಬಚ್ಚೇಗೌಡರು ಒಪ್ಪಿಕೊಂಡರೆ ಆಗಬಹುದು. ಬೇಕಾಗಿರಲಿಲ್ಲ? ಯಾರ ಜೊತೆ ನೆಗೋಷಿಯೇಟ್ ಮಾಡಬೇಕು? In blank should we negotiate? We have to negotiate with atleast assigned officers. Who are they?

ಶ್ರೀ ಎಸ್. ಸುರೇಶ್ ಕುಮಾರ್ : ನಿಮ್ಮ ಎಂಓಯು ನಲ್ಲಿಯೇ ಅದು ಇತ್ತು. ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್ ನೆಗೋಷಿಯೇಷನ್ ಎಲ್ಲಾ ಇತ್ತು. Why this G.O. which is very very conspicuous?

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿ ಏನಾಗಿದೆ ಎಂದರೆ ಅಕ್ಕನ ಮನೆ ಊಟನೂ ಬೇಕು, ಅಕ್ಕಿಯೂ ಖರ್ಚಾಗಬಾರದು. ಅದು ಹೇಗಾಗುತ್ತದೆ. ಬೆಂಗಳೂರಿನಲ್ಲಿ ಒಳ್ಳೆಯ ವಾಟರ್ ಸಪ್ಲೆ ಮ್ಯಾನೇಜ್‌ಮೆಂಟ್ ಹಾಗೂ ಒಳಚರಂಡಿ ವ್ಯವಸ್ಥೆ ಎಲ್ಲಾ ಆಗಬೇಕು, ಆದರೆ ಏನೂ ಖರ್ಚಾಗಬಾರದು. ನಾನು ಹೇಳುತ್ತಿದ್ದೇನೆ, ಅದನ್ನು ಕೊಟ್ಟಿಲ್ಲ. ಅದು ಇನ್ನು ನೆಗೋಷಿಯೇಷನ್ ಸ್ಟೇಜ್‌ನಲ್ಲಿ ಇದೆ.

ಅಧ್ಯಕ್ಷರು : ಮಂತ್ರಿಗಳು ಪೂರ್ತಿ ಮುಗಿಸಲಿ. ಅವರು ಈಲ್ಡ್ ಆದರೆ ತಾವು ಮಾತನಾಡಬಹುದು.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರ ಗಮನಕ್ಕೆ ನಾನು ತರುವುದು ಇಷ್ಟೆ. ತಾವು ಹೇಳಿದಿರಿ ಫ್ರೆಂಚ್ ಕಂಪನಿಯ ಜೊತೆಯಲ್ಲಿ ನೆಗೋಷಿಯೇಟ್ ಮಾಡುವುದಕ್ಕೆ ಜಲಮಂಡಲಿಯ ಮೂವರು ಅಧಿಕಾರಿಗಳನ್ನು ನಾವು ನೇಮಕ ಮಾಡಿದ್ದೇವೆ. ಆ ನೇಮಕ ಮಾಡುವುದಕ್ಕೆ ಮಾತ್ರ ಸರ್ಕಾರದ ಆಜ್ಞೆ ಮಾಡಿದ್ದೇವೆ ಎಂದು ಹೇಳಿದಿರಿ. ಇಲ್ಲಿ ಒಂದು ಗಮನಿಸಬೇಕಾದ ವಿಚಾರ ಏನೆಂದರೆ. 584.40 ಲಕ್ಷ ರೂಪಾಯಿಗಳಲ್ಲಿ ಅವರು ಯಾವ್ಯಾವ ಬಾಬತ್ತಿಗೆ ಎಷ್ಟೆಷ್ಟು ಎಂದು ಕೊಟ್ಟು ಈಗಾಗಲೇ ಅದರ ಎಲ್ಲಾ ಅಂಕಿಅಂಶಗಳನ್ನು ಕೇವಲ ಎರಡು ಸಬ್ ಡಿವಿಜನ್‌ಗಳಿಗೆ ನಿರ್ವಹಣೆ ಮಾಡುವುದಕ್ಕೆ ಪ್ರತಿಯೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ತಾವು ಹೇಳುತ್ತಿರುವುದು 584.40 ಲಕ್ಷ ರೂಪಾಯಿಗಳಲ್ಲಿ ಸುಮಾರು 340 ಕೋಟಿ ರೂಪಾಯಿಗಳನ್ನು ನಮಗೆ ಗ್ರಾಂಟ್‌ನಲ್ಲಿ ಏನು ಕೊಡತಕ್ಕಂಥ ವ್ಯವಸ್ಥೆಯನ್ನು ಕೇಳುತ್ತೇವೆ, ಅದರಲ್ಲಿ ಉಳಿಯತಕ್ಕಂಥಾದ್ದು ಕೇವಲ 246 ಕೋಟಿ ರೂಪಾಯಿ. ಈ 246 ಕೋಟಿ ರೂಪಾಯಿ ಮಾತ್ರ ನಾವು ಅವರಿಗೆ ಭರಿಸಬೇಕಾಗಿರುತ್ತದೆ. ನಾನು ತಮಗೆ ವಿನಂತಿ ಮಾಡುವುದು ಏನೆಂದರೆ ಫ್ರೆಂಚ್ ಕಂಪನಿಯವರು 340 ಕೋಟಿ ರೂಪಾಯಿ ಅಲ್ಲ, 20 ಕೋಟಿ ರೂಪಾಯಿ ನಿಮಗೆ ಮುಫತ್ತಾಗಿ ಗ್ರಾಂಟ್ ಆಗಿ ಕೊಡುವುದಾದರೆ ನಾವು ಯಾವ ರೀತಿ ಬೇಕಾದರೂ ಸ್ವಾಗತ ಮಾಡುತ್ತೇನೆ ಮಾನ್ಯ ಚಂದ್ರೇಗೌಡರು ಹಿರಿಯ ಮುತ್ಸದ್ದಿ ರಾಜಕಾರಣಿ ನಾನು ಇವತ್ತು ಒಂದು ವಿಚಾರ ಹೇಳುತ್ತೇನೆ, 240 ಕೋಟಿ ರೂಪಾಯಿಗೆ ಇಡೀ ಬೆಂಗಳೂರನ್ನು ಸರಿ ಮಾಡಬಹುದು

ಎಂದು ಅವಲೋಕನ ಮಾಡಿ, ಈಗಾಗಲೇ ಎಲ್ಲಾ ಪ್ರಕ್ರಿಯೆ ಪ್ರಾರಂಭವಾಗಿರುವಾಗ ನೀವು ಕೇವಲ 580 ಕೋಟಿ ರೂಪಾಯಿಗೆ ಎಲ್ಲವನ್ನು ಒಪ್ಪಿಕೊಂಡು, ಅದನ್ನು ಗ್ರಾಂಟ್ ಆಗಿ ಕೊಡುತ್ತಾರೆ, ಅನುದಾನವಾಗಿ ಕೊಡುತ್ತಾರೆ ಎಂದರೆ ಒಂದು ಗಾದೆಯಂತೆ 'ಇಮಾಮ್‌ಸಾಬ್‌ಗೂ ಗೋಕುಲಾಷ್ಟಮಿಗೂ ಎಲ್ಲಿಯ ಸಂಬಂಧ' ಎನ್ನುವ ಹಾಗೆ ಫ್ರೆಂಚ್‌ನವರಿಗೂ ಬೆಂಗಳೂರಿನವರಿಗೂ ಏನು ಸಂಬಂಧ ಸ್ವಾಮಿ? ಐದು ದೊಡ್ಡ ನಗರಗಳನ್ನು ಬಿಟ್ಟು, ಈ ನಗರಕ್ಕೆ ಬಂದು ದುಡ್ಡು ಮಾಡುವುದಕ್ಕೆ ಬಂದಿರುವವರಿಗೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ ಆವತ್ತು ಕೂಡ ಕೇಳುವಂತಹ ಪರಿಪಾಠವನ್ನು ಇಟ್ಟುಕೊಂಡಿದ್ದೇವೆ. ಅದು ಈ ಕೆಲಸ ಈ ಸರ್ಕಾರದಿಂದ ಆಗಬಾರದು ಎನ್ನುವ ದೃಷ್ಟಿಕೋನದಿಂದ ನನ್ನ ಕಳಕಳಿಯ ಮನವಿ ನಾನು ಕೂಡ ಸಚಿವನಾಗಿ ಇಂತಹ ಹತ್ತು ಹಲವಾರು ಕಡತಗಳನ್ನು ನೋಡಿರುವುದರಿಂದ ಈ ನಗರಕ್ಕೆ ಮಾರಕವಾಗುವಂತಹ ಬಡವರಿಗೆ ತೊಂದರೆಯಾಗುವಂತಾದ್ದು ಏನಿದೆ, ಅವರು 340 ಕೋಟಿ ರೂಪಾಯಿ ಅಲ್ಲ, 100 ಕೋಟಿ ರೂಪಾಯಿ ಕೊಡುತ್ತೇವೆ ಎಂದು ಫ್ರೆಂಚ್ ಗೌರ್ನಮೆಂಟ್ ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ ನಾನು ತಮ್ಮ ವಿನಂತಿ ಮಾಡುತ್ತೇನೆ ಒಂದು ರೀತಿಯಲ್ಲಿ ಕತ್ತಲ ಕೋಣೆಯಲ್ಲಿ ಎಲ್ಲರನ್ನು ಇಡತಕ್ಕಂಥ ಪರಿಪಾಠ ಆಗಬಾರದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇಷ್ಟೇ ಅಲ್ಲ ಇಂಡೋ ಫ್ರೆಂಚ್ ಪ್ರೊಟೋಕಾಲ್ ಎರಡು ರಾಷ್ಟ್ರಗಳ ಮಧ್ಯ ಇರತಕ್ಕಂಥ ಪ್ರೊಟೋಕಾಲ್ ಯಾವುದನ್ನು ನಾವು ಫೈನಲೈಜ್ ಮಾಡಬೇಕಾದರೂ ನೇರವಾಗಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಫ್ರಾನ್ಸ್ ದೇಶದ ಜೊತೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. Economic affairs Ministry and Urban Development Ministry of Govt. of India.. ಇವೆರಡೂ ಕ್ಲಿಯರ್ ಮಾಡಿ ನೆಗೋಷಿಯೇಷನ್ ಕಂಪ್ಲೀಟ್ ಆದಮೇಲೆ the matter has to come back to the Cabinet. In the usual course, the Government of India - the Economic Affairs Ministry and Finance Ministry doesn't give free licence to any state Government for investment of such an order without going into the details.... ಏನೇನು ಡಿಟೈಲ್ಸ್ ಎಲ್ಲಾ ಕೇಳಿದ್ದಾರೆ, ಇದೆಲ್ಲಾ ಪರಿಸ್ಥಿತಿಯನ್ನು ತಿಳಿದುಕೊಳ್ಳದೆ, ಅವರು ಕೇಳುವುದು 200 ಕೋಟಿ ರೂಪಾಯಿ ಅಲ್ಲ, 20 ಕೋಟಿ ರೂಪಾಯಿ ಎಂದು ನಾವು ನೆಗೋಷಿಯೇಷನ್ ಮಾಡುವುದನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಏನು ಶಂಕೆಗಳಿವೆ ಅವುಗಳನ್ನು ಪರಿಹರಿಸುವುದಕ್ಕೆ ಅಷ್ಟೇ ಪ್ರಯತ್ನ ಮಾಡಿದ್ದೇನೆ. ನೆಗೋಷಿಯೇಷನ್ ಆಗುವ ಕಾಲಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಮ್ಮನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿದ್ದಾರೆ, ಅದನ್ನು ಹೇಳುತ್ತೇನೆ ಬಹಳ ಮುಖ್ಯವಾಗಿ ರೆಕಮೆಂಡೇಷನ್ ಆಫ್ ಟಾಸ್ಕ್‌ಫೋರ್ಸ್ ಈ ಬೋರ್ಡ್‌ಗೆ ಏನು ರಿಫೋರ್ಸ್ ಇವತ್ತು ಈ ಬಿಡಬ್ಲ್ಯೂಎಸ್‌ಎಸ್‌ಬಿ ಪ್ರತಿ ತಿಂಗಳು ನನಗೆ ಅಷ್ಟು ಸರಿಯಾಗಿ ಗೊತ್ತಿಲ್ಲ, ಅವರು ಹೇಳಬೇಕು, ಮೆಂಟೇನೆನ್ಸ್‌ಗೆ 20 ಕೋಟಿ ರೂಪಾಯಿ ಸ್ಪೆಂಟ್ ಮಾಡುತ್ತದೆ. ಮಾಡಬೇಕು, ಇದಕ್ಕೆ ಬೇಕಾಗಿರತಕ್ಕಂಥ 240 ಕೋಟಿ ರೂಪಾಯಿಗಳನ್ನು ಒದಗಿಸಿಕೊಡಿ ಎಂದು ಸರ್ಕಾರಕ್ಕೆ ಸರ್ಕಾರ ಇದನ್ನು ಕೊಟ್ಟಬಿಡಿ, ಬೇರೆ ದೇಶದ ಜೊತೆ ನೆಗೋಷಿಯೇಟ್ ಮಾಡುವುದು ಬೇಡ ಇಲ್ಲಿ ಬಹಳ ಮುಖ್ಯವಾಗಿರತಕ್ಕದ್ದು ಯಾವುದೋ

ಒಂದು ಕಂಪನಿಗೆ ಬೆಂಗಳೂರನ್ನು ತೆಗೆದುಕೊಂಡು ಹ್ಯಾಂಡ್ ಓವರ್ ಮಾಡುತ್ತೇವೆ ಎನ್ನುವಂತಹ ಭಾವನೆ ಇದೆಯಲ್ಲಾ, ಅದಕ್ಕೆ ಯಾವ ಆಧಾರದ ಕೂಡ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದನ್ನು ಕೇಲಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಎನ್‌ಟ್ರಸ್ಟ್ ಎಂದರೆ ಏನು?

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಕೊಡಲಿ.

ಶ್ರೀ ಡಿ.ಕೆ. ಶಿವಕುಮಾರ್ : ಇಷ್ಟೊತ್ತು ನೀವು ಏನು ಹೇಳಿದಿರಿ ಅದನ್ನು ಕೇಳಿದೆವು ಅವರು ಹೇಳುವುದನ್ನು ಗಮನಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಬೆಂಗಳೂರು ನಗರ ಜಗತ್ತಿನಲ್ಲಿ ಬಹಳ ಆಕರ್ಷಣೀಯವಾಗಿ ಇರುವಂತಹ ನಮ್ಮ ದೇಶದ ನಗರ. ಇದು ಆಕರ್ಷಣೀಯವಾಗಿ ಇರಬೇಕು ಎಂದರೆ ಎಲ್ಲಾ ವಿಚಾರಗಳ ಕಡೆ ಸರ್ಕಾರ ಹಾಗೂ ಚುನಾಯಿತ ಸಂಸ್ಥೆಗಳು ಗಮನ ಕೊಡಬೇಕಾಗುತ್ತದೆ. ಇಲ್ಲಿ ಏನು ಕ್ಯುಮ್ಯುಲೇಟಿವ್ ನೆಗ್ಲೆಟ್ ಆಫ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಓವರ್ ಇಯರ್ಸ್ ಇಲ್ಲಿ ಏನಾಗಿದೆ. ಎಂದರೆ ಅವರ ಹತ್ತಿರ ದುಡ್ಡಿಲ್ಲ. ದುಡ್ಡು ಇದ್ದಿದ್ದರೆ ಇಷ್ಟೊಂದು ನೆಗ್ಲಿಜೆನ್ಸಿ ಆಗುತ್ತಿರಲಿಲ್ಲ. ಸಾಕಷ್ಟು ಲೀಕೇಜ್, ಫಿಲ್ಪಿರೇಜ್, ವೇಸ್ಟೇಜ್ ಆಫ್ ವಾಟರ್ ಆಗುತ್ತದೆ. ಇದು ಎಷ್ಟಾಗುತ್ತದೆಂದು ಅವರೇ ಹೇಳಬೇಕು. ಇದು ಶೇಕಡ 30 ರಷ್ಟು ಇದೆ.

6.10 ಪಿ.ಎಂ.

High level non-revenue water ಬೇರೆ ಬೇರೆ ಇದೆ, ದುಡ್ಡು ಇಲ್ಲದೇ ಇರತಕ್ಕಂಥದ್ದು.

ಶ್ರೀ ಪಿ.ಜಿ. ಆರ್. ಸಿಂಧ್ಯ : ನೀರು ಕೊಡಲೇ ಬೇಕಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು, ನಾನು ಇಲ್ಲವೆಂದು ಹೇಳಿದನೆ? ಹೇಗೆ ಕೊಡಬೇಕೆಂಬುದು ಪ್ರಶ್ನೆ, ಪುಕ್ಕಟೆ ಕೊಡಬೇಕೆಂದರೆ ಹೇಗೆ? ಕೊಡಬೇಕೆಂಬುದು ನಿಜ. Intermittent supply of water water rates, ಇವೆಲ್ಲಾ ವಿಚಾರಗಳು, ಪಬ್ಲಿಕ್ ಹೆಲ್ತ್, ಬೆಂಗಳೂರು ನಗರಕ್ಕೆ ಬಂದರೆ ಯಾವ ರಿಸ್ಕ್ ಇಲ್ಲದೇ ನೀರು ಕುಡಿಯುವುದಕ್ಕೆ, ಬೆಂಗಳೂರು ನಗರಕ್ಕೆ ಬಂದವರು, ಬಾಟಲ್ ನೀರನ್ನು ಕುಡಿಯುವುದಕ್ಕೂ ಹೆದರುತ್ತಾರೆ, ಇಂತಹ ಕಡೆ ಶುದ್ಧವಾದಂತಹ ನೀರನ್ನು ಕೊಡಬೇಕೆಂಬ ಆಲೋಚನೆಯನ್ನು ಸ್ವಾಗತಿಸಬೇಕಾಗಿತ್ತು. ನೀವು ಹೋದ ಹಾಗೆ ನಾವು ಹೋಗುವುದಿಲ್ಲ, ನಾವು ಎಲ್ಲಾದರೂ ಸ್ವಲ್ಪ ಹೋದರೂ ನೀವು ಹಿಡಿಯುತ್ತೀರಿ. ಆದರೆ ನೀವು ಬಹಳ ದೂರ ಹೋದರೆ ನಾವು ಹಿಡಿಯುವುದಕ್ಕೆ ಆಗುವುದಿಲ್ಲ, ಏಕೆಂದರೆ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಇವತ್ತು ನಮಗೆ ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ, ಆದುದರಿಂದ ಬಿಟ್ಟು ಕೊಡಿ. Broad vision embeded in the total project, ಏನು? ಕಸ್ಟಮರ್ ಎಂದರೆ ನೀರನ್ನು ಕುಡಿಯುವಂತಹ ಫಲಾನುಭವಿಗಳನ್ನು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವಂತಹದ್ದನ್ನು ಗಮನದಲ್ಲಿಟ್ಟುಕೊಂಡು ಸರಿಯಾದಂತಹ ರೀತಿಯಲ್ಲಿ ಬಿಲ್ಲಿಂಗ್ ಮಾಡುವಂತಹ ವ್ಯವಸ್ಥೆಯನ್ನು ಜಾರಿಗೆ ತಂದು, ಮತ್ತೆ ಎಫಿಶಿಯಂಟ್ ಕಲೆಕ್ಷನ್ ಅನ್ನು ಇಟಟುಕೊಂಡು ಒಂದು speedy grievances redressal cell ಎಂದು ಮಾಡಿ ಇವೆಲ್ಲವನ್ನು ಒಟ್ಟಿಗೆ ಸೇರಿಸಿ, ನೀರನ್ನು

ಕೊಡಬೇಕೆಂದರೆ ಎಲ್ಲಾ ಮುಫತ್ತಾಗಿ ಸಿಗುತ್ತದೆ, ಬಡವರಿಗೆ ನೀರನ್ನು ಕೊಡಬೇಕು, ಕೊಡಬಾರದೆಂದು ಯಾರು ಹೇಳಿದರು? ಬೆಂಗಳೂರಿನಲ್ಲಿರುವಂತಹ ಬಡವರು ಯಾರು? ಎಲ್ಲಿಂದ ಬಂದರು? ಹೇಗೆ ಬಂದರು? ಆ ಮಾತು ಬೇರೆ ಆಗಿನ ಬೆಂಗಳೂರಿಗೂ ಈಗಿನ ಬೆಂಗಳೂರಿಗೂ ಇರುವಂತಹ ವ್ಯತ್ಯಾಸ ಏನು? ಒಂದು ಕಾಲದಲ್ಲಿ ನಾವು ಇಲ್ಲಿ ಓದುವುದಕ್ಕೆ ಬಂದಾಗ ಇದ್ದಂತಹ ಬೆಂಗಳೂರಿಗೂ, ಈಗ ಇರುವಂತಹ ಬೆಂಗಳೂರಿಗೂ ಹೋಲಿಕೆ ಮಾಡಿದರೆ, ಈಗ ಒಂದು ಪ್ಯಾರಿಸ್ ಪಟ್ಟಣವಾಗಿದೆ. ಹಾಗೆ ಹೋಲಿಕೆ ಮಾಡಿಕೊಳ್ಳಿ ಆದುದರಿಂದ ಈಗ ಇಲ್ಲಿ ವ್ಯವಸ್ಥೆಗಳು ಜಾಸ್ತಿ ಆಗಬೇಕು, ಈ ವ್ಯವಸ್ಥೆಗಳನ್ನು ಮಾಡಲು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಯಾವುದಾದರೂ ಒಂದು ರೂಪದಲ್ಲಿ ಹಣವನ್ನು ತರಬೇಕು. ರಸ್ತೆಗಳಿಗೆ ಹಣ ತರಬೇಕು, ನಾನು ಪ್ರಾರಂಭದಲ್ಲೆ ಹೇಳಿದೆ. This is only for negotiation. ಫೈನಲ್ ಅಗ್ರಿಮೆಂಟ್‌ಗೆ ಸರ್ಕಾರದ ಪ್ರಾವಿಜನ್ ಬೇಕೋ ಎಂಬ ಬಗ್ಗೆ I will get it examined.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದ ಬಗ್ಗೆ ಹೆಚ್ಚಿಗೆ ಓದಿರಲಿಲ್ಲ, ಕೇವಲ ಒಂದೆರಡು ನಿಮಿಷಗಳಲ್ಲಿ ಈ ಸರ್ಕಾರ ಯಾವ ರೀತಿ ಮಾಡಿದೆ, ಎನ್ನುವಂಥಾದ್ದನ್ನು ಸ್ವಲ್ಪ ಗ್ರಾಸ್ಪ್ ಮಾಡುವಂಥಾದ್ದಕ್ಕೆ ಅವಕಾಶ ಸಿಕ್ಕಿತು. ಇಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ, ಹಿಂದೆ ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಸಿಲ್ಕ್ ಎಕ್ಸ್‌ಚೇಂಜ್ ಆಕ್ಟ್ ತೆಗೆದರು. ಮುಖ್ಯಮಂತ್ರಿಗಳ ಪತ್ರವೊಂದನ್ನು ನೋಡಿದೆ. "temporarily suspend the enforcement cell."

ಶ್ರೀ ಎಂ. ಮಹದೇವ್ : ತಾವು ಸದನಕ್ಕೆ ತಪ್ಪು ಮಾಹಿತಿಯನ್ನು ದಯವಿಟ್ಟು ಕೊಡಬೇಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಮುಖ್ಯಮಂತ್ರಿಯವರು ಬರೆದಿರುವುದನ್ನು ನೋಡಿದ್ದೇವೆ, ಇಲ್ಲಿ ನಾವು ಮಂತ್ರಿಗಳಾಗಿ ಕೆಲಸ ಮಾಡಿರುವುದರಿಂದ, ಆ್ಯಕ್ಟ್ ಎಂದರೆ ಏನು ರೂಲ್ಸ್ ಎಂದರೆ ಏನು? ಬಿ.ಓ.ಎಂದರೆ ಏನು ಎಂಬುದನ್ನು ಸ್ವಲ್ಪ ಅರ್ಥ ಮಾಡಿರೊಂಡು, ಅನುಭವದ ಮೇಲೆ ಹೇಳುತ್ತಿದ್ದೇವೆ.Unless that silk Exchange Act is amended, he should not have written on the letter. ಆ ರೀತಿಯಾಗಿ ಇದನ್ನು ಮಾಡಿದ್ದೀರಿ, ಎಂದು ನನಗನ್ನಿಸುತ್ತಿದೆ.

ಶ್ರೀ ಎಂ. ಮಹದೇವ್ : ಮಾನ್ಯ ಮುಖ್ಯಮಂತ್ರಿಯವರಿಗೆ ಆ ಅಡ್‌ಮಿನಿಸ್ಟ್ರೇಟೀವ್ ಪವರ್ಸ್ ಇದೆ.

ಶ್ರೀ ಬಿ. ಸೋಮಶೇಖರ್ : ಆ ರೀತಿಯಾಗಿ ಇದು ಆಗಿದೆ ಎಂದು ನನಗನ್ನಿಸಿದೆ. ಈಗ ಏನಾಗಿದೆ ಎಂದರೆ ಬೆಸಿಕಲಿ, ಬಿಡಬ್ಲ್ಯೂಎಸ್‌ಎಸ್‌ಬಿ ಆ್ಯಕ್ಟ್ ಎಂದು ಏನಿದೆ, ಅದರಲ್ಲಿ ಪ್ರೈವೇಟ್ ಏಜೆನ್ಸಿಗೆ ಅವಕಾಶವಿಲ್ಲ, ಮೊದಲನೆಯದಾಗಿ If at all the government is going to enter into private participation, the first thing is, it should have brought an amendment to the BWSSB Act. ಮಾನ್ಯ ಸಿಂಧ್ಯಾರವರು ಅದನ್ನೇ ಹೇಳಿದರು, ಈಗ ತಾವು ಏನೇನು ಹೇಳುತ್ತಾ ಇದ್ದೀರಿ, it is only to negotiate with the two private companies, This comes only after the G.O. ಇನ್ನೊಂದು ವಿಷಯವನ್ನು ಯಾರೂ ಗಮನಿಸಿರಲಿಲ್ಲ, ನಾಲ್ಕೈದು ವಿಷಯಗಳನ್ನು ಇಲ್ಲಿಹಾಕಿದ್ದೀರಿ, completion of

negotiations and submit to the Board to bring down the operation the entire arbitration which may arise due to the difference between the parties shall be held in Bangalore; to amend suitably the BWSSB Act to enable private sector participation in the delegated management contract In fact it should have been done first, then Government Order should have been issued. So, this G.O. is ultra vires. ಇದೆಲ್ಲವನ್ನು ಹೇಳಿ ಕೊನೆಗೆ ಆರನೇ ವಿಷಯವನ್ನು ಏನು ಹೇಳಿದ್ದೀರಿ ಇದು ನನಗೆ ಅರ್ಥವಾಗುತ್ತದೆ, ತಮಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಆಯಿತು, ಬಿಡಿ ಹೇಳಿದ್ದೀರಲ್ಲಾ.... Ultra vires. ಎಂದರೆ ಕೋರ್ಟ್‌ಗೆ ಹೋಗುತ್ತದೆ, ಕೋರ್ಟ್‌ನಲ್ಲಿ ಹೊಡೆದಾಕುತ್ತಾರೆ.

ಶ್ರೀ ಬಿ. ಸೋಮಶೇಖರ್ : ಇದರಲ್ಲಿ ಏನು ತೋರಿಸುತ್ತದೆಂದರೆ something is cooking up....

ಅಧ್ಯಕ್ಷರು : ಆಯಿತು, ಅದನ್ನು ಬಿಡಿ.

ಶ್ರೀ ಬಿ. ಸೋಮಶೇಖರ್ : ದಯವಿಟ್ಟು ಮೊದಲು ಅಮೆಂಡ್‌ಮೆಂಟ್ ತನ್ನಿ.

ಅಧ್ಯಕ್ಷರು : ಈಗ ನೀವು ಹೇಳಿದಂತಹ ವಿಚಾರವೆಲ್ಲವನ್ನು ಅವರು ಹೇಳಿದ್ದಾರೆ, ಚಂದ್ರೇಗೌಡರೆ, ತಾವು ಮುಂದುವರೆಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸೋಮಶೇಖರ್ ಓದಿದ್ದು ಅಮೆಂಡ್‌ಮೆಂಟ್ to amend suitably the BWSSB Act to enable private sector participation in the delegated management contract. ಈಗ ನಾವು ಮಾಡಿರತಕ್ಕಂಥಾದ್ದು ಏನು? ನೀವು ಮೊದಲು ಓದಿ, ಆರ್ಡರ್‌ಗಳನ್ನು ಅರ್ಥಂಬರ್ಥ ಅನುಕೂಲ ಸಿಂಧುವಾಗಿ ಓದಬಾರದು, ಎಲ್ಲರಿಗೂ ಗೊತ್ತಾಗುವ ಹಾಗೆ ಪಾರದರ್ಶಕವಾಗಿ ಓದೋಣ, ಪ್ರಿಯಾಂಬಲ್‌ನಲ್ಲೆ ನಾವು ಏನು ಹೇಳಿದ್ದೇವೆ.

'Government is pleased to accord approval in principle to permit BWSSB to go ahead with the negotiations."

We have only permitted BWSSB to go ahead with the negotiations with the two operators. even for this, if we say that the Act should be amended, at a stage when all the negotiation is complete.

SRI. B. SOMASHEKHAR: To enter into negotiation, where is the statutory sanction?

SRI D.B. CHANDREGOWDA : It is between the BWSSB and the company.

SRI P.G.R. SINDHIA : Why do you issue notification?

SRI D.B. CHANDREGOWDA : Because directly BWSSB cannot negotiate with the French Government or foreign firms. They have to be routed through their national Governments. They have to be routed through the State Government and the State Government have

also to be routed through the national Government. This is exactly what we have said.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಇಲ್ಲಿ ಖಾಸಗೀಕರಣ ಸಹಬಾಗಿತ್ವಕ್ಕಾಗಲೀ, ಖಾಸಗೀಕರಣಕ್ಕಾಗಲೀ, ಪ್ರಾವಿಜನ್ ಇಲ್ಲದೇ ಇರುವಂತಹ ಸಂದರ್ಭದಲ್ಲಿ ಎರಡು ಅರ್ಜಿಗಳನ್ನು ತೆಗೆದುಕೊಂಡು ಅದನ್ನು ನೀವು ನೆಗೋಶಿಯೇಟ್ ಮಾಡಿ ಎನ್‌ಟ್ರಸ್ಟ್ ಮಾಡಿ ಎಂದರೆ ಅದರ ಉದ್ದೇಶವೇನು ಎಂಬುದನ್ನು ಮಾನ್ಯ ಕಾನೂನು ಸಚಿವರು ಈ ಸದನದಲ್ಲಿ ಹತ್ತಾರು ಬಾರಿ ಪ್ರತಿನಿಧಿಸಿರುವವರು ತಿಳಿಸಬೇಕು ನಮ್ಮ ಉದ್ದೇಶವಿರುವಂಥಾದ್ದು ಇಲ್ಲಿ ಟ್ಯಾಕ್ಸ್ ಕಟ್ಟುವಂತಹ ಗ್ರಾಹಕ ಯಾರಿದ್ದಾನೆ, ಅವನಿಗೆ ತೊಂದರೆ ಕೊಡುವಂತಹ ವ್ಯವಸ್ಥೆ ಏನಿದೆ, ಅದನ್ನು ನಿಲ್ಲಿಸಬೇಕು ಎಂಬುದು ಇಲ್ಲಿ ತಾವು ಹೇಳಿದ ಬಿಲ್ಲಿಂಗ್, ಆಡಿಟಿಂಗ್, ವಾಟರ್ ಆಡಿಟಿಂಗ್ ಇದೆ, ವಾಟರ್ ಅಧಾಲತ್ ಇದೆ. ಪ್ರತಿಯೊಂದು ತಾಂತ್ರಿಕವಾಗಿ ಈ ಜಲಮಂಡಲಿ ಈ ನಗರದ ನಾಗರೀಕರಿಗೆ ಯಾವ ರೀತಿಯಾಗಿ ನಿರ್ವಹಣೆ ಮಾಡಬಹುದಾದಂತಹ ಎಲ್ಲಾ ಸ್ವಾಯತ್ತತೆಯನ್ನು ಪಡೆದಿರುವಂತಹ ಸಂದರ್ಭದಲ್ಲಿ, ಕಾನೂನೇ ಇಲ್ಲದಿರುವಂಥಾದ್ದನ್ನು, ಪ್ರಾವಿಜನ್ ಇಲ್ಲದೇ ಇರುವಂಥಾದ್ದನ್ನು, ಯಾವುದೋ ಎರಡು ಅರ್ಜಿಗಳನ್ನು ಕೊಟ್ಟರು, ಆ ಅರ್ಜಿಗಳನ್ನು ನಾವು ತೆಗೆದುಕೊಂಡು ಎನ್‌ಟ್ರಸ್ಟ್ ಮಾಡಿ 340 ಕೋಟಿ ರೂಪಾಯಿಗಳನ್ನು ಅನುದಾನವಾಗಿ ಕೊಡುತ್ತೇವೆನ್ನುವಂತಹ ಪರಿಪಾಠ ಏನಾದರೂ ಇದಾದರೆ ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆ. ಆದುದರಿಂದ ದಯಮಾಡಿ ಯೋಚನೆ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೆಗೋಶಿಯೇಷನ್‌ಗೆ ನೋಟಿಫಿಕೇಶನ್ ಇದೆ, ಅದನ್ನು ಪೆಂಡಿಂಗ್ ಇಡಿ, ಎಂದರೆ ಏನು ಇದರ ಅರ್ಥ?

SRI. B. SOMASHEKHAR: I am sorry, as a Law Minister, I think, you are not pleading a good case here. You should not have defended the G.O. There is not statutory sanction.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮನ್ನು ಡಿಫೆಂಡ್ ಮಾಡಬೇಕೇ? ನೀವು ಹೇಳಿದ್ದೇ ಸತ್ಯ ಆಗಿದೆ, ಎಂದು ನೀವು ಏನು ಹೇಳುತ್ತೀರಿ.....

ಶ್ರೀ ಬಿ. ಸೋಮಶೇಖರ್ : ನಾನು ಹೇಳಿದ್ದು ಸತ್ಯವೆಂದು ನಾನು ಹೇಳುತ್ತಾ ಇಲ್ಲ.

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೆ, ತಾವು ಉತ್ತರವನ್ನು ಮುಂದುವರೆಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, We have only permitted the BWSSB to negotiate with these two operators for the following conditions. ಅವರು 341 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುವುದಕ್ಕೆ ಏನೇನು ವ್ಯವಸ್ಥೆಗಳು ಬೇಕೋ ಅದರ ಜೊತೆಗೆ ನೆಗೋಶಿಯೇಟ್ ಮಾಡಿ If it can be pushed through or what is the impediments, we will try to cure it ಎರಡನೆಯದಾಗಿ, ಇಲ್ಲಿ ಅವರು ಬಳಸಿದಂತಹ ಶಬ್ದವನ್ನು ಬಳಸುವುದಕ್ಕಾಗುವುದಿಲ್ಲ. ಏಕೆಂದರೆ ಅವರು ದೊಡ್ಡ ಗೌಡರು, ಆದ್ದರಿಂದ ದೊಡ್ಡ ಶಬ್ದವನ್ನು ಬಳಸಿದ್ದಾರೆ. ಅದು ಒಂದು ಬೋಗಸ್ ಕಂಪನಿ ಎಂದು ಹೇಳಿದ್ದಾರೆ. ತಾವು ನಗರ ಸಭೆಯಲ್ಲಿ ನಿಮಗೆ ಏನಾಗುತ್ತದೆ, ಏನು ಬೀಳುತ್ತದೆಂದು ಕೇಳಿದ್ದೀರಿ, ನಿಮಗೆ ಚುನಾವಣೆಯಲ್ಲಿ ಏನು ಬತ್ತೋ, ಮುಂದೆ ನಮಗೂ ಅದೇ ಬೀಳುತ್ತೆ, ಇದು

ಏನು ಕಂಪನಿ ಕಾಮೆಂಟ್ ಅಂಡ್ ಅನಾಲಿಸಸ್‌ನಲ್ಲಿ ಎರಡು ಶಬ್ದಗಳನ್ನು ನಿಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

"France may be struggling to build national champions in banking, oil and defence, but there is one industry where French companies are undisputed world leaders and are likely to remain so for years to come, the fast changing water business."

ನೀವು ಯಾವುದನ್ನು ಕೋಟ್ ಮಾಡಿದ್ದರೋ ಆ ಕಂಪನಿ ಅಮೇರಿಕನ್ ಕಂಪನಿ, ಅಲ್ಲಿಗೂ ಮತ್ತು ಇಲ್ಲಿಗೂ ಇರತಕ್ಕಂತಹ ದೊಡ್ಡ ವ್ಯತ್ಯಾಸವೆಂದರೆ....

ಶ್ರೀ ಎಸ್. ಸುರೇಶ್‌ಕುಮಾರ್ : ಡೆಲ್ಲಿಯ ಯಾವುದೋ ಒಂದು ಕಂಪನಿ ಎಲ್ಲಾ ಎಂಎಲ್‌ಎಗಳಿಗೆ ಅವರ ಬಯಾಡೇಟಾ ಜೊತೆ ವಿವರವನ್ನು ಕಳುಹಿಸಿದ್ದಾರೆ. 3500-00 ರೂಪಾಯಿಗಳನ್ನು ಕಳುಹಿಸಿ you will be considered as the best citizen of India, ಎಂದು

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ದಿಬೆಸ್ಟ್ ಪಾರ್ಲಿಮೆಂಟೇರಿಯನ್ ಎಂದು ಚಂದ್ರೇಗೌಡರಿಗೆ ಹೇಳುತ್ತಾರಲ್ಲಾ ಹೇಳುವವರ ಮೇಲೆ ಡಿಪೆಂಡ್ ಆಗುತ್ತದೆ.

SRI D.B. CHANDRE GOWDA: But despite the fact ತಾವು ಹೇಳಿದ ಹಾಗೆ if the proposed amendments are sequel to the permission.ಹೇಳುತ್ತಿರತಕ್ಕ ತೊಂದರೆಗಳು ಏನಿವೆ. I will get it examined and come back.

SRI B. SOMASHEKHAR: This is not statutory. This is not relevant at all.

SRI D.B. CHANDRE GOWDA: Till such time they will negotiate Coming back to company's performance, ಅವರು ಫರ್‌ಫಾರ್ಮೆನ್ಸ್ ಬಗ್ಗೆ ನಾನು ಜವಾಬ್ದಾರಿಯಿಂದ ಸದನಕ್ಕೆ ಹೇಳಬೇಕು ಸ್ಯೂಯೇಜ್ ಮತ್ತು ಈ ವಿವೆಂಡಿ ಕಂಪನಿಗಳ ಪರ್‌ಫಾರ್ಮೆನ್ಸ್ ಏನು? ಒಂದು ಕಂಪನಿ 120 ದೇಶದಲ್ಲಿ ಸ್ಯೂಯೇಜ್ ಮ್ಯಾನೇಜ್‌ಮೆಂಟ್ ಅನ್ನು ಮಾಡಿದೆ, ವಿವೆಂಡಿ ಕಂಪನಿ ಒಂದರಲ್ಲೇ 2 ಲಕ್ಷದ 16 ಸಾವಿರ ನೌಕರರಿದ್ದಾರೆ, 26 ಬಿಲಿಯನ್ ಡಾಲರ್ಸ್ ಟರ್ನ್‌ಓವರ್, population served 110 million. ಇದು ಒಂದು ಕಂಪನಿ ಇನ್ನೊಂದು ಸ್ಯೂವೇಜ್ ಕಂಪನಿ, 2 ಲಕ್ಷದ 20 ಸಾವಿರ ಜನ ನೌಕರರಿದ್ದಾರೆ, 38 ಬಿಲಿಯನ್ ಡಾಲರ್ಸ್ ಟರ್ನ್‌ಓವರ್, ಬೋಗಸ್ ಕಂಪನಿ ಎಂದು ಹೇಳಿದ್ದಕ್ಕೆ ನಾವು ಇದನ್ನೆಲ್ಲಾ ಹೇಳಬೇಕಾಗಿದೆ. 120 ಮಿಲಿಯನ್ ಪಾಪುಲೇಷನ್‌ಗೆ ಸರ್ವ್ ಮಾಡುತ್ತಿದ್ದಾರೆ. 120 ದೇಶಗಳಲ್ಲಿ ಇವರು ಆಕ್ಟೀವ್ ಆಗಿದ್ದಾರೆ, So, these are not bogus companies. For fun sake this government has not negotiated with them nor we ask BWSSB to negotiate with the bogus firms.

ಎಲ್ಲವೂ ಟ್ರಾನ್ಸ್‌ಫರೆಂಟ್ ಆಗಿ ಇದೆ, ಅಂತಿಮವಾಗಿ ತಮ್ಮ ಮುಖೇನ ಅವರಿಗೆ ತಿಳಿಸುವುದಕ್ಕೆ ಇಚ್ಛಿಪಡುವುದೇನೆಂದರೆ, ಇಷ್ಟೆಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರ ಎಲ್ಲದಕ್ಕಿಂತ

ಹೆಚ್ಚಾಗಿ ಈ BWSSB ಬಗ್ಗೆ ಅವರೇನು ಭೀತಿಗಳನ್ನು ವ್ಯಕ್ತ ಮಾಡಿದ್ದಾರೆ, ಅವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅಂತಿಮ ತೀರ್ಮಾನಕ್ಕೆ ಮುನ್ನ ಮಾನ್ಯ ಹಿರಿಯ ಸದಸ್ಯರುಗಳ ಜೊತೆಗೆ ಚರ್ಚೆ ಮಾಡಲಾಗುವುದೆಂದು ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳೇನು ರಿಪೋರ್ಟ್ ಬಂದ ಮೇಲೆ ತಮ್ಮ ಜೊತೆ ಚರ್ಚೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಫೈನಲ್ ಆಗಿ ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕಿಂತ ಮುಂಚೆ ನಿಮ್ಮೊಡನೆ ಚರ್ಚೆ ಮಾಡುತ್ತೇನೆಂದು ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಅಲ್ಲಿಗೆ ನಿಲ್ಲಿಸಿ ಬಿಡೋಣ. ಆದುದರಿಂದ, ಆ ಚರ್ಚೆಗಾದರೂ ಅವಕಾಶವಿಟ್ಟುಕೊಳ್ಳೋಣ, ಇದರಲ್ಲಿ ಯಾವ ಹ್ಯಾಂಕಿ ಪ್ಯಾಂಕಿನೂ ಇಲ್ಲ, ಅದರೊಳಗೆ ಇದನ್ನು ತೂರಿ ನೋಡುವುದು ಬೇಡ ಎಂದು ಮಾನ್ಯ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಅವರು ಇಷ್ಟು ಹೊತ್ತು ಆ ಕಂಪನಿಯ ಪ್ರೊಫೈಲ್ ಓದಿದರು ಎಂದು ಕಾಣುತ್ತದೆ, ನಾನೂ ಕೂಡ ನನ್ನ ಬಯೋಡೇಟಾದಲ್ಲಿ ಬಹಳ ಹಾಕಿಕೊಳ್ಳುತ್ತೇನೆ, ನಾನು ಆವಾಗಲೇ ರೆಫರ್ ಮಾತ್ರ ಮಾಡಿದೆ ಪಾರ್‌ಚೂನ್‌ದ್ದು 10ನೇ ಜೂನ್ 2002 ಒಂದು ತಿಂಗಳ ಹಿಂದಿನದು.

"Vivend's stock has plunged, debt has soared.... workers want CEO Jean Mary Messier's head. Now what?

Judging from the charter, Vivend Universal's Chairman and CEO Jean Mary Messier headed for guillotine. He is being ousted by his French Director who are planning to break-up the company. Throughout his stay... whisper of bankruptcy or atleast a major liquidity crisis. The trumpet of gossip is some of it may be put at rest at Vivendi's May 29th board meeting speaks to the mess messier has made ನಾನು ಬಂದು ಓದುತ್ತೇನೆ ಅಷ್ಟೆ. ಇದು ನನ್ನದಲ್ಲ The Emperor says, Emperor means Vivendi's CEO, the banking source who has known him for years; The cmperor is down to his bikini underpants.

SRI. D.B.CHANDRE GOWDA: Thank you for the information. I also keep that information before finalising.

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಪ್ರಶ್ನೆ ಇರುವುದಿಷ್ಟೆ, ನಾನು ನೇರವಾಗಿ ಬರುತ್ತಿದ್ದೇನೆ, ಸುತ್ತಿಬಳಸಿ ಮಾತನಾಡುವ ಅಗತ್ಯವಿಲ್ಲ; 1964 ರಲ್ಲಿ ಬಿಡಬ್ಲ್ಯೂ ಎಸ್‌ಬಿ ಆ್ಯಕ್ಟ್ ಅನ್ನು ರಚನೆ ಮಾಡಲಾಗಿದೆ, ಆ ಆಕ್ಟ್ ಪ್ರಕಾರ ನಡೆದುಕೊಳ್ಳಬೇಕು ನೀವು ಬಿಡಬ್ಲ್ಯೂ ಎಸ್‌ಎಸ್‌ಬಿ ಮಾರಾಟ ಮಾಡುಬಿಟ್ಟಿದ್ದೀರೆಂದು ಹೇಳುವಷ್ಟು ದಡ್ಡರು ನಾವೇನಲ್ಲ ಆ ಆ್ಯಕ್ಟ್ ಪ್ರಕಾರ ಪ್ರೈವೇಟ್ ಪಾರ್ಟಿಸಿಪೇಟ್‌ಗೆ ಜೋನ್ಸ್‌ಗಳಲ್ಲಿ 2 ಜೋನ್ಸ್ ಅನ್ನು ಈ ಎರಡು ಬೋಗಸ್ ಕಂಪನಿಗಳಿಗೇನು ಕೊಟ್ಟಿದ್ದೀರಿ, ಇವುಗಳೊಡನೆ ನೆಗೋಸಿಯೇಷನ್ ಮಾಡಿಕೊಳ್ಳಲು ನಿಮಗೆ ಅಧಿಕಾರವಿಲ್ಲ; ಈ ಅಜ್ಞೆಯನ್ನು ಇವತ್ತು ತಡೆ ಹಿಡಿಯಬೇಕೆಂದು ನಾವು ದರಣಿ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಜನತಾದಳ (ಎಸ್) ಹಾಗೂ ಜನತಾದಳ (ಯು) ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದರು)

ಶ್ರೀ ಬಿ.ಡಿ. ಚಂದ್ರೇಗೌಡ : ವಿವೆಂಡಿ ಎನ್‌ವೈರ್‌ನಮೆಂಟ್ ಬಗ್ಗೆ ತಾವು ಚರ್ಚೆಮಾಡಿದ್ದೀರಿ. We are negotiating with Vivendi Environment not Vivendi Universal.

SRI S. SURESH KUMAR : I stand by what I have stated.

ಅಧ್ಯಕ್ಷರು : ಸುರೇಶ್ ಕುಮಾರ್‌ರವರೇ, ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಮುಂಚೆ ನಿಮ್ಮೆಲ್ಲರನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಳ್ಳಲಾಗುವುದೆಂದು ಹೇಳಿದ ಮೇಲೆ ಮತ್ತೇನು ಇದೆ?

ಶ್ರೀ ಎಸ್. ಸುರೇಶ ಕುಮಾರ್ : ಈ ಮಹಾನಗರವನ್ನು ಕಾಡುತ್ತಿರುವ ಒಂದು ಸಮಸ್ಯೆ ಉತ್ತರವನ್ನೇ ಕೊಡಲಿಲ್ಲ, ಪ್ರಶ್ನೆ ಇರುವುದು, ಈ ಸರ್ಕಾರ ಆದೇಶದಲ್ಲಿ ಬಹಳ ಸುಲಭವಾಗಿ ಒಂದು ಪದ ಅಥವಾ ವಾಕ್ಯದ ಹಿಂದೆ ರಕ್ಷಣೆ ತೆಗೆದುಕೊಳ್ಳುತ್ತಿದ್ದೀರಿ, ನೀವು ಹೇಳುತ್ತಿರುವುದೇನೆಂದರೆ accord approval in principle to BWSSB to go about with the negotiations. ನೆಗೋಷಿಯೇಷನ್ ಎಂದರೆ ಈ ಕಂಪನಿ ಬೇಕೋ ಬೇಡವೆಂದು ಅರ್ಥವೇ? ಅಲ್ಲ ಅದೇ ಕಂಪನಿ ಆಗಬೇಕೆಂದು ಇಲ್ಲೇ ಮುಂದೆ ಇದೆ.

SRI D.B. CHANDRE GOWDA: In entirety, negotition is not purely for ABC...

ಅಧ್ಯಕ್ಷರು : ಸರ್ಕಾರ ತೃಪ್ತಿಕರವಾದ ಉತ್ತರ ಕೊಟ್ಟಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಸರ್ಕಾರ ನಗರದ ನಾಗರೀಕರಿಗೆ ಮೋಸ ಮಾಡುತ್ತಿದೆ, ಈ ಸರ್ಕಾರದ ಆದೇಶ ನಗರದ ನಾಗರೀಕರಿಗೆ ಮರಣಶಾಸನವಾಗುತ್ತದೆ, ದಯವಿಟ್ಟು ಈ ಸರ್ಕಾರಿ ಆದೇಶವನ್ನು ವಾಪಸ್ ತೆಗೆದುಕೊಳ್ಳಲೇಬೇಕು.

(ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದರು)

ಅಧ್ಯಕ್ಷರು : ಸಫಿಸಿಯೆಂಟ್ ರಿಪ್ಲೈ ಕೊಡಲಾಗಿದೆ, ಇದನ್ನು ಫೈನಲ್ ಮಾಡುವುದಕ್ಕಿಂತ ಮುಂಚೆ ನಿಮ್ಮನ್ನೆಲ್ಲಾ ಕರೆದು ಚರ್ಚೆ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ, ಏನೂ ಆಗುವುದಿಲ್ಲ, ಸೋಮಣ್ಣನವರೇ ಸುಮ್ಮನಿರಿ.

ಶ್ರೀ ವಿ. ಸೋಮಣ್ಣ : ನಾನೂ ಸಚಿವರನಾಗಿ ಕೆಲಸ ಮಾಡಿದ್ದೇನೆ. ನಾನು ಈ ಬೆಂಗಳೂರು ನಗರದ ಶಾಸಕನಾಗಿ ದಯಮಾಡಿ ನಾನು ಹೇಳುವ ಎರಡು ಮಾತುಗಳನ್ನು ಕೇಳಿ, ಕಾನೂನು ಮತ್ತು ಸಂಸದೀಯ ಸಚಿವರು, ಏನು ಆ್ಯಕ್ಟ್‌ನಲ್ಲಿ ಪ್ರಾವಿಜನ್ನೆ ಇಲ್ಲದಿರುವ ಸಂದರ್ಭದಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿಯ ಕಾನೂನಿನಲ್ಲಿ ಅವಕಾಶವೇ ಇಲ್ಲದಿರುವ ಸಂದರ್ಭದಲ್ಲಿ ಎರಡು ಅರ್ಜಿಗಳನ್ನು ತೆಗೆದುಕೊಂಡು ಬೆಂಗಳೂರು ನಗರದ 65 ಲಕ್ಷ ಜನತೆಗೆ ಎಲ್ಲೋ ಒಂದು ಕಡೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಈ ರೀತಿ ಮೀನಾಮೇಷ ಮಾಡುವುದು ಸಾಧುವಾದ ಕ್ರಮವಲ್ಲ, ನಾನು ನೊಂದು ಈ ನಗರದ ಜನತೆಯ ಪರವಾಗಿ ಧರಣಿ ಮಾಡುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ವಿ. ಸೋಮಣ್ಣನವರು ಸದನದ ಬಾವಿಯಲ್ಲಿ ಧರಣಿ ನಡೆಸಿದರು.)

ಅಧ್ಯಕ್ಷರು : ಚಂದ್ರೇಗೌಡರೇ, ಮುಖ್ಯಮಂತ್ರಿಗಳ ಪರವಾಗಿ ತಾವು ವಿಧೇಯಕವನ್ನು ಮಂಡನೆ ಮಾಡಿ.